

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 19 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 241 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ದ್ವೇಷ ಭಾಷಣಕ್ಕೆ ಕಡಿವಾಣ

- ವಿಧಾನಸಭೆಯಲ್ಲಿ ಅನ್ಯ ಗದ್ದಲದ ನಡುವೆ ಅಡ್ಡಿ ಇಲ್ಲದೆ ವಿಧೇಯಕ ಅಂಗೀಕಾರ
- ನಿಯಮ ಉಲ್ಲಂಘಿಸಿದರೆ ಕನಿಷ್ಠ 1; ಗರಿಷ್ಠ 7 ವರ್ಷ ಜೈಲು ಶಿಕ್ಷೆ ಜೊತೆಗೆ ಲಕ್ಷ ದಂಡ
- 'ದ್ವೇಷ' ಸಾರಿದರೆ ಮಾಧ್ಯಮಗಳಿಗೂ ಕುತ್ತು; ಪುಸ್ತಕದಲ್ಲಿ ಪ್ರಸ್ತಾಪವಿದ್ದರೆ ಬ್ಯಾನ್!
- ವಿಧೇಯಕ ಪ್ರತಿ ಹರಿದು ಆಕ್ರೋಶ ವ್ಯಕ್ತಪಡಿಸಿದ ವಿಪಕ್ಷ ನಾಯಕ ಆರ್.ಅಶೋಕ್

ಬೆಳಗಾವಿ, ಡಿ.18– ದ್ವೇಷ ಭಾಷಣಕ್ಕೆ ತಡೆ ಹಾಕುವ ನಿಟ್ಟಿನಲ್ಲಿ 'ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ 2025' ವಿಧಾನ ಸಭೆಯಲ್ಲಿ ಗುರುವಾರ ಅಂಗೀಕಾರಗೊಂಡಿತು.



ವಿಪಕ್ಷಗಳ ವಿರೋಧ ಹಾಗೂ ಸದನದ ಬಾವಿಯಲ್ಲಿ ಧರಣಿ ನಡುವೆ ಹೆಚ್ಚಿನ ಚರ್ಚೆಗೆ ಅವಕಾಶ ಆಗದಂತೆ ಮಸೂದೆ ಅಂಗೀಕಾರಗೊಂಡಿತು. ವಿಧೇಯಕದ ಬಗ್ಗೆ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಜನ ಸಮಾಜಕ್ಕೆ ನೋವಾಗುವ ರೀತಿಯಲ್ಲಿ ಮಾತುಗಳನ್ನು ಆಡುತ್ತಿದ್ದಾರೆ. ಇದರ ಪ್ರಮಾಣ ಜಾಸ್ತಿಯಾಗಿದೆ. ಅದರ ಪರಿಣಾಮವಾಗಿ ಸಮಾಜದಲ್ಲಿ ಕೊಲೆಗಳು, ಹೊಡೆದಾಟಗಳು ನಡೆದಿವೆ. ಇದನ್ನು ನಿಯಂತ್ರಣ ಮಾಡಬೇಕಾಗಿದೆ ಎಂದರು. ಸಾಮಾಜಿಕ, ರಾಜಕೀಯ ಸಭೆಗಳಲ್ಲಿ ಆಡುವ ದ್ವೇಷದ ಮಾತುಗಳು ಮತ್ತೊಂದು ಸಮುದಾಯದ ಮೇಲೆ ಪರಿಣಾಮ ಬೀರುತ್ತಿದೆ. ದ್ವೇಷ ಭಾಷಣದಲ್ಲಿ ಮತ್ತೊಂದು ಸಮುದಾಯದ ಬಗ್ಗೆ ಕೆಟ್ಟ ಮಾತುಗಳನ್ನು ಆಡಲಾಗುತ್ತಿದೆ. ಇಂತಹ ದ್ವೇಷ ಭಾಷಣ ಮಾಡುವ ವ್ಯಕ್ತಿಗಳಿಗೆ ಎಷ್ಟು ದಿನ ನಿರ್ಬಂಧ ಹೇರಲು ಸಾಧ್ಯ ಹೀಗಾಗಿ ಕಾನೂನು ತರಲಾಗಿದೆ ಎಂದು ವಿವರಿಸಿದರು.

ಹತ್ತು ವರ್ಷದ ಬದಲಾಗಿ 7 ವರ್ಷ ಶಿಕ್ಷೆ: ದ್ವೇಷ ಭಾಷಣ ಪುನರಾವರ್ತನೆಗೆ ಗರಿಷ್ಠ ಶಿಕ್ಷೆ 10 ವರ್ಷದ ಬದಲಾಗಿ 7 ವರ್ಷ ಜೈಲು ಶಿಕ್ಷೆ ಎಂದು ತಿದ್ದುಪಡಿ ■ 6ನೇ ಪುಟಕ್ಕೆ

ಸಾಮಾಜಿಕ ಬಹಿಷ್ಕಾರಕ್ಕೂ ಮೂರು ವರ್ಷ ಜೈಲು; 1 ಲಕ್ಷ ರೂ. ದಂಡ

ಬೆಳಗಾವಿ, ಡಿ.18– ಯಾವುದೇ ವ್ಯಕ್ತಿ, ಕುಟುಂಬ, ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಿದರೆ 1 ಲಕ್ಷ ರೂಪಾಯಿವರೆಗೂ ದಂಡ ಹಾಗೂ ಮೂರು ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನೂ ವಿಧಿಸಲು ಹಾಗೂ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿ ಕೊಳ್ಳಲು ಅವಕಾಶವಿರುವ ಮಸೂದೆಗೆ ವಿಧಾನಸಭೆ ಗುರುವಾರ ಸರ್ವಾನುಮತದಿಂದ ಅನುಮೋದನೆ ನೀಡಿತು.




ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಮಸೂದೆಯನ್ನು ಚರ್ಚೆಗೆ ಮಂಡಿಸಿದರು. ಬಳಿಕ ಮಾತನಾಡಿದ ■ 6ನೇ ಪುಟಕ್ಕೆ

ವಿಧೇಯಕದಲ್ಲಿ ಏನಿದೆ

ದ್ವೇಷ ಭಾಷಣ ಪ್ರಸರಣೆ, ಪ್ರಕಟಣೆ, ಪ್ರಚಾರ ತಡೆಯಲು ವಿಧೇಯಕ ತರಲಾಗಿದೆ. ನಿರ್ದಿಷ್ಟ ವ್ಯಕ್ತಿ, ಸಮೂಹ, ಸಂಸ್ಥೆಗಳ ವಿರುದ್ಧ ದ್ವೇಷ ಹುಟ್ಟಿಸುವ ಅಪರಾಧಗಳ ತಡೆಗೆ ವಿಧೇಯಕದಲ್ಲಿ ಅವಕಾಶ. ಮೊದಲ ಬಾರಿಗೆ ದ್ವೇಷ ಭಾಷಣ, ದ್ವೇಷ ಅಪರಾಧಗಳಿಗೆ ಕನಿಷ್ಟ 1 ವರ್ಷ, ಗರಿಷ್ಟ 7 ವರ್ಷದವರೆಗೆ ಜೈಲು, 50 ಸಾವಿರ ರೂ ದಂಡ. ಅಪರಾಧ ಪುನರಾವರ್ತನೆ ಆದರೆ ಕನಿಷ್ಟ 2 ವರ್ಷದಿಂದ ಗರಿಷ್ಠ 7 ವರ್ಷದವರೆಗೆ ಜೈಲು ಶಿಕ್ಷೆ, 1 ಲಕ್ಷ ರೂ ದಂಡ. ದ್ವೇಷ ಭಾಷಣ ಮಾಡಿ ಕೇಸ್ ಬಿದ್ದರೆ ಅದು ಜಾಮೀನು ರಹಿತ ಪ್ರಕರಣವಾಗಲಿದೆ. ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಮೂಲಕ ದ್ವೇಷ ಭಾಷಣಗಳ ವಿಚಾರಣೆಗೆ ಅವಕಾಶ.

ದ್ವೇಷ ಭಾಷಣಗಳ ಪ್ರಕರಣಗಳನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಉಪಪೊಲೀಸ್ ವರಿಷ್ಠಾಧಿಕಾರಿ ದರ್ಜೆಗಿಂತ ಕಡಿಮೆ ಇಲ್ಲದ ಯಾರೇ ಪೊಲೀಸ್ ಅಧಿಕಾರಿಯು ಮಾಹಿತಿ ಸ್ವೀಕರಿಸಿದರೆ ವಿಚಾರಣೆ ಮಾಡಿ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಅವಕಾಶ. ಈ ಕಾಯ್ದೆಯಡಿ ದ್ವೇಷ ಭಾಷಣಗಳಿಗೆ ನೊಂದಾಯಿತ ಅಥವಾ ನೊಂದಾಯಿತವಲ್ಲದ ಸಂಘ–ಸಂಸ್ಥೆಗಳೂ ಹೊಣೆಗಾರರಾಗಿರುತ್ತಾರೆ.

'ಮಿತ್ರ'ನ ಮಿಂಚು –ಸತೀಶ್ ಆಚಾರ್ಯ



ಪಾರಿವಾಳಗಳಿಗೆ ಕಂಡಕಂಡಲ್ಲಿ ಆಹಾರ ಹಾಕಿದರೆ ದಂಡದ ಜೊತೆಗೆ ಜೈಲು ಶಿಕ್ಷೆ



ಬೆಂಗಳೂರು, ಡಿ.18– ಇತ್ತೀಚೆಗೆ ಸಾರ್ವಜನಿಕ ಸ್ಥಳಗಳಲ್ಲಿ ಪಾರಿವಾಳಗಳಿಗೆ ಆಹಾರ ನೀಡುವವರ ಸಂಖ್ಯೆ ಹೆಚ್ಚಾಗಿದ್ದು, ಇದರಿಂದಾಗಿ ಪಾರಿವಾಳಗಳ ದಟ್ಟಣೆ ಹೆಚ್ಚಾಗುತ್ತಿದೆ. ಪರಿಣಾಮವಾಗಿ ಅನೈರ್ಮಲ್ಯ ಹೆಚ್ಚಾಗುತ್ತಿದ್ದು, ಅನಾರೋಗ್ಯ ಸಮಸ್ಯೆ ಎದುರಾಗಿದೆ. ಇದಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಈಗ ಹೊಸ ನಿಯಂತ್ರಣ ಮಾರ್ಗ ಸೂಚಿಗಳನ್ನು ಹೊರಡಿಸಿದೆ.

ಈ ಕುರಿತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಪಾರಿ ವಾಳಗಳಿಗೆ ಆಹಾರ ನೀಡುವುದರಿಂದ ಅವುಗಳ ದಟ್ಟಣೆ ಹೆಚ್ಚಾಗಿದೆ. ಪರಿಣಾಮ ಅವುಗಳ ಮಲ–ಮೂತ್ರದಿಂದ ಸೋಂಕು ಹರಡುವುದು, ಉಸಿರಾಟ ತೊಂದರೆ ಸೇರಿದಂತೆ ಶ್ವಾಸಕೋಶ ಸಂಬಂಧಿತ ಗಂಭೀರ ಆರೋಗ್ಯ ಸಮಸ್ಯೆಗಳಾಗುತ್ತಿವೆ. ■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಕೇಸ್

ತನಿಖೆ ಇನ್ನೂ ಪೂರ್ಣಗೊಂಡಿಲ್ಲ; ಎಸ್‌ಪಿಪಿ

ವಿಚಾರಣೆ ಡಿ.23ಕ್ಕೆ ಮುಂದೂಡಿಕೆ

ಬೆಂಗಳೂರು, ಡಿ.18– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಕೋಟ್ಯಾಂತರ ಮೌಲ್ಯದ ನಿವೇಶನಗಳನ್ನು ಅಕ್ರಮವಾಗಿ ಪಡೆದ ಆರೋಪ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರ ವಿರುದ್ಧ ದಾಖಲಾಗಿರುವ ದೂರಿನ ತನಿಖೆಯನ್ನು ಪೂರ್ಣಗೊಳಿಸಲು ವಿಳಂಬ ಮಾಡುತ್ತಿರುವ ಲೋಕಾಯುಕ್ತ ಪೊಲೀಸರ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀವ್ರ ಆಕ್ರೋಶ ವ್ಯಕ್ತಪಡಿಸಿ ಡಿ.18ರೊಳಗೆ ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸುವಂತೆ ತಾಕೀತು ಮಾಡಿತ್ತು. ಆದರೆ ಇಂದು ಮತ್ತೆ ವಿಚಾರಣೆ ನಡೆಸಿದಾಗಲೂ ಅಂತಿಮ ವರದಿ ತಯಾರಾಗಿಲ್ಲ. ಅರ್ಧವಷ್ಟೇ ರೆಡಿಯಾಗಿದೆ ಎಂದು ಲೋಕಾಯುಕ್ತ ಪೊಲೀಸರು ಹೇಳಿದ್ದು ಮತ್ತೆ ನ್ಯಾಯಾಲಯ ವಿಚಾರಣೆಯನ್ನು ಡಿ.23ಕ್ಕೆ ಮುಂದೂಡಿದೆ.



ತನಿಖೆ ಇನ್ನೂ ಪೂರ್ಣಗೊಂಡಿಲ್ಲ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರ ಮುಂದೆ ಪ್ರಕರಣದ ವಿಚಾರಣೆ ನಡೆದಿದ್ದು, ಪ್ರಕರಣದ ತನಿಖೆ ಪ್ರಗತಿ ಮತ್ತು ಅಂತಿಮ ವರದಿ ಸಲ್ಲಿಕೆಗೆ ಸಂಬಂಧಿಸಿದಂತೆ ಮಹತ್ವದ ಚರ್ಚೆಗಳು ನಡೆಯಿತು. ಈ ಪ್ರಕರಣ ದಲ್ಲಿ ತನಿಖೆ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸುವಂತೆ ನ್ಯಾಯಾಲಯ ಈಗಾಗಲೇ ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ಇಂದೇ ಬಿ–ರಿಪೋರ್ಟ್ ಕುರಿತು ಆದೇಶ ಹೊರ ಬರುವ ಸಾಧ್ಯತೆ ಇದೆ ಎಂಬ ನಿರೀಕ್ಷೆ ಇತ್ತು. ಆದರೆ ತನಿಖೆ ಇನ್ನೂ ಪೂರ್ಣಗೊಳ್ಳದ ಕಾರಣ ನ್ಯಾಯಾಲಯ ಯಾವುದೇ ಅಂತಿಮ ಆದೇಶ ನೀಡದೆ ವಿಚಾರಣೆಯನ್ನು ಮುಂದೂಡಿದೆ. ವಿಚಾರಣೆಯ ವೇಳೆ ಲೋಕಾಯುಕ್ತ ಪೊಲೀಸ್ ಎಸ್ಪಿ ಉದೇಶ್ ಅವರು ಇವತ್ತಿನ ವರೆಗೆ ನಡೆದಿರುವ ತನಿಖೆಯ ಪ್ರಗತಿ ವರದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರಾಗಿ, ತನಿಖೆಯ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಿದರು. ಈ ವೇಳೆ ವಿಶೇಷ ಸರ್ಕಾರಿ ಅಭಿಯೋಜಕ (ಎಸ್‌ಪಿಪಿ) ■ 6ನೇ ಪುಟಕ್ಕೆ



ಸಂಗೀತ ವಿವಿ ಆವರಣದಲ್ಲಿ ಸಂವಿಧಾನ ಸಮರ್ಪಣಾ ದಿನಾಚರಣೆ



ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಮೈಸೂರು, ಡಿ.18(ಎಂಕೆ)– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯದ ಆವರಣದಲ್ಲಿ ಮಹಾಬೆಳಕು ಸಂಸ್ಥೆ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಹಯೋಗದೊಂದಿಗೆ ಸಂವಿಧಾನ ಸಮರ್ಪಣಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಪ್ರಬಂಧ ಸ್ಪರ್ಧೆ ವಿಜೇತರಾದ ಚಂದ್ರಕಲಾ (ಪ್ರಥಮ), ಮನೋಜ್ (ದ್ವಿತೀಯ), ಜಯಸೂರ್ಯ (ತೃತೀಯ) ಹಾಗೂ ಎಂ.ಎಸ್.ಸಂಧ್ಯಾ ರಾಣಿ ಮತ್ತು ಸಿಂಚನಾ(ಸಮಾಧಾನಕರ) ಅವರಿಗೆ ನಗದು ಬಹುಮಾನ ಹಾಗೂ ಭಾರತೀಯ ಸಂವಿಧಾನ ಪುಸ್ತಕ ನೀಡಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಕತ್ತಲೆಯನ್ನು ದೂರ ಮಾಡಿ, ಅರಿವಿನ ದಾರಿ ತೋರಿದ ಚೇತನರು. ನೆಲ್ಸನ್ ಮಂಡೇಲಾ ಅವರು ತಮ್ಮ ಹೋರಾಟದ ಮೂಲಕ ಆಫ್ರಿಕಾದ ಜನತೆಗೆ ಸೂರ್ಯರಾದಂತೆ, ಅಂಬೇಡ್ಕರ್ ರವರು ಭಾರತೀಯರಿಗೆ ಸೂರ್ಯರಾಗಿದ್ದಾರೆ ಎಂದು ಸ್ಮರಿಸಿದರು. ರಂಗಕರ್ಮಿ ರಾಜಶೇಖರ ಕದಂಬ, ಕೆಮಹೇಶ್, ಆರ್.ಮಂಗಳ, ಶ್ರೀನಿವಾಸ್ ಪಾಲಹಳ್ಳಿ, ಬಿ.ಆರ್.ರಾಜೇಶ್, ಮಹಾಬೆಳಕು ಅಧ್ಯಕ್ಷೆ ಕಾತ್ಯಾಯಿನಿ ಯಶೋಮಿತ್ರ ಮತ್ತಿತರರಿದ್ದರು.

ಪರಿಶಿಷ್ಟರ ಮೇಲೆ ದೌರ್ಜನ್ಯ ನಡೆದರೆ ಕೂಡಲೇ ಕ್ರಮ ಜರುಗಿಸಿ

ಅಧಿಕಾರಿಗಳಿಗೆ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸೂಚನೆ



ಸಮಾಜ ಕಲ್ಯಾಣ ಇಲಾಖೆ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡೆಯಿತು.

ಮೈಸೂರು, ಡಿ.18(ಎಂಕೆ)– ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಮೇಲೆ ಯಾವುದೇ ದೌರ್ಜನ್ಯ ಕಂಡು ಬಂದರೆ ಎಫ್.ಐ.ಆರ್ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಭರವಸೆ ನೀಡಿದರು.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಎಸ್‌ಸಿಪಿ/ಟಿಎಸ್‌ಪಿ ಅನುದಾನದಲ್ಲಿ ಮಹಾನಗರ ಪಾಲಿಕೆ ವತಿಯಿಂದ 77 ಸಮುದಾಯ ಭವನಗಳನ್ನು ನಿರ್ಮಿಸಲು ಸಮಿತಿ ರಚಿಸಲಾಗುತ್ತಿದೆ. ಹೊಲಿಗೆ ಯಂತ್ರದ ವಿತರಣೆ ಬದಲು ಲ್ಯಾಪ್‌ಟಾಪ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ಕಾಟ್ ಹಾಗೂ ಬೆಡ್‌ಗಳನ್ನು ನೀಡಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ನಗರಪಾಲಿಕೆ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿ ಇಂಜಿನಿಯರಿಂಗ್, ಎಂಬಿಬಿಎಸ್ ಹಾಗೂ ಪೋಸ್ಟ್ ಗ್ರಾಜುಯೇಟ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುವುದು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಿಯಾಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಸಮಿತಿ ಸದಸ್ಯ ಚಿಕ್ಕಜವರಯ್ಯ ಮಾತನಾಡಿ, ಎಸ್‌ಸಿಪಿ/ಟಿಎಸ್‌ಪಿ ಅನುದಾನ ಸಕಾಲದಲ್ಲಿ ವೆಚ್ಚವಾಗುತ್ತಿಲ್ಲ. ಅರ್ಜಿ ಹಾಕಿದ ಫಲಾನುಭವಿಗಳಿಗೆ ಸಾಲ–ಸೌಲಭ್ಯ ದೊರೆಯುತ್ತಿಲ್ಲ. ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಕೊರೆಸಿದ್ದರೂ ವಿದ್ಯುತ್ ಸೌಲಭ್ಯ ಕಲ್ಪಿಸಿಲ್ಲ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಜಮೀನನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಸಮಿತಿ ಸದಸ್ಯರಾದ ರವಿಕುಮಾರ್, ಎಸ್.ಬಸವರಾಜು, ಡಿಸಿಪಿ ಬಿಂಧುಮಣಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮತ್ತಿತರರಿದ್ದರು.

ಮುಖ್ಯಮಂತ್ರಿ ಚಂದ್ರು, ಅಂಶಿಗೆ ಶ್ರೀ ಕೃಷ್ಣ ಆಲನಹಳ್ಳಿ ಪ್ರಶಸ್ತಿ

ಡಿ.25 ರಂದು ಕನ್ನಡ ರಾಜ್ಯೋತ್ಸವ; ಪ್ರಶಸ್ತಿ ಪ್ರದಾನ




ಮುಖ್ಯಮಂತ್ರಿ ಚಂದ್ರು | ಅಂಶಿ ಪ್ರಸನ್ನಕುಮಾರ್

ಮೈಸೂರು, ಡಿ. 18– ಖ್ಯಾತ ಚಲನಚಿತ್ರ ನಟ ಮುಖ್ಯಮಂತ್ರಿ ಚಂದ್ರು ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರಿಗೆ ರಾಜ್ಯ ಮಟ್ಟದ ಶ್ರೀ ಕೃಷ್ಣ ಆಲನಹಳ್ಳಿ ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನ ಜನಪರ ಸಾಹಿತ್ಯ ಪರಿಷತ್ತು ವತಿಯಿಂದ ಡಿ. 25ರ ಬೆಳಗ್ಗೆ 9ಕ್ಕೆ ಎಚ್.ಡಿ. ಕೋಟೆ ತಾಲೂಕಿನ ಆಲನಹಳ್ಳಿಯ ಎಸ್‌ಸಿಎಂಎಸ್ ಶಾಲಾ ಆವರಣದಲ್ಲಿ ಏರ್ಪಡಿಸಿರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಧ್ಯಕ್ಷ ಡಾ.ಎಂ. ಮಹೇಶ್ ಚಿಕ್ಕಲ್ಲೂರು ತಿಳಿಸಿದ್ದಾರೆ.

ಶಾಸಕ ಅನಿಲ್ ಚಿಕ್ಕಮಾದು ಸಮಾರಂಭ ಉದ್ಘಾಟಿಸುವರು. ಶ್ರೀ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ಅಧ್ಯಕ್ಷತೆ ವಹಿಸುವರು.

ವಿಧಾನ ಪರಿಷತ್ತಿನ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ ಪ್ರಶಸ್ತಿ ಪ್ರದಾನ ಮಾಡುವರು. ಭಾರತೀಯ ಸೇನೆಯ ಪ್ರಾದೇಶಿಕ ಸೇನಾಧಿಕಾರಿ ಭವ್ಯಾ ನರಸಿಂಹಮೂರ್ತಿ ಲಂಚ್ ಬ್ರೇಕ್ ಕಿರುಚಿತ್ರ ಪೋಸ್ಟರ್ ಬಿಡುಗಡೆ ಮಾಡುವರು. ವಿನುತಾ ಶ್ರೀಕೃಷ್ಣ ಆಲನಹಳ್ಳಿ ಅವರು ವಿಶೇಷ ಅತಿಥಿಯಾಗಿ ಭಾಗವಹಿಸುವರು. ಮುಖ್ಯಅತಿಥಿಯಾಗಿ ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯ ನಿರ್ದೇಶಕ ಚಂದ್ರಶೇಖರ್, ಹಾಸ್ಯ ಕಲಾವಿದ ಮೈಸೂರ್ ಆನಂದ್, ಪ್ರದ್ಯುಮ್ನ ಶ್ರೀ ಕೃಷ್ಣ ಆಲನಹಳ್ಳಿ, ಕೃತಿಕಾ ಶ್ರೀ ಕೃಷ್ಣ ಆಲನಹಳ್ಳಿ ಭಾಗವಹಿಸುವರು. ನಂತರ ನಡೆಯುವ ಕವಿಗೋಷ್ಠಿಯಲ್ಲಿ ಕವಿಗಳಾದ ವಿನೋದ, ಪರಮೇಶ ಕೆ. ಉತ್ತನಹಳ್ಳಿ, ಮಾರುತಿ ಪ್ರಸನ್ನ, ಕಾತ್ಯಾಯಿನಿ ಭಾಗವಹಿಸುವರು.

ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟ



ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟಕ್ಕೆ ಮೈಸೂರು ವಿವಿ ಕುಲಸಚಿವ (ಪರಿಕ್ಷಾಂಗ) ಡಾ.ಎನ್.ನಾಗರಾಜ ಚಾಲನೆ ನೀಡಿದರು.

ಮೈಸೂರು, ಡಿ.18(ಎಂಕೆ)– ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟ ನಡೆಯಿತು.

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಮೈಸೂರು ವಿವಿ ಕುಲಸಚಿವ(ಪರಿಕ್ಷಾಂಗ) ಡಾ.ಎನ್.ನಾಗರಾಜ ಮಾತನಾಡಿ, ಅಧ್ಯಯನದ ಜೊತೆಗೆ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಶಿಸ್ತಿನ ಮನಸ್ಥಿತಿ ರೂಪುಗೊಳ್ಳುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಪ್ರತಿನಿತ್ಯ ಒಂದಲ್ಲ ಒಂದು ಕ್ರೀಡೆಯಲ್ಲಿ ತೊಡಗಿಕೊಳ್ಳುವಂತೆ ಕರೆ ನೀಡಿದರು.

ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಎಂ.ಡಿ. ಗೋಪಿನಾಥ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಯಾರು ಯಾರೊಂದಿಗೂ ಹೋಲಿಕೆ ಮಾಡಬಾರದು. ಕ್ರೀಡಾ ಮನೋಭಾವದಿಂದ ಸ್ಪರ್ಧಿಸಿ ಬಹುಮಾನವನ್ನು ತಮ್ಮದಾಗಿಸಿಕೊಳ್ಳಬೇಕೆಂದು ಪ್ರೋತ್ಸಾಹಿಸಿದರು.

ಬಳಿಕ ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳ ಗೌರವ ಅಧ್ಯಕ್ಷ ಪ್ರೊ.ಎಂ.ಎಸ್.ಕೆ ನರಹರಿ ಬಾಬು, ಉಪಾಧ್ಯಕ್ಷ ಎಸ್. ಬಾಲಾಜಿ, ಸಹ ಕಾರ್ಯದರ್ಶಿ ಕೆ.ಎನ್.ಫಣೀಶ, ಆಡಳಿತ ಮಂಡಳಿ ಸದಸ್ಯರಾದ ಡಾ. ನಳಿನಿ ಚಂದರ್, ಬಿ.ಮೋಹನ್, ಡಾ.ವಾಸುಕಿ, ರಾಮಚಂದ್ರಭಟ್, ಡಾ.ಜಿ.ಆರ್ ಕವಿತ, ವೈ.ಆರ್.ರಮೇಶ ಮತ್ತಿತರರಿದ್ದರು.

ಯಾಚೇನಹಳ್ಳಿಯಲ್ಲಿ ಡಿ.29ಕ್ಕೆ ವಿಶ್ವಮಾನವ ಧರ್ಮದ ಮೊದಲ ಮಹಾ ಅಧಿವೇಶನ

ಮೈಸೂರು, ಡಿ.18(ಎಂಕೆ)– ಟಿ.ನರಸೀಪುರ ತಾಲೂಕು ಯಾಚೇನಹಳ್ಳಿಯ ವಿವೇಕಾನಂದ ನಗರದಲ್ಲಿರುವ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಶಾಲಾ ಆವರಣದಲ್ಲಿ ಡಿ.29 ರಂದು ವಿಶ್ವಮಾನವ ಧರ್ಮದ ಮೊದಲ ಮಹಾ ಅಧಿವೇಶನ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರದ ಶ್ರೀ ನಾಥಾನಂದನಾಥ ಸ್ವಾಮೀಜಿ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜಗತ್ತು ಸಂಘರ್ಷಮಯ ವಾತಾವರಣದಿಂದ ಬಳಲುತ್ತಿದೆ. ಜನರಿಗೆ ನೆಮ್ಮದಿ ಇಲ್ಲವಾಗಿದೆ. ದೇವರು, ಧರ್ಮದ ಹೆಸರಿನಲ್ಲಿ ಜನಸಾಮಾನ್ಯರ ತಲೆಯಲ್ಲಿ ಮೌಢ್ಯಗಳನ್ನು ತುಂಬಿ ದಾರಿ ತಪ್ಪಿಸುವುದನ್ನು ತಪ್ಪಿಸಲು ವಿಶ್ವಮಾನವ ಧರ್ಮ ಪರ್ಯಾಯ ಮಾರ್ಗವಾಗಿದೆ ಎಂದು ತಿಳಿಸಿದರು.

ರಾಷ್ಟ್ರಕವಿ ಕುವೆಂಪು ಅವರ ಪಂಚ ಸೂತ್ರಗಳಾದ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಯೇ ವಿಶ್ವಮಾನವ ಧರ್ಮದ ತಿರುಳಾಗಿದ್ದು, ಬೆಂಗಳೂರಿನ ವಿಶ್ವಮಾನವ ಧರ್ಮ ಜಾಗೃತಿ ವೇದಿಕೆಯು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮತ್ತಿತರ ವಿಚಾರವಂತರ ನೇತೃತ್ವದಲ್ಲಿ ಕುವೆಂಪು ಅವರ ತಾತ್ವಿಕ ಆಶಯಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಕೇಂದ್ರ ಸರ್ಕಾರ ನಡೆಸಲಿರುವ ಜನಗಣತಿ ವೇಳೆ ವಿಶ್ವಮಾನವ ಧರ್ಮಕ್ಕೆ ಮಾನ್ಯತೆ ಕೊಡುವಂತೆ ಮನವಿ ಮಾಡಲು ಈ ಮಹಾ ಅಧಿವೇಶನ ನೆರವಾಗಲಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ನಾನಾ ಕಡೆ ನಡೆಯುವ ಸಮಾವೇಶಗಳಲ್ಲಿ ವಿಶ್ವಮಾನವ ಧರ್ಮದ ಮಾನ್ಯತೆಗಾಗಿ ಒತ್ತಾಯಿಸಲಿದ್ದೇವೆ ಎಂದು ಮಾಹಿತಿ ನೀಡಿದರು.

ಹಾಗೆಯೇ ಯಾಚೇನಹಳ್ಳಿಯಲ್ಲಿ 1.50 ಕೋಟಿ ರೂ. ವೆಚ್ಚದಲ್ಲಿ ಕುವೆಂಪು ಸ್ಮಾರಕ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 10 ಸಾವಿರ ಪುಸ್ತಕಗಳ ಗ್ರಂಥಾಲಯ, ಕುವೆಂಪು ಚಿತ್ರ ಗ್ಯಾಲರಿ, ಸಭಾಂಗಣ ನಿರ್ಮಿಸಲಾಗುತ್ತಿದ್ದು, 2 ತಿಂಗಳಲ್ಲಿ ಉದ್ಘಾಟನೆಯಾಗಲಿದೆ ಎಂದರು. ಪ್ರಗತಿಪರ ಚಿಂತಕ ವೈ.ಎನ್. ಶಂಕರೇಗೌಡ, ಹಿರಿಯ ಪತ್ರಕರ್ತ ಚಂದ್ರಶೇಖರ್ ದ.ಕೋ. ಹಳ್ಳಿ, ಕನ್ನಡ ಉಪನ್ಯಾಸಕ ಉಮೇಶ್ ದಡಮಹಳ್ಳಿ ಉಪಸ್ಥಿತರಿದ್ದರು.

ಮೈಸೂರಿನ ಖ್ಯಾತ ವೈದ್ಯ ಡಾ.ವಿ. ಲಕ್ಷ್ಮಿನಾರಾಯಣರಿಗೆ ಸನ್ಮಾನ



ಮೈಸೂರು, ಡಿ.18(ಎಂಕೆ)– ಬೆಂಗಳೂರಿನ ಎಪಿಐ ಭವನದ ಡಾ.ಕೆ.ಎಸ್.ಷಡಕ್ಷರಪ್ಪ ಸಭಾಂಗಣದಲ್ಲಿ ಡಿ.23ರಂದು ಅಸೋಸಿಯೇಷನ್ ಆಫ್ ಫಿಸಿಶಿಯನ್ ಇಂಡಿಯಾ ವತಿಯಿಂದ ಹಮ್ಮಿಕೊಂಡಿರುವ 'ವೈದ್ಯರ ದಿನಾಚರಣೆ' ಯಲ್ಲಿ ಮೈಸೂರಿನ ಖ್ಯಾತ ವೈದ್ಯ ಡಾ.ವಿ.ಲಕ್ಷ್ಮಿನಾರಾಯಣ ಅವರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಆಗಮಿಸಲಿದ್ದು, ನಿಮಾನ್ಸ್ ನಿರ್ದೇಶಕರಾದ ಡಾ.ಪ್ರತಿಮಾ ಮೂರ್ತಿ ಹಾಗೂ ಎಪಿಐ ಮುಖ್ಯಸ್ಥ ಡಾ.ಮಹಾಲಿಂಗಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರಿನ ಬಿಎಸ್‌ಎನ್‌ಎಲ್ ಕಚೇರಿ ಬಳಿ ಪಿಂಚಣಿದಾರರ ಪ್ರತಿಭಟನೆ




ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಜಯಲಕ್ಷ್ಮೀಪುರಂನಲ್ಲಿರುವ ಬಿಎಸ್‌ಎನ್‌ಎಲ್ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.18(ಜಿಎ)– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಷ್ಟ್ರೀಯ ಪಿಂಚಣಿದಾರರ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಜಯಲಕ್ಷ್ಮೀಪುರಂನಲ್ಲಿರುವ ಬಿಎಸ್‌ಎನ್‌ಎಲ್ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಪೆನ್ಷನ್ ಕಾಯ್ದೆಗಳ ಕ್ರಮಬದ್ಧಗೊಳಿಸುವಿಕೆಯನ್ನು ತಕ್ಷಣ ಹಿಂಪಡೆಯಬೇಕು, 8ನೇ ವೇತನ ಆಯೋಗದ ಉಲ್ಲೇಖಕ್ಕೆ ತಿದ್ದುಪಡಿ ತರುವ ಮೂಲಕ ಪಿಂಚಣಿ ಪರಿಷ್ಕರಣೆಗೆ 2026ಕ್ಕಿಂತಲೂ ಹಿಂದಿನ ಪಿಂಚಣಿದಾರರನ್ನು ಸೇರಿಸಬೇಕು, 8ನೇ ವೇತನ ಆಯೋಗದ ಉಲ್ಲೇಖದಲ್ಲಿ ಜಾರಿ ದಿನಾಂಕವನ್ನು 1–1–2026ರಿಂದ ಬಾಕಿ ಸಮೇತ ಅನ್ವಯವಾಗುವಂತೆ ಸೇರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಎನ್‌ಪಿಡಬ್ಲ್ಯುಎ ಜಿಲ್ಲಾ ಕಾರ್ಯದರ್ಶಿ ಎಸ್.ವಿಷಕಂಠಮೂರ್ತಿ, ಎಐಬಿಡಿಪಿಐ ಜಿಲ್ಲಾ ಕಾರ್ಯದರ್ಶಿ ಬಸವರಾಜು, ಎಸ್‌ಎನ್‌ಪಿಡಬ್ಲ್ಯುಎ ಜಿಲ್ಲಾಧ್ಯಕ್ಷ ಎಂ.ಎನ್.ರಾಮಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಆರೋಗ್ಯ ಮಾತೆ ಚರ್ಚ್ ಸದಸ್ಯರಿಂದ ಕೆರೋಲ್ ಗೀತೆಗಳು



ಮೈಸೂರು–ಕೆಆರ್‌ಎಸ್ ರಸ್ತೆ, ಹುಲಿಕೆರೆಯಲ್ಲಿರುವ ಬೃಂದಾವನ ಆರೋಗ್ಯಮಾತೆ ಚರ್ಚ್ ಸದಸ್ಯರು ಮನೆ ಮನೆಗೆ ತೆರಳಿ ಕೆರೋಲ್ ಗೀತೆಗಳನ್ನು ಹಾಡಿದರು. ಈ ವೇಳೆ ಪಾರಿಶ್ ಫಾದರ್ ರೆ. ಫಾ. ರೇಮಂಡ್ ಮತ್ತಿತರರು ಇದ್ದಾರೆ.

ಮಾಜಿ ಸಚಿವ ಎಸ್.ಎ.ರಾಮದಾಸ್ ಹಿರಿಯ ಸಹೋದರ ಎ.ಪದ್ಮನಾಭದಾಸ್ ನಿಧನ



ಮೈಸೂರು, ಡಿ. 18 – ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಹಾಗೂ ಲೋಕೋಪಯೋಗಿ ಇಲಾಖೆ ನಿವೃತ್ತ ನೌಕರ ಎ. ಪದ್ಮನಾಭದಾಸ್ (70) ನಿನ್ನೆ (ಡಿ.17) ನಿಧನರಾದರು.

ಮೃತರು ಸಹೋದರರಾದ ಮಾಜಿ ಸಚಿವ ಎಸ್.ಎ.ರಾಮದಾಸ್ ಮತ್ತು ಖ್ಯಾತ ಉದ್ಯಮಿ ಶ್ರೀಕಾಂತ್‌ದಾಸ್, ಓರ್ವ ಪುತ್ರ, ಪುತ್ರಿ, ನಾಲ್ವರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.12.2025 ಶುಕ್ರವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾಳವಿಯ ಮಿಷನ್ ಟೀಚರ್ ಟ್ರೈನಿಂಗ್ ಸೆಂಟರ್** : ವಿಚಾರ ಸಂಕಿರಣ, ಉದ್ಘಾಟನೆ : ಜಿಲ್ಲಾ ಕಣ್ಗಾವಲು ಅಧಿಕಾರಿ ಡಾ. ಡಿ.ಜಿ. ನಾಗರಾಜ್, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ಉಪಸ್ಥಿತರು : ಪ್ರೊ. ಹೆಚ್.ಪಿ. ಜ್ಯೋತಿ, ಸ್ಥಳ: ಸೆಮಿನಾರ್ ಹಾಲ್, ಮಾಳವಿಯ ಮಿಷನ್ ಟೀಚರ್ ಟ್ರೈನಿಂಗ್ ಸೆಂಟರ್, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ** : ಬೆಳಗ್ಗೆ 10 ರಿಂದ ಕನ್ನಡ ಜೈನ ರಾಮಾಯಣ ಮತ್ತು ಆಧುನಿಕ ರಾಮಾಯಣ ಮಹಾಕಾವ್ಯಗಳ ತಾತ್ವಿಕ ಜಿಜ್ಞಾಸೆ ಕುರಿತು ವಿಚಾರ ಸಂಕಿರಣ, ಸಂಜೆ 5.15 ರಿಂದ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಜ್ಯೋತಿ, ಅಧ್ಯಕ್ಷತೆ : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಎಸ್.ಡಿ. ಶಶಿಕಲಾ, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್.
- **ಶ್ರೀಸೂತ್ರ ಆಯುರ್ಧಾಮ** : ಕಿಡ್ನಿ ಸ್ಟೋನ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ** : ಉಚಿತ ಪ್ರಾಸ್ಟೇಟ್ ಗ್ರಂಥಿ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಅನ್ವೇಷಣಾ ಸೇವಾ ಟ್ರಸ್ಟ್** : ಚುಟುಕು ಜಾಹ್ನವಿ ಸೀತಾಲಕ್ಷ್ಮಿ ವರ್ಮ ಸಂಪಾದಿಸಿರುವ ಅರಸು ಚುಟುಕು ಚಿತ್ತಾರಗಳು ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಮಾಜಿ ಸಚಿವೆ ಶ್ರೀಮತಿ ರಾಣಿ ಸತೀಶ್, ಕೃತಿ ಲೋಕಾರ್ಪಣೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಶ್ರೀಮತಿ ಡಾ. ಪದ್ಮಾಶೇಖರ್, ಕೃತಿ ಸ್ವೀಕಾರ : ಶಿಕ್ಷಣ ತಜ್ಞರಾದ ಶ್ರೀಮತಿ ಭ್ರಮರ ಬಹದ್ದೂರ್, ಅಧ್ಯಕ್ಷತೆ: ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಅರಸ್, ಪುಸ್ತಕ ತಾಂಬೂಲ ವಿತರಣೆ : ದೂರದರ್ಶನ ಮತ್ತು ಆಕಾಶವಾಣಿ ವಿಶ್ರಾಂತ ನಿರ್ದೇಶಕರಾದ ಡಾ. ನಿರ್ಮಲಾ ಸಿ. ಯಲಿಗಾರ್, ಮುಖ್ಯ ಅತಿಥಿಗಳು: ಚುಟುಕು ಜಾಹ್ನವಿ ಸೀತಾಲಕ್ಷ್ಮಿ ವರ್ಮ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.45ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ** : ರಾಷ್ಟ್ರೀಯ ಏಕತಾ ಸಪ್ತಾಹ ದಿನಾಚರಣೆ ಅಂಗವಾಗಿ ಭಾಷಾ ಸೌಹಾರ್ದತಾ ದಿನ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಭೌತವಿಜ್ಞಾನ ಪ್ರಾಧ್ಯಾಪಕ ಪ್ರೊ. ಪ್ರದ್ಯುಮ್ನ ಕುಮಾರ್ ಸೇಥಿ, ಕರಾಮುವಿವಿ ಕುಲಸಚಿವ ಪ್ರೊ. ಎಸ್.ಕೆ. ನವೀನ್‌ಕುಮಾರ್, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಕರಾಮುವಿವಿ ಆವರಣ, ಮುಕ್ತಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಸಪಸ ಸಂಗೀತ ವಿದ್ಯಾಲಯ, ಮೈಸೂರು, ಅಖಿಲ ಕರ್ನಾಟಕ ಸುಗಮ ಸಂಗೀತ ಒಕ್ಕೂಟ:** ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ಮತ್ತು ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ: ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ ಹಾಗೂ ಎಸ್. ಸಂಗೀತಾ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ತಿಳಿಸಿಕೊಡಲಿದ್ದಾರೆ ಡಾ. ಮುರಳಿ ಬಿ. ಮೋಹನ್ ನಂತರ ಫೈಬ್ರೊಮ್ಯೆಯಾಲ್ಜಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಡಾ. ಮಹಬಲೇಶ್ವರ ಮಾದಾಪುರ. ಇವರೊಂದಿಗೆ ಭಾಗವಹಿಸುತ್ತಾರೆ ತೇಜಸ್ವಿನಿ ಗಿರೀಶ್, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಶ್ರೀಕಾಂತ್ ಜಿ.–ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ.ಎಸ್. ಗೋಪಾಲಕೃಷ್ಣನ್ – ಕೊಳಲುವಾದನ, 4.00 ಮಹಿಳಾರಂಗ–ಸಖೀ ಸಾಹಿತ್ಯ, ಮಹಿಳಾ ಬರಹಗಾರರ ಜೊತೆ ಮಾತುಕತೆ ಭಾಗವಹಿಸುತ್ತಾರೆ ಹಾಸ್ಯ ಬರಹಗಾರರು, ಲಿಪಿಕಾರರು ಹಾಗೂ ಅಂಕಣಗಾರ್ತಿ ಬಿ.ಆರ್. ನಾಗರತ್ನ, ಪ್ರಸ್ತುತಿ–ಕೆ. ನೇತ್ರಾ, 4.30 ಪ್ರಾಯೋಜಿತ ಕಾರ್ಯಕ್ರಮ, ಆಧುನಿಕ ಕೃಷಿ ಚಾವಡಿ ವಿಜ್ಞಾನಿಗಳಿಂದ ಕೃಷಿಕರವರೆಗೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ ಹಲೋ ಕೃಷಿರಂಗ ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಸುಧಾರಿತ ರೇಷ್ಮೆ ಕೃಷಿ ಪದ್ಧತಿಗಳು ಭಾಗವಹಿಸುತ್ತಾರೆ ರೇಷ್ಮೆ ಇಲಾಖೆಯ ಉಪನಿರ್ದೇಶಕರಾದ ಎಸ್. ಎನ್. ಶ್ರೀನಿವಾಸ್, ಪರಾಗ–ಬೇಸಾಯದ ಬದುಕು ಸರಾಗ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

- **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ** : ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಸಂಸ್ಕೃತಿ ಚಿಂತಕ ಶಂಕರ ದೇವನೂರು, ಅಧ್ಯಕ್ಷತೆ : ದೀಪಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ಕಲಾಮಂದಿರ, ಮಧ್ಯಾಹ್ನ 3.30ಕ್ಕೆ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ** : ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ** : ರಾಷ್ಟ್ರೀಯ ಗೊಂಬೆಯಾಟ ಉತ್ಸವ ಮೈಸೂರು, ಗೊಂಬೆಯಾಟ (ಪಪೆಟ್) ಉತ್ಸವ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ, ಮುಖ್ಯ ಅತಿಥಿಗಳು : ಹಿರಿಯ ರಂಗ ನಿರ್ದೇಶಕರಾದ ಇಂದಿರಾ ನಾಯರ್, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ನಿರಂತರ ಫೌಂಡೇಷನ್** : ನಿರಂತರ ರಂಗ ಉತ್ಸವ, ಸಂಜೆ 5.30ಕ್ಕೆ ದೇವಾನಂದ್ ವರಪ್ರಸಾದ್ ಮತ್ತು ನಿರಂತರ ಗೆಳೆಯರಿಂದ ಶ್ರೀನಿವಾಸ್ ಭಟ್ (ಚೀನಿ) ಅವರ ರಂಗ ಗೀತೆಗಳು, ಸಂಜೆ 7ಕ್ಕೆ ದಾವಣಗೆರೆ ರಂಗಾಯಣದ ವೃತ್ತಿ ರಂಗಭೂಮಿ ಕಲಾವಿದರಿಂದ ಪ್ರತಿ ಗಂಧರ್ವ ನಾಟಕ ಪ್ರದರ್ಶನ, ರಚನೆ : ರಾಜಪ್ಪ ದಳವಾಯಿ, ಸಂಗೀತ : ರವಿ ಮುರೂರು, ನಿರ್ದೇಶನ : ಮಾಲತೇಶ್ ಬಡಿಗೇರ, ಸ್ಥಳ: ಕಿರು ರಂಗಮಂದಿರ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ** : ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಸಾಧನಾ ಮಂದಿರ:** ಸರಸ್ವತಿ ಪೂಜೆ ವಿಶೇಷ ತರಬೇತಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಮತ್ತು ವಿಧಾನಗಳೊಂದಿಗೆ, ಸ್ಥಳ: ಸಂಜೆ 6.30ಕ್ಕೆ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್‌ನಗರ, ಶ್ರೀರಾಮಪುರ, ಸಂಜೆ 7.30ಕ್ಕೆ ಮೈಸೂರು ಮೃಗಾಲಯ, ಎಸ್‌ವಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ** : ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ಅಕ್ರಮದಲ್ಲಿ ಭಾಗಿಯಾಗುವ ಪೊಲೀಸರನ್ನು ಕೆಲಸದಿಂದ ವಜಾ ಮಾಡಲು ಕ್ರಮ

ಪರಿಷತ್‌ನಲ್ಲಿ ಗೃಹಸಚಿವ ಡಾ. ಜಿ.ಪರಮೇಶ್ವರ್ ಹೇಳಿಕೆ



ಬೆಳಗಾವಿ, ಡಿ.18– ದರೋಡೆ, ಕಳ್ಳತನ ಸೇರಿದಂತೆ ಅಕ್ರಮಗಳಲ್ಲಿ ಭಾಗಿಯಾಗುವ ಪೊಲೀಸರನ್ನು ಕೆಲಸದಿಂದಲೇ ವಜಾ ಮಾಡುವ ಕೆಲಸ ಸರ್ಕಾರ ಮಾಡುತ್ತಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್ ಸದಸ್ಯ ಶರವಣ ಅವರು, ರಾಜ್ಯದಲ್ಲಿ ದರೋಡೆ, ಮನೆಗಳ್ಳತನ, ಹಗಲು ದರೋಡೆಗಳು ಜಾಸ್ತಿ ಆಗುತ್ತಿದೆ. ಪೊಲೀಸ್ ಅಧಿಕಾರಿಗಳೇ ಕಳ್ಳತನದಲ್ಲಿ ಭಾಗಿಯಾಗುತ್ತಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯುತ್ತಿದೆ. ಜನರಲ್ಲಿ ಪೊಲೀಸರ ಮೇಲೆ ನಂಬಿಕೆ ಕಳೆದು ಹೋಗುತ್ತಿದೆ. ಇಂತಹ ಅಕ್ರಮದಲ್ಲಿ ಭಾಗಿಯಾಗುವವರನ್ನು ಕೆಲಸದಿಂದ ವಜಾ ಮಾಡಿ. ಇದಕ್ಕೆ ಕಾನೂನು ತರಬೇಕು ಎಂದು ಒತ್ತಾಯ ಮಾಡಿದರು.

ಇದಕ್ಕೆ ಸಚಿವ ಪರಮೇಶ್ವರ್ ಉತ್ತರ ನೀಡಿ, 37 ಜಿಲ್ಲೆಗಳಲ್ಲಿ 88 ಮಂದಿ ಪೊಲೀಸರು ಅಕ್ರಮಗಳಲ್ಲಿ ಭಾಗಿಯಾದ ಕೇಸ್ ಇದೆ. ನಮ್ಮ ಸರ್ಕಾರ ಬಂದಾಗಿನಿಂದ ಮಾತ್ರ ಇದು ಆಗಿಲ್ಲ. ಪೊಲೀಸ್ ಇಲಾಖೆಯಲ್ಲಿ 1.6 ಲಕ್ಷ ಸಿಬ್ಬಂದಿ ಇದ್ದಾರೆ ಎಲ್ಲರನ್ನು ಒಂದೇ ತಕ್ಕಡಿಯಾಗಿ ತೂಗೋಕೆ ಆಗಲ್ಲ. ಎಲ್ಲರೂ ಕಳ್ಳರು ಅನ್ನೋದು ಸರಿಯಲ್ಲ. ಬೇಲಿನೇ ಎದ್ದು ಹೊಲ ಮೇಯ್ತಾ ಇದೆ ಅಂದರೆ ಹೇಗೆ, ಒಳ್ಳೆ ಅಧಿಕಾರಿಗಳು ಇದ್ದಾರೆ. ಎಲ್ಲರನ್ನೂ ಒಟ್ಟಿಗೆ ಸೇರಿಸೋದು ಬೇಡ ಎಂದರು.

ಅಕ್ರಮದಲ್ಲಿ ಶಾಮೀಲಾಗಿರುವ ಪೊಲೀಸರನ್ನು ಸೂಕ್ಷ್ಮವಾಗಿ ನೋಡುತ್ತೇವೆ. 88 ಜನರ ಮೇಲೆ ಎಫ್‌ಐಆರ್ ಹಾಕಿ, ಬಂಧನ ಮಾಡಲಾಗಿದೆ. ಅನೇಕ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಸಾವಿರಾರು ಕೋಟಿ ಡ್ರಗ್ಸ್ ಹಿಡಿದ್ದೇವೆ. ಪೊಲೀಸ್ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿರುವುದಕ್ಕೆ ನಮ್ಮ ರಾಜ್ಯ ಶಾಂತವಾಗಿದೆ. ಬೇರೆ ರಾಜ್ಯದ ಬಗ್ಗೆಯೂ ನೋಡಬೇಕು. ಅಕ್ರಮದಲ್ಲಿ ಭಾಗಿಯಾಗುವ ಪೊಲೀಸರನ್ನು ಅಮಾನತು ಅಲ್ಲ. ಕೆಲಸದಿಂದ ವಜಾ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಪೊಲೀಸ್ ಇಲಾಖೆಯ 3600 ಹುದ್ದೆ ಭರ್ತಿ ನಿರ್ಧಾರ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.18(ಕೆಎಂಶಿ)– ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 3,600 ವಿವಿಧ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನ ಪರಿಷತ್ತಿನಲ್ಲಿ ಇಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಜಗದೇವ್ ಗುತ್ತೇದಾರ್, ಶರಣಗೌಡ ಬಯ್ಯಾಪುರ, ಸಿ.ಟಿ.ರವಿ ಮತ್ತಿತರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಆರ್ಥಿಕ ಇಲಾಖೆ ಅನುಮತಿ ನೀಡುತ್ತಿದ್ದಂತೆ 947 ಪಿಎಸ್‌ಐಗಳ ಭರ್ತಿ ಪ್ರಕ್ರಿಯೆ ಪೂರ್ಣಗೊಂಡು, ತರಬೇತಿಯಲ್ಲಿದ್ದಾರೆ ಎಂದರು. ಒಳಮೀಸಲು ಕಲ್ಪಿಸುವ ಪ್ರಕ್ರಿಯೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಉಳಿದ ಹುದ್ದೆಗಳನ್ನು ನಿಗದಿತ ಸಮಯದಲ್ಲಿ ಭರ್ತಿ ಮಾಡುವಂತೆ ಅಧಿಕಾರಿಗಳಿಗೆ ಆದೇಶ ಮಾಡಿದ್ದೇನೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಪೋಲಿಸರು 61,299 ಸ್ವಯಂ ಪ್ರೇರಿತ ದೂರುಗಳನ್ನು ದಾಖಲಿಸಿಕೊಂಡು ತನಿಖೆ ನಡೆಸಿದ್ದಾರೆ. ಇದರಲ್ಲಿ 57,646 ದೂರುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ. ಯಾವುದೇ ದೂರುಗಳನ್ನು ಹಿಂದಕ್ಕೆ ಪಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಪಾಕ್ ವಿರುದ್ಧ ಜೈಕಾರ ಹಾಕಿದವರ ಬಂಧನ: ಸಾರ್ವಜನಿಕರ ಪ್ರಾಣ ಮತ್ತು ಮಾನ ಕಾಪಾಡುವ ಸಂದರ್ಭದಲ್ಲೂ ದೂರುಗಳು ದಾಖಲಾಗಿವೆ. ಕಳೆದ ಮೂರು ವರ್ಷದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ 12 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವಂತಹ ಪೊಲೀಸರು ಮತ್ತು ಅಧಿಕಾರಿಗಳ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗಿದೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ 88 ಪೊಲೀಸರು ಮತ್ತು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿ ಕೆಲವರನ್ನು ಅಮಾನತು ಮಾಡಿದರೆ ಮತ್ತೆ ಕೆಲವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಭಾರೀ ಗದ್ದಲದ ನಡುವೆ ಲೋಕಸಭೆಯಲ್ಲಿ ಜಿ ರಾಮ್ ಜಿ ಮಸೂದೆ ಅಂಗೀಕಾರ

ನವದೆಹಲಿ, ಡಿ.18– ಭಾರೀ ಗದ್ದಲದ ನಡುವೆ ಲೋಕಸಭೆಯಲ್ಲಿ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಮಸೂದೆ, 2025 ಅನ್ನು (ಜಿ ರಾಮ್ ಜಿ) ಅಂಗೀಕರಿಸಲಾಯಿತು.

ಇದರಿಂದ ಆಕ್ರೋಶಗೊಂಡ ವಿಪಕ್ಷ ಸಂಸದರು, ಕೇಂದ್ರ ಸರ್ಕಾರ ರಾಷ್ಟ್ರಪಿತನನ್ನು ಅವಮಾನಿಸಿದೆ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ (ಮನರೇಗಾ) ನಿಬಂಧನೆಗಳನ್ನು ದುರ್ಬಲಗೊಳಿಸಿದೆ ಎಂದು ಆಕ್ರೋಶ ಹೊರಹಾಕಿ ಪ್ರತಿಭಟನೆ ನಡೆಸಿದವು. ಈ ಆರೋಪಗಳ ನಡುವೆ ಸರ್ಕಾರ ಹೊಸ ಮಸೂದೆಯನ್ನು ಸಮರ್ಥಿಸಿಕೊಂಡಿತು.

ಮಸೂದೆಯ ಪ್ರತಿ ಹರಿದು ವಿಪಕ್ಷಗಳ ಆಕ್ರೋಶ



ಸದನದಲ್ಲಿ ಮಾತನಾಡಿದ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, 2009ರ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮಹಾತ್ಮ ಗಾಂಧಿಯವರ ಹೆಸರನ್ನು ನರೇಗಾಗೆ ಸೇರಿಸಲಾಗಿದೆ ಎಂದು ತಿರುಗೇಟು ನೀಡಿದರು. ಆರಂಭದಲ್ಲಿ ಅದು ನರೇಗಾ ಆಗಿತ್ತು. ಮಹಾತ್ಮ ಗಾಂಧಿಯವರ ಹೆಸರನ್ನು ಮಸೂದೆಯಲ್ಲಿ ಸೇರಿಸಿರಲಿಲ್ಲ. 2009ರ ಚುನಾವಣೆ ಹತ್ತಿರ ಬಂದಾಗ ಮತಗಳನ್ನು ಪಡೆಯಲು ಕಾಂಗ್ರೆಸ್ ಬಾಪು ಅವರನ್ನು ನೆನಪಿಸಿಕೊಂಡಿತು. ಪ್ರಧಾನಿ ನರೇಂದ್ರ ಮೋದಿ ಅವರು ಎಂಜಿಎನ್‌ಇಜಿಎ ಅನ್ನು ಸರಿಯಾಗಿ ಮತ್ತು ಬಲವಾಗಿ ಜಾರಿಗೆ ತಂದರು ಎಂದು ನಾನು ಹೇಳಲು ಬಯಸುತ್ತೇನೆ ಎಂದು ಪ್ರತಿಪಾದಿಸಿದರು.

ಬಾಪು ಆದರ್ಶಗಳನ್ನು ಕೊಂದಿದ್ದು ಕಾಂಗ್ರೆಸ್: ಕಾಂಗ್ರೆಸ್ ಬಾಪು ಅವರ ಆದರ್ಶಗಳನ್ನು ಹತ್ಯೆ ಮಾಡಿತು. ಆದರೆ ಎನ್‌ಡಿಎ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಉಜ್ವಲ ಯೋಜನೆ, ಸ್ವಚ್ಛ ಭಾರತ ಮಿಷನ್, ಆಯುಷ್ಮಾನ್ ಭಾರತ್ ಅಡಿಯಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸಿ ಬಾಪು ಅವರ ಆದರ್ಶಗಳನ್ನು ಪುನರುಜ್ಜೀವನಗೊಳಿಸಿತು ಎಂದು ಹೇಳುತ್ತಾ, ಸರ್ಕಾರವು ಜವಾಹರಲಾಲ್ ನೆಹರು ಮತ್ತು ಮಹಾತ್ಮಾ ಗಾಂಧಿಯವರ ಹೆಸರಿನ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿಯವರ ಟೀಕೆಗೆ ತಿರುಗೇಟು ನೀಡಿದರು.

ಸದನದ ಬಾವಿಗಿಳಿದು ಪ್ರತಿಭಟನೆ: ಮಹಾತ್ಮ ಗಾಂಧಿಯವರ ಹೆಸರನ್ನು ತೆಗೆದು ಹಾಕಿದ್ದಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಪ್ರತಿಪಕ್ಷದ ಶಾಸಕರು ಸದನದ ಬಾವಿಗಿಳಿದು, ಮಸೂದೆಯ ಪ್ರತಿಗಳನ್ನು ಹರಿದು ಸ್ಪೀಕರ್ ಕುರ್ಚಿಯ ಕಡೆಗೆ ಎಸೆದರು. ಮಸೂದೆ ಅಂಗೀಕಾರವಾದ ನಂತರ ಸ್ಪೀಕರ್ ಓಂ ಬಿರ್ಲಾ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

2047ಕ್ಕೆ ವಾರ್ಷಿಕ 500 ದಶಲಕ್ಷ ಟನ್ ಉಕ್ಕು ಉತ್ಪಾದನೆ ಗುರಿ

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ
- ಜಾಗತಿಕ ಉಕ್ಕಿನ ಪಾಲುದಾರ ರಾಷ್ಟ್ರಗಳ ರಾಯಭಾರಿಗಳು, ಪ್ರತಿನಿಧಿಗಳ ಜತೆ ಸಚಿವರ ವಿಸ್ತೃತ ಚರ್ಚೆ



ನವದೆಹಲಿ, ಡಿ.18– ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಸಂಕಲ್ಪದ ಅಡಿಯಲ್ಲಿ ಭಾರತವು 2030ರ ವೇಳೆಗೆ ವಾರ್ಷಿಕ 300 ದಶಲಕ್ಷ ಟನ್ ಉಕ್ಕು ಉತ್ಪಾದಿಸುವ ಗುರಿ ಹೊಂದಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಏಪ್ರಿಲ್ 2026ರಲ್ಲಿ ನವದೆಹಲಿಯ ಭಾರತ್ ಮಂಟಪದಲ್ಲಿ ನಡೆಯಲಿರುವ ಭಾರತ್ ಸ್ಟೀಲ್ 2026 ಅಂತಾರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರದರ್ಶನದ ಭಾಗವಾಗಿ ನವದೆಹಲಿಯಲ್ಲಿ ಗುರುವಾರ ಪಾಲುದಾರ ರಾಷ್ಟ್ರಗಳ ರಾಯಭಾರಿಗಳು ಹಾಗೂ ಪ್ರತಿನಿಧಿಗಳ ಜತೆ ಸಂವಾದಾತ್ಮಕ ಸಭೆಯಲ್ಲಿ ಸಚಿವರು ಈ ವಿಷಯವನ್ನು ಪ್ರಕಟಿಸಿದರು.

2047ರ ವೇಳೆಗೆ ವಾರ್ಷಿಕ 500 ದಶಲಕ್ಷ ಟನ್ ಉಕ್ಕು ಉತ್ಪಾದಿಸುವ ಬೃಹತ್ ಗುರಿ ಹೊಂದಲಾಗಿದೆ. ಈ ಗುರಿ ಸಾಕಾರಕ್ಕಾಗಿ ಭಾರತವನ್ನು ಜಾಗತಿಕ ಉಕ್ಕು ಸರಪಳಿಯೊಂದಿಗೆ ದೃಢವಾಗಿ ಸಂಯೋಜನೆ ಮಾಡಲಾಗುತ್ತದೆ ಹಾಗೂ ಜಾಗತಿಕ ಸಹಯೋಗಕ್ಕೆ ಹೊಸ ಮಾರ್ಗಗಳನ್ನು ತೆರೆಯಲು ಮತ್ತಷ್ಟು ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಮುಂದಿನ ಈ ಪ್ರದರ್ಶನದಲ್ಲಿ ಭಾಗಿಯಾಗುವಂತೆ ಸಚಿವರು ಪಾಲುದಾರ ರಾಷ್ಟ್ರಗಳ ರಾಯಭಾರಿಗಳು, ಪ್ರತಿನಿಧಿಗಳಿಗೆ ಆಹ್ವಾನ ನೀಡಿದರು.

ಭಾರತವು ವಿಶ್ವಾಸಾರ್ಹ ಅಂತಾರಾಷ್ಟ್ರೀಯ ಪಾಲುದಾರಿಕೆಗಳ ಮೇಲೆ ಹೆಚ್ಚು ಪ್ರಾಮುಖ್ಯತೆ ಕೇಂದ್ರೀಕರಿಸುತ್ತದೆ. ಭಾರತದ ಉಕ್ಕು ವಲಯವು ಇಂದು ದೇಶದ ವಿಶಾಲ ಆರ್ಥಿಕ ಪರಿವರ್ತನೆಯನ್ನು ಪ್ರತಿಬಿಂಬಿಸುತ್ತದೆ ಹಾಗೂ ಬೆಳವಣಿಗೆ, ಸ್ಥಿತಿಸ್ಥಾಪಕತ್ವ ಮತ್ತು ಜಾಗತಿಕ ಒಗ್ಗೂಡುವಿಕೆಯ ಆಧಾರಸ್ತಂಭವಾಗಿ ಹೊರಹೊಮ್ಮಿದೆ ಎಂದು ಅವರು ಹೇಳಿದರು.

ಭಾರತವು ಪ್ರಸ್ತುತ ಜಗತ್ತಿನ ಎರಡನೇ ಅತಿದೊಡ್ಡ ಉಕ್ಕು ಉತ್ಪಾದಕ ರಾಷ್ಟ್ರವಾಗಿದೆ. ನಿರಂತರ ಸುಧಾರಣೆಗಳು, ಸ್ಥಿರ ಹೂಡಿಕೆಗಳು ಮತ್ತು ಆಧುನೀಕರಣ, ಸ್ವಾವಲಂಬನೆ ಮತ್ತು ಸುಸ್ಥಿರತೆಯ ಮೇಲೆ ಕೇಂದ್ರೀಕರಿಸಿದ ಸ್ಪಷ್ಟ ದೀರ್ಘಕಾಲೀನ ದೃಷ್ಟಿಕೋನದ ಮೂಲಕ ಈ ಸ್ಥಾನವನ್ನು ಸಾಧಿಸಿದೆ ಎಂದು ಸಚಿವರು ಹೇಳಿದರು.

ಉಕ್ಕು ವಲಯವು ಭಾರತದ ಜಿಡಿಪಿಗೆ ಸುಮಾರು 2.5 ಪ್ರತಿಶತದಷ್ಟು ಕೊಡುಗೆ ನೀಡುತ್ತದೆ ಮತ್ತು ಸುಮಾರು 2.8 ದಶಲಕ್ಷ ಜನರಿಗೆ ಉದ್ಯೋಗ ಒದಗಿಸಿದೆ. ಮೂಲಸೌಕರ್ಯ ವಿಸ್ತರಣೆ, ಉತ್ಪಾದನಾ ಬೆಳವಣಿಗೆ, ರಕ್ಷಣೆ ಮತ್ತು ಚಲನಶೀಲತೆಯಂತಹ ವಲಯಗಳಿಂದ ಹೆಚ್ಚೆಚ್ಚು ಬೇಡಿಕೆಗಳನ್ನು ಸ್ವೀಕರಿಸುತ್ತಿದೆ ಎಂದು ಅಂಶವನ್ನು ಸಚಿವರು ಉಲ್ಲೇಖಿಸಿದರು. ಉಕ್ಕು ಸಚಿವಾಲಯವು 'ಭಾರತ್ ಸ್ಟೀಲ್' ಎಂಬ ಶೀರ್ಷಿಕೆಯ ವಾರ್ಷಿಕ ಪ್ರಮುಖ ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ಪ್ರದರ್ಶನವನ್ನು ನಡೆಸಲು ನಿರ್ಧರಿಸಿದೆ.

ಮೊದಲ ಆವೃತ್ತಿಯಾದ ಭಾರತ್ ಸ್ಟೀಲ್ 2026 ಏಪ್ರಿಲ್ 2026 ರಲ್ಲಿ ನವದೆಹಲಿಯ ಭಾರತ್ ಮಂಟಪದಲ್ಲಿ ನಡೆಯಲಿದೆ ಎಂದು ಅವರು ಸಭೆಗೆ ತಿಳಿಸಿದರು.

ಭಾರತ್ ಸ್ಟೀಲ್ 2026 ಅನ್ನು ಪ್ರಪಂಚದಾದ್ಯಂತ ಇರುವ ನೀತಿ ನಿರೂಪಕರು, ಉದ್ಯಮಿಗಳು, ಹೂಡಿಕೆದಾರರು, ತಂತ್ರಜ್ಞಾನ ಪೂರೈಕೆದಾರರು ಮತ್ತು ಖರೀದಿದಾರರನ್ನು ಒಟ್ಟುಗೂಡಿಸುವ ಜಾಗತಿಕ ವೇದಿಕೆಯಾಗಿ ರೂಪಿಸಲಾಗಿದೆ. ಅಲ್ಲದೆ ಉಕ್ಕು ಬಳಕೆಯನ್ನು ವಿಸ್ತರಿಸುವುದು, ಸುಸ್ಥಿರತೆ ಮತ್ತು ಆರ್ಥಿಕತೆಯನ್ನು ಉತ್ತೇಜಿಸುವುದು, ಕಚ್ಚಾವಸ್ತುಗಳ ಪೂರೈಕೆ ಸರಪಳಿಗಳನ್ನು ಸುರಕ್ಷಿತಗೊಳಿಸುವುದು, ತಾಂತ್ರಿಕ ನಾವೀನ್ಯತೆಯನ್ನು ವೇಗಗೊಳಿಸುವುದು, ಸಾಮರ್ಥ್ಯ ವಿಸ್ತರಣೆಗೆ ಹೂಡಿಕೆಗಳ ಸಕ್ರಿಯತೆ ಇದರ ಉದ್ದೇಶ.

ಮಹೇಶ್ ಶೆಟ್ಟಿ ತಿಮರೋಡಿ ಮತ್ತೆ ಗಡೀಪಾರು

ಬೆಳ್ತಂಗಡಿ, ಡಿ.18– ಧರ್ಮಸ್ಥಳ ವಿರುದ್ಧ ಹೋರಾಟ ನಡೆಸುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಎರಡನೇ ಬಾರಿಗೆ ಗಡೀಪಾರು ಮಾಡಿ ಪುತ್ತೂರು ಎಸಿ ಆದೇಶ ಹೊರಡಿಸಿದ್ದಾರೆ.



ಪುತ್ತೂರು ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ತನ್ನ ಹಿಂದಿನ ಆದೇಶವನ್ನು ಮಾರ್ಪಡಿಸಿ ಮತ್ತೆ ಜಾರಿಗೊಳಿಸಿದ್ದಾರೆ. ಈ ಹಿಂದಿನ ಆದೇಶದಂತೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡೀಪಾರು ಮಾಡಿ ಆದೇಶ ಮಾಡಿದ್ದಾರೆ.

ಈ ಹಿಂದಿನ ಆದೇಶದಲ್ಲಿ ಕಾನೂನಾತ್ಮಕ ತೊಂದರೆ ಇದೆ. ಕಾನೂನು ಪಾಲನೆಯಾಗಿಲ್ಲ ಎಂಬ ಕೊರತೆ ಇದ್ದುದನ್ನು ಸರಿಪಡಿಸಿ ಸ್ಟೆಲ್ಲಾ ವರ್ಗೀಸ್ ಮತ್ತೊಮ್ಮೆ ಆದೇಶ ಮಾಡಿದ್ದಾರೆ.

ಎಸಿ ಆದೇಶ ಪ್ರತಿ ಹಿಡಿದು ಮಹೇಶ್ ಶೆಟ್ಟಿಯವರ ಉಜಿರೆ ಬಳಿಯ ತಿಮರೋಡಿ ಮನೆಗೆ ಬೆಳ್ತಂಗಡಿ ಪೊಲೀಸರು ಇಂದು ಬೆಳಗ್ಗೆ ತೆರಳಿದ್ದಾರೆ. ಆದರೆ, ವಿಷಯ ತಿಳಿದ ಮಹೇಶ್ ಶೆಟ್ಟಿ ಪೊಲೀಸರು ಮನೆ ತಲುಪುವ ಮೊದಲೇ ಅಲ್ಲಿಂದ ನಾಪತ್ತೆಯಾಗಿದ್ದಾರೆ ಎನ್ನಲಾಗಿದ್ದು, ಬಳಿಕ ಮನೆಯಲ್ಲಿ ಶೋಧ ನಡೆಸಿ, ನೋಟಿಸ್ ಅಂಟಿಸಿ ಪೊಲೀಸರು ವಾಪಸಾಗಿದ್ದಾರೆ. ಇತ್ತೀಚೆಗೆ ಕಾನೂನಾತ್ಮಕ ತೊಂದರೆ ನೆಪದಲ್ಲಿ ಪುತ್ತೂರು ವಿಭಾಗಾಧಿಕಾರಿ ಹೊರಡಿಸಿದ್ದ ಗಡೀಪಾರು ಆದೇಶಕ್ಕೆ ಹೈಕೋರ್ಟ್ ತಡೆ ನೀಡಿತ್ತು. ಕಾನೂನು ಪ್ರಕಾರ ಹೊಸ ಪ್ರಕ್ರಿಯೆ ನಡೆಸಿ, ಆದೇಶ ಮಾಡಲು ಹೈಕೋರ್ಟ್ ಸೂಚಿಸಿತ್ತು. ಸೆಕ್ಷನ್ ಸರಿಪಡಿಸಿ ಹೊಸ ಆದೇಶ ನೀಡುವಂತೆ ಪುತ್ತೂರು ಎಸಿಗೆ ಸೂಚನೆ ನೀಡಿತ್ತು.

ಧರ್ಮಸ್ಥಳ ಬುರುಡೆ ಕೇಸ್: ಮಾಸ್ಕ್ ಮ್ಯಾನ್ ಚಿನ್ನಯ್ಯ ಶಿವಮೊಗ್ಗ ಜೈಲಿನಿಂದ ಬಿಡುಗಡೆ

ಶಿವಮೊಗ್ಗ, ಡಿ.18– ಧರ್ಮಸ್ಥಳದಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ದೂರುದಾರ ಚಿನ್ನಯ್ಯ ಅವರನ್ನು ಶಿವಮೊಗ್ಗ ಜೈಲಿನಿಂದ ಗುರುವಾರ ಬೆಳಿಗ್ಗೆ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಯಿತು.



ಆತನಿಗೆ ಮಂಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನ.24ರಂದು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಜಾಮೀನು ಪಡೆಯಲು 1 ಲಕ್ಷ ಭದ್ರತಾ ಠೇವಣಿ ನೀಡಬೇಕು ಎಂದು ಷರತ್ತು ವಿಧಿಸಿತ್ತು.

ಆದರೆ ಭದ್ರತಾ ಠೇವಣಿ ಮೊತ್ತ ಪಾವತಿಸಲು ವಿಳಂಬವಾದ ಹಿನ್ನೆಲೆಯಲ್ಲಿ ಬಿಡುಗಡೆ ಆಗಿರಲಿಲ್ಲ. ಮಂಗಳೂರಿನಿಂದ ಬುಧವಾರ ರಾತ್ರಿ ಶಿವಮೊಗ್ಗಕ್ಕೆ ಬಂದಿದ್ದ ಚಿನ್ನಯ್ಯನ ಪತ್ನಿ ಮಲ್ಲಿಕಾ ಹಾಗೂ ಸಹೋದರಿ ಮತ್ತು ಚಿನ್ನಯ್ಯನ ಪರ ವಕೀಲರು ಇಲ್ಲಿನ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಡಾ. ರಂಗನಾಥ್ ಅವರಿಗೆ ಜಾಮೀನು ಪ್ರಕ್ರಿಯೆಯ ದಾಖಲೆಗಳನ್ನು ಸಲ್ಲಿಸಿದ್ದರು. ಹೀಗಾಗಿ ಬೆಳಿಗ್ಗೆ 8.30ಕ್ಕೆ ಬಿಡುಗಡೆ ಮಾಡಲಾಯಿತು.

ಚಿನ್ನಯ್ಯನ ಬಿಡುಗಡೆ ಹಿನ್ನೆಲೆಯಲ್ಲಿ ಇಲ್ಲಿನ ಸೋಗಾನೆಯ ಕೇಂದ್ರ ಕಾರಾಗೃಹದ ಬಳಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಜೈಲಿನ ಆವರಣಕ್ಕೆ ತೆರಳಲು ಮಾಧ್ಯಮದವರಿಗೆ ನಿರ್ಬಂಧ ವಿಧಿಸಲಾಗಿತ್ತು. ಈತ ಪ್ರತಿ ಎರಡು ದಿನಕ್ಕೊಮ್ಮೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಹಾಜರಾಗಿ ಸಹಿ ಹಾಕಬೇಕು. ಹಾಗೂ ಮಾಧ್ಯಮಗಳೊಂದಿಗೆ ಮಾತನಾಡಬಾರದು ಎಂದು ಬೆಳ್ತಂಗಡಿ ನ್ಯಾಯಾಲಯವು ಷರತ್ತು ವಿಧಿಸಿದೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ: 3 ವರ್ಷದಲ್ಲಿ 855 ಕೋಟಿ ರೂ ಟೋಲ್ ಸಂಗ್ರಹ



ಮೈಸೂರು, ಡಿ.18– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ವಾಹನ ಸಂಚಾರಕ್ಕೆ ಮುಕ್ತವಾದ ನಂತರ ಕಳೆದ 3 ವರ್ಷಗಳಲ್ಲಿ, 855.79 ಕೋಟಿ ರೂ.ಗಳಷ್ಟು ಟೋಲ್ ಸಂಗ್ರಹವಾಗಿದೆ.

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸಿದ 118 ಕಿ.ಮೀ. ಉದ್ದದ ಹೆದ್ದಾರಿಯನ್ನು ಮಾರ್ಚ್ 2023 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಈ ಮಾರ್ಗವು ಬೆಂಗಳೂರಿನ ಕುಂಬಳಗೋಡಿನಲ್ಲಿ ಪ್ರಾರಂಭವಾಗಿ ರಾಮನಗರ ಜಿಲ್ಲೆಯಲ್ಲಿ 55 ಕಿ.ಮೀ., ಮಂಡ್ಯ ಜಿಲ್ಲೆಯಲ್ಲಿ 58 ಕಿ.ಮೀ ಮತ್ತು ಮೈಸೂರು ಜಿಲ್ಲೆಯಲ್ಲಿ 5 ಕಿ.ಮೀ ಮೂಲಕ ಹಾದುಹೋಗುತ್ತದೆ.

ಹೆದ್ದಾರಿಯಲ್ಲಿ ಮೂರು ಟೋಲ್ ಪ್ಲಾಜಾಗಳಿವೆ. 2022–23 ಮತ್ತು 2025–26 ರ ನಡುವೆ, ಬೆಂಗಳೂರು ದಕ್ಷಿಣ ತಾಲೂಕಿನ ಕಣಿಮಿಣಿಕೆ ಟೋಲ್ ಪ್ಲಾಜಾದಲ್ಲಿ 282.14 ಕೋಟಿ ರೂ., ರಾಮನಗರ ತಾಲೂಕಿನ ಶೇಷಗಿರಿಹಳ್ಳಿ ಟೋಲ್ ಪ್ಲಾಜಾದಲ್ಲಿ 248.42 ಕೋಟಿ ರೂ. ಮತ್ತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು ಟೋಲ್ ಪ್ಲಾಜಾದಲ್ಲಿ 325.23 ಕೋಟಿ ರೂ. ಸಂಗ್ರಹವಾಗಿದೆ.

1,674 ಅಪಘಾತಗಳು, 215 ಸಾವು: 2023ರಿಂದ 2025 ರವರೆಗೆ ಎಕ್ಸ್ ಪ್ರೆಸ್ ವೇಯಲ್ಲಿ ಒಟ್ಟು 1,674 ಅಪಘಾತಗಳು ವರದಿಯಾಗಿದ್ದು, 215 ಮಂದಿ ಸಾವಿಗೀಡಾದರೆ, 311 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಹೆದ್ದಾರಿಯಲ್ಲಿ ವೇಗದ ಮಿತಿಯನ್ನು ಗಂಟೆಗೆ 100 ಕಿ.ಮೀ.ಗೆ ಇಳಿಸಲಾಗಿದೆ. ವೇಗವನ್ನು ಮೇಲ್ವಿಚಾರಣೆ ಮಾಡಲು ಮತ್ತು ದಂಡ ವಿಧಿಸಲು ವಿವಿಧ ಸ್ಥಳಗಳಲ್ಲಿ ಕಣ್ಗಾವಲು ಕ್ಯಾಮೆರಾಗಳನ್ನು ಅಳವಡಿಸಲಾಗಿದೆ, ಆದರೆ ಅಪಘಾತಗಳಲ್ಲಿ ಇಳಿಕೆ ಕಂಡು ಬಂದಿಲ್ಲ. ಸಂಚಾರ ನಿಯಂತ್ರಣ ಮತ್ತು ಸುರಕ್ಷತಾ ಕ್ರಮಗಳ ಮೇಲೆ ಹೆಚ್ಚಿನ ಒತ್ತು ನೀಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಒತ್ತಾಯಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸೊಳ್ಳೆ ಕಾಟ ತಡೆಯಲಾರದೆ ನಮ್ಮ ಸಿದ್ಲಿಂಗು ಮಂಚದ ಕೆಳಗೆ ಮಲಗಿದ್ದ.
ಅಲ್ಲಿಗೆ ಬಂದ ಮಿಂಚು ಹುಳುವನ್ನು ನೋಡಿ ಸೊಳ್ಳೆ ಅಂದ್ಕೊಂಡು,
ಅಯ್ಯೋ ಪಾಪಿ... ನಿನ್ನ ಬಾಯಿಗೆ ಮಣ್ ಹಾಕ,
ಬ್ಯಾಟರಿ ಹಾಕೊಂಡು ಇಲ್ಲಿಗೂ ಬಂದ್ ಬಿಟ್ಯಾ...!!

ಮೈಸೂರು ಮಿತ್ರ

ಶುಕ್ರವಾರ, 19 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಮಾನಸಿಕ ನೆಮ್ಮದಿಗಿಂತ ದೊಡ್ಡದಾದ ಶ್ರೀಮಂತಿಕೆ
ಈ ಜಗತ್ತಿನಲ್ಲಿ ಯಾವುದೂ ಇಲ್ಲ.

ವೇದ ಸುಳ್ಳಾದರೂ { ಕುಳಿತು ತಿಂದರೆ
ಗಾದೆ ಸುಳ್ಳಾಗದು { ಕುಡಿಕೆ ಹೊನ್ನು ಸಾಲದು

ನಿಮ್ಮ ಪತ್ರಗಳು

ಸಾಮಾಜಿಕ ಜಾಲತಾಣದಿಂದ ಜೀವನ ಬದಲಾಗುತ್ತಿದೆಯೇ?

ಮಾನ್ಯರೆ,

ಪ್ರಸ್ತುತ ಸಮಾಜದಲ್ಲಿ ಅನಿರೀಕ್ಷಿತ ಬದಲಾವಣೆಗಳು ಆಗುತ್ತಿವೆ. ಆ ಬದಲಾವಣೆಗೆ ಸಾಮಾಜಿಕ ಜಾಲತಾಣ ಕಾರಣ. ಹೌದು ಹೀಗಿನ ಯುಗವನ್ನು ಕಂಪ್ಯೂಟರ್ ಯುಗ ಹಾಗೂ ಸೋಶಿಯಲ್ ಮೀಡಿಯಾ ಯುಗ ಎಂದರೆ ಆಶ್ಚರ್ಯವೆನಿಸುವುದಿಲ್ಲ. ಏಕೆಂದರೆ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಮೊಬೈಲಿನ ಗೀಳು ಹೆಚ್ಚಾಗುತ್ತಿರುವುದನ್ನು ಕಾಣಬಹುದು. ಮೊದಲೆಲ್ಲಾ ಮಕ್ಕಳು ಗಿಲ್ಲಿ ದಾಂಡು, ಲಗೋರಿ, ಕುಂಟೆಬಿಲ್ಲೆ ಹೀಗೆ ಹಲವಾರು ದೇಶೀ ಆಟಗಳಲ್ಲಿ ಭಾಗಿಯಾಗುತ್ತಿದ್ದರು. ಶಾಲೆಗಳಿಗೆ ರಜೆಯಿದ್ದರೆ ಸಾಕು ಮನೆಯ ಹೊರಗೆ ಒಳಗೆ ಮಕ್ಕಳದ್ದೇ ಗದ್ದಲ. ಆದರೆ, ಇಂದು ಮನೆಯಲ್ಲಿ ಮಕ್ಕಳಿದ್ದರು ಇಲ್ಲದ ಹಾಗೆ ಭಾಸವಾಗುತ್ತದೆ. ಇನ್ನು ಹಿರಿಯರ ವಿಷಯಕ್ಕೆ ಬಂದರೆ ಪ್ರಾರಂಭದಲ್ಲಿ ಕಿರಿಯರಿಗೆ ಮೊಬೈಲ್ ಹುಚ್ಚು ಹಿಡಿಯುತ್ತಿದೆ ಎಂದು ಮಾತನಾಡುತ್ತಿದ್ದವರು ಈಗ ಅವರ ಕೈಗೆ ಒಂದು ಮೊಬೈಲ್ ಬಂದ ತಕ್ಷಣ ಕಿರಿಯರನ್ನು ಮೀರಿಸುವ ಹಾಗೆ ಮೊಬೈಲ್ ಬಳಕೆ ಮಾಡುತ್ತಿದ್ದಾರೆ.

ಮೊಬೈಲ್ ಬಳಕೆಯಿಂದ ಸಮಯ ವ್ಯರ್ಥವಾಗುತ್ತಿದೆ ಎಂದು ನಾನು ಹೇಳುವುದಿಲ್ಲ ಅದು ಎಲ್ಲರಿಗೂ ತಿಳಿದಿರುವ ವಾಸ್ತವ. ಮೊದಲೆಲ್ಲ ವಿದ್ಯಾಭ್ಯಾಸ ಹಾಗೂ ಉದ್ಯೋಗದ ಜತೆಗೆ ನೃತ್ಯ, ಸಂಗೀತ ಹಾಗೂ ಕ್ರೀಡೆ ಎಂಬಂತೆ ಕೆಲವೊಂದು ಅವ್ಯಾಸಗಳು ಇದ್ದವು. ಪ್ರಸ್ತುತ ಮೊಬೈಲ್ ನೋಡುವುದೇ ಒಂದು ಹವ್ಯಾಸವಾಗಿ ಬದಲಾಗಿದೆ. ಪ್ರತಿಯೊಬ್ಬರಿಗೂ ಮನರಂಜನೆಯ ಅವಶ್ಯಕತೆ ಖಂಡಿತವಾಗಿಯೂ ಇದೆ. ಆ ಕಾರಣಕ್ಕೆ ಸಾಮಾಜಿಕ ಜಾಲತಾಣವೂ ಕೇವಲ ಮನರಂಜನೆಯ ಅಸ್ತ್ರವಾಗಿ ಬಳಕೆಯಾಗಬೇಕೇ ವಿನಃ ನಮ್ಮ ಜೀವನವನ್ನೇ ಬದಲಾಯಿಸುವ ಅಸ್ತ್ರವಾಗಬಾರದು.

ಅತಿಯಾದ ಮೊಬೈಲ್ ಬಳಕೆಯಿಂದ ಸೋಮಾರಿಯಾಗುತ್ತಿದ್ದೀವಾ? ಸಮಯ ವ್ಯರ್ಥವಾಗುತ್ತಿದೆಯಾ? ಅನಾರೋಗ್ಯಕ್ಕೆ ತುತ್ತಾಗುತ್ತಿದ್ದೇವಾ? ಸಮಾಜಮುಖಿಯಾಗಿ ಬದುಕೋದನ್ನು ಮರೆಯುತ್ತಾ ಇದ್ದೇವಾ? ಋಣಾತ್ಮಕ ಚಿಂತಕರಾಗಿ ಬದಲಾಗ್ತಾ ಇದ್ದೇವಾ? ಈ ರೀತಿ ಹತ್ತು ಹಲವು ಪ್ರಶ್ನೆಗಳು ಎಲ್ಲರಲ್ಲಿಯೂ ಕಾಡಿರುತ್ತದೆ. ಹೀಗಂತೂ ಸೋಷಿಯಲ್ ಮೀಡಿಯಾದಲ್ಲಿ ಮೊಟ್ಟೆ, ಬಟಾಣಿ, ಪನ್ನೀರ್ ತಿಂದರೆ ಕ್ಯಾನ್ಸರ್ ಬರುತ್ತದೆ. ಎಡಬದಿಯಲ್ಲಿ ಮಲಗಿ ನಿದ್ರಿಸಿದರೆ ಹೃದಯಕ್ಕೆ ಘಾಸಿಯಾಗುತ್ತದೆ. ಬಲಬದಿಯಲ್ಲಿ ಮಲಗಿ ನಿದ್ರಿಸಿದರೆ ಆಹಾರ ಜೀರ್ಣವಾಗುವುದಿಲ್ಲ. ಈ ರೀತಿ ಆರೋಗ್ಯ, ಜೀವನ ಶೈಲಿಗೆ ಸಂಬಂಧಿಸಿದಂತೆ ಜನರಲ್ಲಿ ಮಾನಸಿಕವಾಗಿ ಭಯ ಹುಟ್ಟಿಸುವ ವಿಷಯಗಳನ್ನು ಅನೇಕರು ಪ್ರಸ್ತುತಪಡಿಸುತ್ತಿದ್ದಾರೆ. ಇದು ಸತ್ಯವೂ ಆಗಿರಬಹುದು ಅಥವಾ ಪ್ರಚಾರಕ್ಕಾಗಿ ಅವರು ಹುಟ್ಟು ಹಾಕುತ್ತಿರುವ ಅಪಪ್ರಚಾರವೂ ಆಗಿರಬಹುದು. ಇಂತಹ ವಿಷಯಗಳು ಸಹ ವ್ಯಕ್ತಿಗಳ ಚಿಂತನೆಯ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ದೂರದೂರಿನಲ್ಲಿ ಇರುವವರ ಸಂಪರ್ಕಕ್ಕಾಗಿ ಎಂದು ಪ್ರಾರಂಭಿಸಿದ ಮೊಬೈಲ್ ಸಂಪರ್ಕ ಇಂದು ಹತ್ತಿರದವರನ್ನೇ ದೂರ ಮಾಡುತ್ತಿದೆ. ಕಾಲ ಕಾಲಕ್ಕೆ ಮೊಬೈಲಿನ ವಿಧಗಳು ಬದಲಾದವು. ಸಾಮಾಜಿಕ ಜಾಲತಾಣ ಯುವಕ, ಯುವತಿಯರ ಮನಸ್ಥಿತಿ ಮೇಲೆ ಪರಿಣಾಮ ಬಿರುತ್ತಿದೆ. ನಮ್ಮ ಬದುಕಿನ ಒಳ್ಳೆಯ ಬದಲಾವಣೆಗೆ ಮತ್ತು ಕೆಟ್ಟ ಬದಲಾವಣೆಗೆ ನಾವೇ ಕಾರಣೀಭೂತರಾಗಿರುತ್ತೇವೆ. ಅನೇಕರು ಸಾಮಾಜಿಕ ಜಾಲತಾಣದಲ್ಲಿ ಪ್ರೇರೇಪಿತವಾಗಿ ಸಾಮಾನ್ಯ ಬದುಕಿನ ಶೈಲಿಯನ್ನೇ ಬದಲಾಯಿಸಿಕೊಂಡು ಸಾಗುತ್ತಿದ್ದಾರೆ. ಸಾಮಾಜಿಕ ಜಾಲತಾಣದ ಮೂಲಕ ಏನನ್ನಾದರೂ ನಂಬುವ ಮುನ್ನ, ಪ್ರೇರೇಪಿತವಾಗುವ ಮುನ್ನ ಒಮ್ಮೆ ಸ್ವಂತ ಆಲೋಚನೆ ಮಾಡೋಣ. **– ಸಹನ ಪುರುಷೋತ್ತಮ್, ಮೈಸೂರು**

ವಿಲೇವಾರಿಯಾಗದ ತ್ಯಾಜ್ಯ



ಮಾನ್ಯರೇ,

ಮೈಸೂರಿನ ಅಪೊಲೋ ಆಸ್ಪತ್ರೆಯ ಹಿಂಭಾಗದಲ್ಲಿರುವ ಬಿಜಿಎಸ್ ಪದವಿ ಪೂರ್ವ ಕಾಲೇಜಿನ ಎದುರಿನ ದೊಡ್ಡ ಮೋರಿಯಲ್ಲಿನ ತ್ಯಾಜ್ಯವನ್ನು ವಿಲೇವಾರಿ ಮಾಡದಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳು ತೀವ್ರ ತೊಂದರೆ ಎದುರಿಸುತ್ತಿದ್ದಾರೆ. ಸುಮಾರು ಎರಡು ಮೂರು ತಿಂಗಳ ಹಿಂದೆ ಈ ಮೋರಿಯಲ್ಲಿ ಸಂಗ್ರಹವಾಗಿದ್ದ ತ್ಯಾಜ್ಯವನ್ನು ತೆಗೆದು, ಮೋರಿಯ ಪಕ್ಕದಲ್ಲಿಯೇ ಅಲ್ಲಲ್ಲಿ ರಾಶಿ ಹಾಕಲಾಗಿದೆ. ಆದರೆ, ಇದುವರೆಗೂ ಈ ತ್ಯಾಜ್ಯವನ್ನು ವಿಲೇವಾರಿ ಮಾಡುವ ಕೆಲಸ ನಡೆದಿಲ್ಲ. ಪರಿಣಾಮವಾಗಿ, ಈ ಕಸದ ರಾಶಿಯಿಂದ ಹೊರಬರುತ್ತಿರುವ ದುರ್ವಾಸನೆಯಿಂದಾಗಿ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಗಾಳಿ ಬೀಸಿದಾಗಲೆಲ್ಲಾ ತ್ಯಾಜ್ಯದ ದುರ್ವಾಸನೆಯು ಮನೆಗಳನ್ನು ಆವರಿಸುತ್ತಿದ್ದು, ಕಸದ ಕಣಗಳು ಮತ್ತು ಹಗುರ ತ್ಯಾಜ್ಯವು ಮನೆ ಬಾಗಿಲಿಗೆ, ಕೆಲವೊಮ್ಮೆ ಮನೆಯೊಳಗೂ ಪ್ರವೇಶಿಸುತ್ತಿದೆ.ನಿವಾಸಿಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯೂ ಶುರುವಾಗಿದೆ. ಆದ್ದರಿಂದ, ಸಂಬಂಧಪಟ್ಟವರು ಕೂಡಲೇ ಗಮನಹರಿಸಿ, ಅಲ್ಲಿ ಶೇಖರಣೆಯಾಗಿರುವ ತ್ಯಾಜ್ಯವನ್ನು ತುರ್ತಾಗಿ ವಿಲೇವಾರಿ ಮಾಡಿ, ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕು ಎಂದು ಕೋರಲಾಗಿದೆ. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

ಮಹಿಳೆಯರ ರಕ್ಷಣೆಗೆ ಮುಂದಾಗಿ

ಮಾನ್ಯರೆ,

ಧನುರ್ಮಾಸ ಆರಂಭವಾದ ಕೂಡಲೇ ಎಲ್ಲೆಡೆ ದೇವಸ್ಥಾನಗಳಲ್ಲಿ ಬ್ರಾಹ್ಮಿ ಮುಹೂರ್ತದಲ್ಲಿ ಬೆಳಗಿನ ಜಾವ ಪೂಜೆ ಆರಂಭವಾಗುತ್ತದೆ. ಹೆಚ್ಚಿನದಾಗಿ ಮಹಿಳೆಯರು ಕುಟುಂಬದ ಒಳಿತಿಗಾಗಿ ಚಳಿ ಮಳೆ ಎನ್ನದೆ ಬೆಳಗ್ಗೆ ಹೋಗುತ್ತಾರೆ. ಆ ಸಮಯದಲ್ಲಿ ರಸ್ತೆಗಳಲ್ಲಿ ಜನರ ಓಡಾಟ ಕಡಿಮೆ ಇರುತ್ತದೆ. ಈ ಸಮಯದಲ್ಲಿ ಸರಗಳ್ಳರು ಹೊಂಚು ಹಾಕುತ್ತಿರುತ್ತಾರೆ. ಸರಗಳ್ಳರಿಗೆ ಅವಕಾಶ ಕೊಟ್ಟಂತಾಗಿರುತ್ತದೆ. ಆದ್ದರಿಂದ ಹೆಸರಾಂತ ದೇವಸ್ಥಾನಗಳ ಸುತ್ತಮುತ್ತ ಪೊಲೀಸರ ನಿಯೋಜನೆ ಮಾಡುವುದು ಸೂಕ್ತ. ಅಕಸ್ಮಿಕವಾಗಿ ಸರಗಳ್ಳತನವಾದರೆ ಸುಲಭವಾಗಿ ಕಳ್ಳರನ್ನು ಹಿಡಿಯಬಹುದು. ಇದರ ಬಗ್ಗೆ ಪೊಲೀಸ್ ಇಲಾಖೆ ಯೋಚಿಸುವುದು ಒಳ್ಳೆಯದು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಗುರುವಾರದ (ಡಿ. 17) 'ಮೈಸೂರು ಮಿತ್ರ' ಸಂಚಿಕೆಯ ಏಳನೇ ಪುಟದಲ್ಲಿ 'ಮೈಸೂರು ಜೈಲ್‌ಗೆ ಬಂಧೀಖಾನೆ ಮಹಾನಿರ್ದೇಶಕ ಅಶೋಕ್‌ಕುಮಾರ್ ದಿಢೀರ್ ಭೇಟಿ: ಪರಿಶೀಲನೆ' ಶೀರ್ಷಿಕೆಯಲ್ಲಿ 'ಅಲೋಕ್ ಕುಮಾರ್' ಎಂದು ಓದಿಕೊಳ್ಳುವುದು. ಕಣ್ತಪ್ಪಿನಿಂದಾದ ಪ್ರಮಾದಕ್ಕೆ ವಿಷಾದಿಸುತ್ತೇವೆ. **– ಸಂ.**



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಶಾಂತಿಯುತ ಮರಣ ಮಾರ್ಗ...



> "ಸಾಯುತ್ತಿರುವವರ ನಿಜ ಸ್ವಭಾವ ಏನೆಂದು ತಿಳಿದಿದ್ದರೆ, ಅದಕ್ಕೆ ಸಂಬಂಧಿಸಿದ ಚಕ್ರದ ಮೇಲೆ ಮಾತ್ರ ವಿಭೂತಿಯನ್ನು ಹಚ್ಚುವುದು. ಆಗ ಅವರ ಗಮನ ಆ ಚಕ್ರದಲ್ಲೇ ಕೇಂದ್ರಿತವಾಗಲು ಸಹಾಯ ಆಗುವುದು. ಉದಾಹರಣೆಗೆ ಒಬ್ಬರು ಬಹಳ ಪ್ರೇಮಭರಿತ ವ್ಯಕ್ತಿಯಾಗಿದ್ದರೆ ವಿಭೂತಿಯನ್ನು ನೀರಿನಲ್ಲಿ ಕಲಸಿ ಅಂಟುವಂತೆ ಮುದ್ದೆಮಾಡಿ ಅನಾಹತ ಚಕ್ರದ(ಎದೆ ಗೂಡುಗಳ ನಡುವೆ) ಮೇಲೆ ಹಚ್ಚಬೇಕು. ಆಗ ಅವರ ಶಕ್ತಿ ಅಲ್ಲಿ ಕೇಂದ್ರಿತವಾಗುವುದು. ಎಲ್ಲ ಶಕ್ತಿ ಅಲ್ಲಿ ಒಟ್ಟುಗೂಡಿದರೆ ಅವರು ಆ ಚಕ್ರದ ಮೂಲಕ ಪ್ರಾಣ ಬಿಡುವ ಸಾಧ್ಯತೆ ಇದೆ; ಅದವರಿಗೆ ಬಹಳ ಒಳ್ಳೆಯದು.

ಜಗತ್ತಿನಲ್ಲಿ ಎಲ್ಲರೂ ಕಡೇ ದಿನಗಳು ಹತ್ತಿರವಾದಂತೆ, ಶಾಂತಿಯುತ ಸಾವಿಗೆ ಸನ್ನದ್ಧರಾಗುವುದರ ಬಗ್ಗೆ ಮಾತನಾಡುತ್ತಾರೆ. ಅವರ ಪ್ರಕಾರ ಅವರು ಸಲೀಸಾದ ಮೃದುವಾದ ನಿರ್ಗಮನ ಬಯಸುವರೇ ಹೊರತು ಕಷ್ಟದಿಂದ ಒದ್ದಾಡಿ ಸಾಯುವುದನ್ನಲ್ಲ. ಸಾವನ್ನು ಸಲೀಸು ಮಾಡಲು ಸರಳ ವಿಧಾನ ಎಂದರೆ ಒಂದು ದೀಪ–ತುಪ್ಪದ ದೀಪ ಅಥವಾ ಬೆಣ್ಣೆಯ ದೀಪವನ್ನು ನಿರಂತರ ಬೆಳಗಿಸುತ್ತಿರುವುದು. 24 ಗಂಟೆಗಳ ಕಾಲ ಉರಿಯುತ್ತಿರುವ ದೀಪವನ್ನು ಮರಣಶಯ್ಯೆಯಲ್ಲಿ ಇರುವವರ ಬಳಿ ಇಡಬೇಕು. ಇದರಿಂದ ವಿಶಿಷ್ಟ ಪ್ರಭೆ ಪಸರಿಸಿ, ಅಂತ್ಯಕಾಲದ ಏರಿಳಿತಗಳನ್ನು ಆದಷ್ಟು ಕಡಿಮೆ ಮಾಡುತ್ತದೆ.

ಯಾವಾಗಲೂ ಉರಿಯುತ್ತಿರುವ ಒಂದು ದೀಪ ನಿಮ್ಮ ಮನೆಯಲ್ಲಿದ್ದರೆ ಬಹಳ ಲಾಭದಾಯಕ ಮತ್ತು ನೀವು ಇರುವ ರೀತಿಯಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತದೆ. ನಿಮ್ಮೊಳಗಿನ ಶಕ್ತಿಗಳು ಅಖಂಡವಾಗಿ ಹರಿಯುವಂತಾಗಲು ದೀಪದ ಆಸುಪಾಸಿನಲ್ಲಿದ್ದರೆ ಸಾಕು. ಈಗ ಬಹಳ ಬದಲಾವಣೆ ಆಗಿದೆ, ಕಾರಣ, ಜ್ಞಾನಕ್ಕಿಂತಲೂ ಬೇಗ ಅಜ್ಞಾನ ಹರಡುತ್ತದೆ. ಕೇವಲ 25 ವರ್ಷಗಳ ಹಿಂದೆ ಭಾರತದಲ್ಲಿ ನಂದಾದೀಪ ಇಲ್ಲದ ಮನೆಯೇ ಇರಲಿಲ್ಲ. ನಿಮ್ಮ ಮನೆಯಲ್ಲಿ ಸದಾ ಬೆಳಗುತ್ತಿರುವ ದೀಪ ಇಲ್ಲದಿದ್ದರೆ ಅದು ಸ್ಮಶಾನದಂತೆ ಎನ್ನುತ್ತಿದ್ದರು.

ಇನ್ನೂ ಒಂದನ್ನು ಮಾಡಬಹುದು, ಅವರು ಒಪ್ಪಿದರೆ ಒಂದು ಸಾಮಾನ್ಯ ಜಪ ನಿರಂತರವಾಗಿ ಕೇಳಿಸುವಂತೆ ಹಾಕಿರಬಹುದು. ಉದಾಹರಣೆಗೆ 'ಬ್ರಹ್ಮಾನಂದ ಸ್ವರೂಪ' ಎನ್ನುವ ಜಪದ ಸಿ.ಡಿ.ಯನ್ನು ಹಿನ್ನೆಲೆಯಲ್ಲಿ ಮೆಲುವಾಗಿ ಕೇಳುವಷ್ಟು ಹಾಕಬಹುದು. ಇಂತಹ ಪ್ರತಿಷ್ಠೆಗೊಳಿಸಿದ ಯಾವುದೇ ಜಪವನ್ನು ಹಾಕಿದ್ದರೆ ಕಷ್ಟವಾದ ಸಾವನ್ನು ತಡೆಯಬಹುದು.

ಅವರ ಬಳಿ ನಂದಾದೀಪ ಮತ್ತು ನಿರಂತರವಾದ ಜಪ ಇದ್ದರೆ ಕಷ್ಟವಾದ ಸಾವನ್ನು ದೂರ ಮಾಡಬಹುದು ಮತ್ತು ಅವರ ಸಾವು ರುಜುವಾತಾದ ನಂತರವೂ 14 ದಿನಗಳವರೆಗೆ ಇದು ಮುಂದುವರಿಯಬೇಕು. ಅವರು ಸತ್ತಿರುವುದು ವೈದ್ಯಕೀಯವಾಗಿ ಪ್ರಮಾಣೀಕರಿಸಲಾಗಿದ್ದರೂ, ಅವರ ಸಾವು ಪೂರ್ಣವಾಗಿ ಆಗಿರುವುದಿಲ್ಲ. ಸಾವು ನಿಧಾನವಾಗಿ ಆಗುವುದು. ಸತ್ತ ನಂತರ 11 ದಿನಗಳವರೆಗೆ ಆ ದೇಹದಲ್ಲಿ ಕೂದಲು ಮತ್ತು ಉಗುರು ಬೆಳೆಯುವುದನ್ನು ನೀವೇ ಗಮನಿಸಿರಬಹುದು. ಅನೇಕ ವೇಳೆ 14 ದಿನದವರೆಗೆ ಬೆಳೆಯುವುದು. ಕಾರಣ, ಸಾವು ನಿಧಾನವಾಗಿ ಆಗುವುದು. ಸತ್ತ ದಿನ ಪೂರ್ಣವಾಗಿರುವುದಿಲ್ಲ. ಜೀವ ದೇಹದಿಂದ ಹೋಗುವುದು ಹಂತಹಂತವಾಗಿ ಆಗುವುದು. ವ್ಯಾವಹಾರಿಕವಾಗಿ ಶ್ವಾಸಕೋಶ, ಹೃದಯ, ಕಿಡ್ನಿ, ಮೆದುಳು ಮುಂತಾದವು ನಿಷ್ಕ್ರಿಯವಾಗುತ್ತವೆ; ವೈದ್ಯರು ಸತ್ತರು ಎಂದು ಹೇಳಿಬಿಡುವರು. ಆದರೆ ಪೂರ್ಣ ಸಾವು ಆಗಿರುವುದಿಲ್ಲ. ವ್ಯಕ್ತಿಯ ದೇಹವನ್ನು ಸುಟ್ಟಮೇಲೂ ಅವರಿನ್ನೂ ಸತ್ತಿರುವುದಿಲ್ಲ. ಏಕೆಂದರೆ ಅವರು ಬೇರೆಯ ಆಯಾಮಕ್ಕೆ ಇನ್ನೂ ಹೊರಟಿರುವುದಿಲ್ಲ.

ಈ ಸಂಗತಿಯ ಆಧಾರದ ಮೇಲೆ ಭಾರತದಲ್ಲಿ 14 ದಿನಗಳವರೆಗೆ ವಿವಿಧ ಸಂಸ್ಕಾರಗಳನ್ನು ಮರಣಿಸಿದವರಿಗಾಗಿ ಮಾಡುವರು. ದುರದೃಷ್ಟವೆಂದರೆ, ಇದರ ಬಗ್ಗೆ ಜ್ಞಾನವಾಗಲೀ, ಶಕ್ತಿಯಾಗಲೀ ಇಲ್ಲವಾಗಿ ಜನ ಜೀವನೋಪಾಯಕ್ಕಾಗಿ ಅಂತ್ಯಸಂಸ್ಕಾರ ಮಾಡುತ್ತಾರೆ. ಕೆಲವೇ ಜನ ಅಂತ್ಯ ಸಂಸ್ಕಾರಗಳ ಮಹತ್ವ ಅರಿತಿರುವರು. ಪೂರ್ಣಪ್ರಜ್ಞೆಯಲ್ಲಿ ಪ್ರಾಣ ಬಿಟ್ಟವರಿಗೆ ಮಾತ್ರ ಇದು ಬೇಕಿಲ್ಲ; ಮಿಕ್ಕಂತೆ ಎಲ್ಲರಿಗೂ ಅಂತ್ಯಸಂಸ್ಕಾರ ಮಾಡುವರು. ಏಕೆಂದರೆ, ಅವರಿಗೆ ದಾರಿ ತೋರಿಸಬೇಕು. ಇಲ್ಲವಾದರೆ ಅಲ್ಲೇ ಸುತ್ತಾಡುತ್ತಿರುವರು. ಜೀವನ ಪೂರ್ತಿ ಅಜ್ಞಾನದಲ್ಲೇ ಬದುಕಿದವರಿಗೆ ಸಾವಿನಲ್ಲಿ ಜ್ಞಾನೋದಯ ಆಗುವುದಿಲ್ಲ. ಅವರು ತಮಗೆ ಸಂಬಂಧಪಟ್ಟ ವಸ್ತುಗಳು ಮತ್ತು ಸ್ವಜನರ ಬಂಧನದಲ್ಲೇ ಇರುತ್ತಾರೆ.

ಆದ್ದರಿಂದ, ಯಾರಾದರೂ ಸತ್ತರೆ ಮೊದಲು ಮಾಡುವ ಕೆಲಸವೆಂದರೆ ಅವರ ದೇಹಕ್ಕೆ ಅಂಟಿದಂತೆ ಬಳಸುತ್ತಿದ್ದ ವಸ್ತುಗಳು ಮತ್ತು ಒಳ ಉಡುಪುಗಳನ್ನು ಸುಡುವುದು. ಅವರ ಬೇರೆ ಬಟ್ಟೆಗಳನ್ನು ಬೇರೆ ಬೇರೆಯವರಿಗೆ ಹಂಚಿಬಿಡುವುದು. ಇದನ್ನು ಸತ್ತ ಮೂರು ದಿನಗಳೊಳಗೆ ಮಾಡಬೇಕು. ಒಳಬಟ್ಟೆಗಳನ್ನು ಸುಟ್ಟರೆ ಹೊರಬಟ್ಟೆ, ಆಭರಣ ಎಲ್ಲವನ್ನು ಆದಷ್ಟು ಬೇಗ ಹಂಚಿಬಿಡಬೇಕು. ಇದರಿಂದ ಸತ್ತವರಿಗೆ ಗೊಂದಲವಾಗುವುದು. ಎಲ್ಲಿ ಸುತ್ತಾಡಬೇಕೆಂದು ಅವರಿಗೆ ತಿಳಿಯದಾಗುವುದು. ಅವರ ಸಾಮಾನುಗಳ ಕಟ್ಟನ್ನು ಒಬ್ಬರಿಗೇ ಕೊಟ್ಟರೆ ತಮ್ಮ ದೇಹದ ವಾಸನೆ ಹಿಡಿದು ಅಲ್ಲಿಗೆ ಹೋಗುವರು. ಅವರ ದೇಹದ ಶಕ್ತಿ ಆ ಬಟ್ಟೆಗಳಲ್ಲಿ ಇರುತ್ತದೆ. ಇವೆಲ್ಲವನ್ನು ಮಾಡುವುದು ಸತ್ತವರ ಸಮಾಧಾನಕ್ಕಷ್ಟೇ ಅಲ್ಲದೆ ಅವರ ಕುಟುಂಬ ಮತ್ತು ಬಂಧುಗಳ ಸಮಾಧಾನಕ್ಕಾಗಿ ಮಾಡುವರು. ಅಲ್ಲಿಗೆ ಸತ್ತವರದ್ದು ಮುಗಿಯಿತೆಂದು ಮನದಟ್ಟಾಗುವುದು. ಬದುಕಿದ್ದಾಗ ಎಷ್ಟೇ ಅಕ್ಕರೆ ಪ್ರೀತಿ ಇದ್ದರೂ ಸತ್ತಮೇಲೆ ಅದೆಲ್ಲ ಮುಗಿಯಿತು.

ಮಾಡಬಹುದಾದ ಇನ್ನೊಂದು ಸಂಗತಿ ಎಂದರೆ, ಸಾಯುತ್ತಿರುವವರ ನಿಜ ಸ್ವಭಾವ ಏನೆಂದು ತಿಳಿದಿದ್ದರೆ, ಅದಕ್ಕೆ ಸಂಬಂಧಿಸಿದ ಚಕ್ರದ ಮೇಲೆ ಮಾತ್ರ ವಿಭೂತಿಯನ್ನು ಹಚ್ಚುವುದು. ಆಗ ಅವರ ಗಮನ ಆ ಚಕ್ರದಲ್ಲೇ ಕೇಂದ್ರಿತವಾಗಲು ಸಹಾಯ ಆಗುವುದು. ಉದಾಹರಣೆಗೆ ಒಬ್ಬರು ಬಹಳ ಪ್ರೇಮಭರಿತ ವ್ಯಕ್ತಿಯಾಗಿದ್ದರೆ ವಿಭೂತಿಯನ್ನು ನೀರಿನಲ್ಲಿ ಕಲಸಿ ಅಂಟುವಂತೆ ಮುದ್ದೆಮಾಡಿ ಅನಾಹತ ಚಕ್ರದ(ಎದೆ ಗೂಡುಗಳ ನಡುವೆ) ಮೇಲೆ ಹಚ್ಚಬೇಕು. ಆಗ ಅವರ ಶಕ್ತಿ ಅಲ್ಲಿ ಕೇಂದ್ರಿತವಾಗುವುದು. ಎಲ್ಲ ಶಕ್ತಿ ಅಲ್ಲಿ ಒಟ್ಟುಗೂಡಿದರೆ ಅವರು ಆ ಚಕ್ರದ ಮೂಲಕ ಪ್ರಾಣ ಬಿಡುವ ಸಾಧ್ಯತೆ ಇದೆ; ಅದವರಿಗೆ ಬಹಳ ಒಳ್ಳೆಯದು.

ಇದರ ನಕಾರಾತ್ಮಕ ಮಗ್ಗುಲೆಂದರೆ ಇದರ ಅರಿವಿರುವ ಜನ ಇದನ್ನು ದುರುಪಯೋಗ ಮಾಡಬಹುದು. ಹಿಂದೆ ರಾಜರು ಸೆರೆಯಾದ ಶತ್ರುರಾಜನಿಗೆ ಬಹಳ ಹೀನವಾದ ಸಾವು ಬರುವಂತೆ ಮಾಡುತ್ತಿದ್ದರು. ಏಕೆಂದರೆ ಮನಶ್ಶಾಂತಿ ಪಡೆಯಲು ಬಹಳ ಕಾಲ ಹಿಡಿಯುವುದು. ಸತ್ತ ಮೇಲೂ ಶತ್ರುವಿನ ಜೀವಯಾತನೆ ಅನುಭವಿಸುವಂತೆ ಮಾಡುವುದು ಅವರ ಉದ್ದೇಶವಾಗಿರುತ್ತಿತ್ತು. ಜನ ಅನೇಕ ರೀತಿಯಲ್ಲಿ ಇದರ ದುರುಪಯೋಗ ಮಾಡಿದ್ದಾರೆ.

ಸಾಮಾನ್ಯವಾಗಿ, ಜಗತ್ತಿನೆಲ್ಲೆಡೆ ಯಾವುದೇ ಸಂಸ್ಕೃತಿಯಿರಲಿ, 'ನಿಮ್ಮ ಶತ್ರುವೇ ಸಾಯುತ್ತಿದ್ದರೂ ಅವರ ಸುತ್ತ ಸ್ವಲ್ಪ ಶಾಂತಿಯುತ ವಾತಾವರಣ ನಿರ್ಮಿಸಬೇಕು. ಕೆಟ್ಟ ಕೆಲಸ ಮಾಡಬಾರದು' ಎನ್ನುವರು. ಈ ತಿಳುವಳಿಕೆ ಎಲ್ಲ ಸಂಸ್ಕೃತಿಗಳಲ್ಲೂ ಇವೆ ಅಲ್ಲವೇ ನೀವು ಗುಂಡಿಟ್ಟು ಕೊಂದಿರಬಹುದು, ಜೀವ ಹೋಗುತ್ತಿರುವಾಗ ಗೌರವದಿಂದ ನೀವು ನಿಮ್ಮ ಟೋಪಿ ತೆಗೆಯುವಿರಿ ಇಲ್ಲವೇ 'ರಾಮ ರಾಮ' ಅಥವಾ ಇನ್ನೇನಾದರೂ ಎನ್ನುವಿರಿ. ಯಾರಾದರೂ ಸಾಯುತ್ತಿರುವಾಗ ಅಲ್ಲಿಗೆ ಆಟ ಮುಗಿಯಿತು. ಜನ ಇದನ್ನು ಮಾಡುತ್ತಿದ್ದಾರೋ ಇಲ್ಲವೋ, ಅದರ ಅರಿವಂತೂ ಜಗತ್ತಿನೆಲ್ಲೆಡೆ ಜನರಿಗಿದೆ.

ಈ ಕಾರಣಕ್ಕಾಗಿಯೇ ಸತ್ತಿರುವವರನ್ನು ಗೌರವಿಸದಿದ್ದರೆ ನಿಮ್ಮೊಳಗೆ ಶಾಂತಿ ಇರುವುದಿಲ್ಲ. ದೇಹಕ್ಕೆ ಗೌರವವಲ್ಲ, ಅಲ್ಲಿಂದ ನಿಧಾನದಲ್ಲಿ ನಿರ್ಗಮಿಸುತ್ತಿರುವ ಜೀವಕ್ಕೆ ಗೌರವ. ಅವನು ಬದುಕಿದ್ದಾಗ ಹೇಗಾದರೂ ವರ್ತಿಸಿರಬಹುದು, ಸಾವಿನಲ್ಲಾದರೂ ಒಳ್ಳೆಯ ವಿದಾಯ ಸಿಗಬೇಕು. ಪ್ರತಿಯೊಬ್ಬ ಮಾನವನಿಗೂ ಈ ಉದ್ದೇಶ ಇರಬೇಕು. ಅಷ್ಟೂ ಇಲ್ಲವಾದರೆ ಅವನು ಮೃಗಕ್ಕೂ ಕೀಳಾದಂತೆ. ಮೃಗವೂ ಸಹ ಹಸಿವಿದ್ದರೆ ತಾನು ಸಾಯಿಸಿದ್ದನ್ನು ತಿನ್ನುತ್ತದೆ, ಇಲ್ಲವೇ ಸುಮ್ಮನೆ ಮುಂದೆ ಸಾಗುತ್ತದೆ ಅಲ್ಲವೇ? ಆದರೆ ಕೋಪ ಅಥವಾ ದ್ವೇಷದಿಂದ ಕೆಟ್ಟ ಯೋಚನೆ ಮನುಷ್ಯರಲ್ಲಿ ಬಂದರೆ ಅದು ಅತಿಹೀನಸ್ತರಕ್ಕೆ ಇಳಿದಿರುವ ಮನಸ್ಸು.

(ಸದ್ಗುರುಗಳು ಒಬ್ಬ ಯೋಗಿ, ಅನುಭಾವಿ ಹಾಗೂ ದಾರ್ಶನಿಕ. isha.sadhguru.org/in/kn)
(ಸದ್ಗುರುಗಳ ಇತರ ಪುಸ್ತಕ/ ವಿವರಗಳಿಗೆ ಸಂಪರ್ಕಿಸಿ– kannadapublications@ishafoundation.org)

ಅಪ್ರಾಪ್ತ ದ್ವಿಚಕ್ರ ವಾಹನ ಚಾಲನೆ; ಪೋಷಕರಿಗೆ 25 ಸಾವಿರ ದಂಡ

ಮೈಸೂರು: ದ್ವಿಚಕ್ರ ಚಾಲನೆ ಮಾಡಿದ ಅಪ್ರಾಪ್ತನ ಪೋಷಕರಿಗೆ ನ್ಯಾಯಾ ಲಯ 25 ಸಾವಿರ ರೂ. ದಂಡ ವಿಧಿಸಲಾಗಿದೆ.

ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕೆ.ಎಸ್.ಗಣೇಶ್ ಗಸ್ತಿನಲ್ಲಿದ್ದಾಗ, ಅಕ್ಕಮಹಾದೇವಿ ರಸ್ತೆಯಲ್ಲಿ ಅಪ್ರಾಪ್ತನೊಬ್ಬ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿರುವುದನ್ನು ಗಮನಿಸಿ, ವಿಚಾರಿಸಿದ್ದಾರೆ. ನಂತರ ವಾಹನ ವಶಕ್ಕೆ ಪಡೆದು, ಅಪ್ರಾಪ್ತನ ಪೋಷಕರನ್ನು ಠಾಣೆಗೆ ಕರೆಸಿ, ನೋಟಿಸ್ ಜಾರಿ ಮಾಡಿದ್ದಾರೆ. ಬಳಿಕ 2ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ವರದಿ ಕಳುಹಿಸಿಕೊಡಲಾಗಿತ್ತು. ಪ್ರಕರಣ ಪರಿಶೀಲಿಸಿದ ನ್ಯಾಯಾಲಯ ಅಪ್ರಾಪ್ತನ ಪೋಷಕರಿಗೆ 25 ಸಾವಿರ ದಂಡ ವಿಧಿಸಿದೆ. ಅಪ್ರಾಪ್ತರು ವಾಹನ ಚಾಲನೆ ಮಾಡಲು ಅವಕಾಶ ನೀಡಿದರೆ ಪೋಷಕರು ಹಾಗೂ ವಾಹನ ನೀಡಿದವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಪೊಲೀಸ್ ಆಯುಕ್ತರ ಕಚೇರಿಯ ಪ್ರಕಟಣೆ ಎಚ್ಚರಿಸಿದೆ.

ಡಿ.23 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು,ಡಿ.18– ಆಲನಹಳ್ಳಿ ಫೀಡರ್‌ಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.23 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಘಂಟೆಯವರೆಗೆ ಆಲನಹಳ್ಳಿ ಗ್ರಾಮ, ಗಿರಿದರ್ಶಿನಿ ಬಡಾವಣೆ, ಪೊಲೀಸ್ ಬಡಾವಣೆ 1ನೇ ಮತ್ತು 2ನೇ ಹಂತ, ನೇತಾಜಿನಗರ, ಕೆ.ಎಸ್.ಆರ್.ಟಿ.ಸಿ. ಬಡಾವಣೆ, ನಂದಿನಿ ಬಡಾವಣೆ 1ನೇ ಮತ್ತು 2ನೇ ಹಂತ, ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಪ್ರೊ.ಎಂ.ಕೃಷ್ಣೇಗೌಡರ ನಾಲ್ಕು ಕೃತಿಗಳ ಬಿಡುಗಡೆ

ಇಂದು ಅನ್ಯಾಯದ ವಿರುದ್ಧ ಸಿಡಿದೇಳುವಲ್ಲಿ ಸಾರ್ವಜನಿಕ ಸಿಟ್ಟಿನ ಅಭಾವ ಸೃಷ್ಟಿಯಾಗಿದೆ ; ಮಾಜಿ ಸ್ಪೀಕರ್ ಕೆ.ಆರ್. ರಮೇಶ್‌ಕುಮಾರ್ ಬೇಸರ

ಮೈಸೂರು,ಡಿ.18(ಪಿಎಂ)– ಇಂದು ಅನ್ಯಾಯದ ವಿರುದ್ಧ ಸಿಡಿದೇಳುವಲ್ಲಿ ಸಾರ್ವಜನಿಕರ ಸಿಟ್ಟಿನ ಅಭಾವ ಸೃಷ್ಟಿಯಾಗಿದೆ ಎಂದು ಕರ್ನಾಟಕ ವಿಧಾನಸಭೆ ಮಾಜಿ ಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಬೋಗಾದಿ ರಸ್ತೆಯ ವಾಕ್ ಶ್ರವಣ ಸಂಸ್ಥೆ ಎದುರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಅನಿಕೇತನ ಸೇವಾ ಟ್ರಸ್ಟ್ ಮತ್ತು ವಿಸ್ಮಯ ಬುಕ್‌ಹೌಸ್ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಅವರ ನಾಲ್ಕು ಕೃತಿಗಳ (ಹೊಳೆಯ ಮರಳು, ಹೊಂಗೆಯ ನೆರಳು, ಯಾಲಕ್ಕಿಗೊನೆ ಮತ್ತು ಅವರೆಯ ಸೊನೆ) ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುರುವಾರ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅವರ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಅನ್ಯಾಯದ ವಿರುದ್ಧ ಸಿಡಿದೇಳುವ ಸಾರ್ವಜನಿಕ ಸಿಟ್ಟು ಇಂದು ಇಲ್ಲವಾಗುತ್ತಿದ್ದು, ಇಂತಹ ಅಭಾವಗಳ ನಡುವೆ ಹೇಗೆ ಬದುಕುತ್ತಿದ್ದೇವೆಯೋ ನಮಗೇ (ಸಮಾಜಕ್ಕೆ) ಗೊತ್ತಿಲ್ಲದಂತಾಗಿದೆ. ನಾವು ಏನೇನೋ ಮಾತನಾಡುತ್ತೇವೆ. ಮೊನ್ನೆ ಏರೋಪ್ಲೇನ್ ಹಾರಾಟ ಸ್ಥಗಿತವಾಗಿದ್ದರ ಬಗ್ಗೆ ಮಾತನಾಡಿದ್ದೆವು. ಸಕ್ಕರೆ, ಗೊಬ್ಬರ ಅಭಾವ ಎಂದು ಮಾತನಾಡುತ್ತೇವೆ. ಅವೆಲ್ಲವೂ ಕೃತಕ ಅಭಾವಗಳು. ಆದರೆ ನಿಜವಾಗಿ ಇರಬೇಕಿದ್ದ ಸಾರ್ವಜನಿಕ ಸಿಟ್ಟಿಗೆ ಇಂದು ಅಭಾವ ಸೃಷ್ಟಿಯಾಗಿದೆ. ಎರಡನೇ ಅಭಾವವೆಂದರೆ ಅದು ಸಾರ್ವಜನಿಕ ಲಜ್ಜೆಯಾಗಿದ್ದು, ಇಂದು ನಮಗೆ ಲಜ್ಜೆಯೇ ಇಲ್ಲವಾಗಿದೆ. ಇಂತಹ ಸನ್ನಿವೇಶದಲ್ಲಿ ಹೇಗೆ ಬದುಕುತ್ತಿದ್ದೇವೋ ನಮಗೆ ಗೊತ್ತಿಲ್ಲವಾಗಿದೆ ಎಂದರು.

ಹಂಗಿಲ್ಲದವರಿಗೆ ನೆಮ್ಮದಿ ಇಲ್ಲ: ಪ್ರಸ್ತುತ ಸಮಾಜದಲ್ಲಿ ಈಗ ಹಂಗು ಬಹಳ ಅನಿವಾರ್ಯವಾಗಿದೆ. ನ್ಯಾಯಾಧೀಶರು, ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳು ಹಾಗೂ ರಾಜ್ಯಪಾಲರಿಗೂ ಹಂಗೇ. ಯಾವುದೇ ಹಂಗು ಇಲ್ಲದೇ ಬದುಕುವವರನ್ನು ಇಂದು ನೋಡುವುದೇ ಕಷ್ಟವಾಗಿದೆ. ಯಾರ ಹಂಗಿಗೂ ಒಳಗಾಗಬಾರದು ಎಂದು ನಿರ್ಭೀತಿಯಿಂದ ಬದುಕುವವರಿಗೆ ಇಂದು ನೆಮ್ಮದಿ ಇಲ್ಲವಾಗುತ್ತಿದೆ ಎಂದು ವಿಶ್ಲೇಷಿಸಿದರು.

ಬರೀ ಆತ್ಮವಂಚನೆ: ಕೈ ಕುಲುಕುತ್ತಾ ಸುಳ್ಳುಗಳನ್ನೇ ಹೇಳುತ್ತಲೇ ಇಂದು ಸಮಾಜ ಆತ್ಮವಂಚನೆಯಲ್ಲಿ ಬದುಕುವಂತಾಗಿದೆ. ಆತ್ಮವಂಚನೆ ಇರಬಾರದು ಎನ್ನುತ್ತೇವೆ. ಆದರೆ ಈಗ ಬೆಳಗ್ಗೆ ಏಳುತ್ತಿದ್ದಂತೆಯೇ ಆತ್ಮವಂಚನೆಯಲ್ಲಿ ಬದುಕುವಂತಾಗಿದೆ. ಹಳೇ ಕಾಲದಲ್ಲಿ ರಾಜರು, ಚಕ್ರವರ್ತಿಗಳು ಇರುತ್ತಿದ್ದರು. ಅವರು ಬಲಾಢ್ಯರಾಗಿ ಹಿಂಸೆಯ ಮೂಲಕ ದೊಡ್ಡ ಮನುಷ್ಯರು ಎನ್ನಿಸಿಕೊಳ್ಳುವ ಸ್ಥಾನ ಅಲಂಕರಿಸುತ್ತಿದ್ದರು. ಅಂತಹವರನ್ನು ಅಪಶಕುನ ಎಂಬಿತ್ಯಾದಿ ವಿಚಾರ ಮುಂದಿಟ್ಟುಕೊಂಡು ಒಂದು ವರ್ಗದವರು ನಿಯಂತ್ರಿಸುತ್ತಿದ್ದರು. ರಾಜನಿಗೆ ವಯಸ್ಸಾದಂತೆ ತನ್ನ ಮಗ ರಾಜನಾಗಬೇಕೆಂಬ ಆಸೆ ಮೂಡುತ್ತಿತ್ತು. ಆಗ ರಾಜನ ಪುತ್ರ ಅವಿವೇಕಿಯಾಗಿದ್ದರೂ ಯೋಗ್ಯ ಎಂದು ಇಡೀ ಸಮಾಜಕ್ಕೆ ಒಪ್ಪಿಸುವ ಪ್ರಯತ್ನ ನಡೆಯುತ್ತಿತ್ತು. ಅದಕ್ಕೆ ಹೊಗಳು ಭಟ್ಟರು ಇರುತ್ತಿದ್ದರು ಎಂದರು.

ಅದೇ ರೀತಿಯಲ್ಲಿ ಈಗ ಗ್ರಾಮ ಪಂಚಾಯಿತಿಯಿಂದ ಹಿಡಿದು ಪ್ರಧಾನಮಂತ್ರಿ ಕಚೇರಿಯವರೆಗೆ ಹೊಗಳು ಭಟ್ಟರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸುಳ್ಳನ್ನೇ ಸತ್ಯವೆಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಎಲ್ಲವೂ ಈಗ ಯಾಂತ್ರಿಕೃತ ಮತ್ತು ಕೃತಕವಾಗಿದೆ ಎಂದರು.

ಕೃಷ್ಣೇಗೌಡರ ಎಲ್ಲಾ ಕೃತಿಗಳು ಹೃದಯಕ್ಕೆ ಸಂಬಂಧಿಸಿದ್ದಾಗಿವೆ. ಅವುಗಳ ಶೀರ್ಷಿಕೆಯಿಂದ ಅದನ್ನು ಅರ್ಥ ಮಾಡಿಕೊಳ್ಳಬಹುದು. ಕೃಷ್ಣೇಗೌಡರು ಹೆಸರಿಗೆ ಮಾತ್ರ ನಗರ ಪ್ರದೇಶದಲ್ಲಿದ್ದಾರೆ. ಇದರ ಹೊರತು ಅವರು ತಮ್ಮ ಊರಿನ ಗ್ರಾಮೀಣ ಪರಿಸರದಲ್ಲೇ ಇದ್ದಾರೆ ಎಂಬುದನ್ನು ಅವರ ಮಾತುಕತೆ ಹಾಗೂ ಬರವಣಿಗೆಯಿಂದ ಅರಿಯಬಹುದು ಎಂದು ಹೇಳಿದರು.

ಇದಕ್ಕೂ ಮುನ್ನ ಕೃತಿಗಳ ಕುರಿತು ಮಾತನಾಡಿದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ತಳವಾರ, ಪ್ರೊ.ಎಂ.ಕೃಷ್ಣೇಗೌಡ ಅವರು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ರಾಯಭಾರಿಗಳಲ್ಲಿ ಒಬ್ಬರು. ಅವರೊಬ್ಬ ಸತ್ವಪೂರ್ಣ ಬರಹಗಾರರು. ಇಂದು ಬಿಡುಗಡೆಗೊಂಡ ನಾಲ್ಕು ಕೃತಿಗಳು ಅಂಕಣ ಬರಹ ಎಂಬ ಸಾಹಿತ್ಯ ಪ್ರಾಕಾರಕ್ಕೆ ಸೇರಿದ್ದಾಗಿವೆ. ಈ ಕೃತಿಗಳಲ್ಲಿ ಒಟ್ಟು 171 ಅಂಕಣಗಳಿದ್ದು, ಎಲ್ಲದರಲ್ಲಿಯೂ ಕೃಷ್ಣೇಗೌಡರ ಗ್ರಾಮೀಣ ಸೊಗಡಿನ ಅನುಭವ ತುಂಬಿ ತುಳುಕುತ್ತಿದೆ ಎಂದು ಬಣ್ಣಿಸಿದರು.

ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಮಾತನಾಡಿದರು. ಇಂದು ಪ್ರೊ.ಕೃಷ್ಣೇಗೌಡರ ಜನ್ಮ ದಿನವಾದ ಹಿನ್ನಲೆಯಲ್ಲಿ ಅವರಿಗೆ ಶುಭಾಶಯ ಕೋರಲಾಯಿತು. ಇದಕ್ಕೂ ಮುನ್ನ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಅಲ್ಲದೆ, ವಿವಿಧ ಕ್ಷೇತ್ರಗಳ ಸಾಧಕರಾದ ಹಿರಿಯ ಪತ್ರಕರ್ತ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಮತ್ತು ಪರಿಸರ ಪ್ರಶಸ್ತಿ ಪುರಸ್ಕೃತ ಹೆಚ್.ವಿ.ರಾಜೀವ್, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಹಾಗೂ ನವಭಾರತ್ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಕೆ.ವಿ.ಶ್ರೀಧರ್, ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಆರ್. ಶಿವಕುಮಾರ್, ಶ್ರೀ ಕಾಲಭೈರವೇಶ್ವರ ಕನ್‌ಸ್ಟ್ರಕ್ಷನ್ಸ್ ಮಾಲೀಕ ಕಡಕೊಳ ಕುಮಾರ್, ಲೇಖಕ ಕೃ.ಪಾ.ಗಣೇಶ್ ಅವರನ್ನು ಅಭಿನಂದಿಸಲಾಯಿತು.

ಖ್ಯಾತಿ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಕೃತಿಗಳ ಕರ್ತೃ ಪ್ರೊ.ಎಂ.ಕೃಷ್ಣೇಗೌಡ ಉಪಸ್ಥಿತರಿದ್ದರು. ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಮಲ್ಲೇಶ್, ಸದಸ್ಯ ಎ.ಪಿ.ವಿರೂಪಾಕ್ಷ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಮಾದೇಗೌಡ, ಮರಿತಿಬ್ಬೇಗೌಡ, ಚಲನಚಿತ್ರ ನಟ ಮಂಡ್ಯ ರಮೇಶ್, ಮುಖಂಡ ಹೆಚ್.ಆರ್.ತಿಮ್ಮೇಗೌಡ, ಪತ್ರಕರ್ತ ಸಿ.ಕೆ.ಮಹೇಂದ್ರ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ



ಬೆಳಗಾವಿ ವಿಧಾನಮಂಡಲ ಅಧಿವೇಶನ



ಕರಾವಳಿಗೆ ಬೆಂಕಿ ಹಚ್ಚುವವರು....

●ಬೈರತಿ ಸುರೇಶ್ ಮೇಲೆ ಮುಗಿಬಿದ್ದ ಬಿಜೆಪಿ ಶಾಸಕರು!

●ಮೌನ ವಹಿಸಿದ್ದ ಸ್ಪೀಕರ್ ಯು.ಟಿ.ಖಾದರ್ ವಿರುದ್ಧವೂ ಆಕ್ರೋಶ

ಬೆಳಗಾವಿ, ಡಿ.18– ಕರಾವಳಿ ಭಾಗದ ಬಿಜೆಪಿ ಶಾಸಕರು 'ಬೆಂಕಿ ಹಚ್ಚುವವರು' ಎಂಬ ಸಚಿವ ಬೈರತಿ ಸುರೇಶ್ ಹೇಳಿಕೆ ಬಿಜೆಪಿ ಶಾಸಕರ ಕೆಂಗಣ್ಣಿಗೆ ಗುರಿಯಾಗಿದೆ. ಸದನದಲ್ಲಿ ಸಚಿವರ ಹೇಳಿಕೆಯಿಂದ ಕೆರಳಿದ ಶಾಸಕರು ಸದನದ ಹೊರಗೂ ಬೈರತಿ ಸುರೇಶ್ ವಿರುದ್ಧ ಆಕ್ರೋಶ ಹೊರ ಹಾಕಿದರು. ಅಲ್ಲದೆ ಅಪಾದನೆಯ ಸಂದರ್ಭದಲ್ಲಿ ಮೌನವಾಗಿದ್ದ ಸ್ಪೀಕರ್ ಯು.ಟಿ ಖಾದರ್ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಶಾಸಕ ರಾಜೇಶ್ ನಾಯ್ಕ್ ಮಾತನಾಡಿ, ಸದನದಲ್ಲಿ ನಡೆದ ಘಟನೆ ಇಡೀ ಕರಾವಳಿಯವರಿಗೆ ದುಃಖಕರ ಹಾಗೂ ವಿಷಾದದ ಘಟನೆ. ಕರಾವಳಿಯಲ್ಲಿ ಬೆಂಕಿ ಹಚ್ಚುವವರು ಎಂದು ಹೇಳುವುದು ದೊಡ್ಡ ಆಪಾದನೆ. ಇಡೀ ಕರಾವಳಿಗರ ಮೇಲೆ ಸಚಿವರು ಈ ರೀತಿಯ ಆರೋಪ ಮಾಡಿದ್ದಾರೆ ಎಂದರು.

ಕರಾವಳಿ ಜಿಲ್ಲೆ ಸಂಸ್ಕೃತಿಗೆ ದೊಡ್ಡ ಕೊಡುಗೆ ಕೊಟ್ಟ ಜಿಲ್ಲೆ. ಆಪಾದನೆ ಸ್ಥಾನದಲ್ಲಿ ಕರಾವಳಿಯನ್ನು ನಿಲ್ಲಿಸಿದ್ದು ವಿಷಾದನೀಯ. ಸ್ಪೀಕರ್ ಕೂಡ ಕರಾವಳಿಯವರು ಅವರು ಹೇಳಬಹುದಿತ್ತು. ಮೌನಂ ಸಮ್ಮತಿ ಲಕ್ಷಣಂ ಎನ್ನುವ ಹಾಗೆ ಸ್ಪೀಕರ್ ಕೂಡ ಕರಾವಳಿಯನ್ನು ಬೆಂಕಿ ಹಚ್ಚುವವರು ಎಂದಂತಾಗಿದೆ ಎಂದು ಕಿಡಿಕಾರಿದರು.

ಶಾಸಕ ಹರೀಶ್ ಪೂಂಜಾ ಮಾತನಾಡಿ, ಬೈರತಿ ಸುರೇಶ್ ಮಾತನ್ನು ನಾವು ವಿರೋಧ ಮಾಡಿದ್ದೆವು. ಸ್ಪೀಕರ್ ಖಾದರ್ ಕರಾವಳಿ



ಬೈರತಿ ಸುರೇಶ್

ನೀರು ಕುಡಿದು, ಅಲ್ಲಿಯ ಮತ ಪಡೆದು ನಮ್ಮ ರಕ್ಷಣೆಗೆ ಬರುತ್ತಾರೆ ಎಂದು ಭಾವಿಸಿದ್ದೆವು. ಕರಾವಳಿ ಭಾವನೆಗೆ ಘಾಸಿ ಮಾಡುವ ಸುರೇಶ್ ಮಾತಿಗೆ ಸ್ಪೀಕರ್ ಕೂಡ ಬೆಂಬಲ ನೀಡಿದ್ದಾರೆ ಎಂದು ಆರೋಪಿಸಿದರು.

ಈ ಹೇಳಿಕೆಯಿಂದ ಕರಾವಳಿಯ ಜನರ ಸ್ವಾಭಿಮಾನಕ್ಕೆ ಘಾಸಿ ಆಗಿದೆ. ಅವರ ಹಿಡನ್ ಅಜೆಂಡಾ ದ್ವೇಷ ಭಾಷಣದ ಮಸೂದೆಯನ್ನು ಚರ್ಚೆ ಇಲ್ಲದೆಯೇ ಪಾಸ್ ಮಾಡಬೇಕು ಎಂಬುದಾಗಿತ್ತು. ವಿಪಕ್ಷ ನಾಯಕರು ಮಾತಾಡುವಾಗಲೇ ಬಿಲ್ ಪಾಸ್ ಮಾಡಲು ಹೊರಟಿದ್ದರು. ಸರ್ಕಾರದ ಒಬ್ಬ ಏಜೆಂಟ್ ರೀತಿ ಸ್ಪೀಕರ್ ವರ್ತನೆ ಮಾಡಿದ್ದಾರೆ. ಇಡೀ ಕರಾವಳಿಯನ್ನು ಕೆಟ್ಟವರಂತೆ ಬಿಂಬಿಸಲು ಸ್ಪೀಕರ್ ಹೊರಟಿದ್ದಾರೆ ಎಂದರು.

ಕೇಸ್ ಹಾಕ್ತೀರ ಸ್ವಾಮಿ: ವೇದವ್ಯಾಸ ಕಾಮತ್ ಮಾತನಾಡಿ, ಕರಾವಳಿಯನ್ನು ದ್ವೇಷ ಮಾಡಿದ ಬೈರತಿ ಸುರೇಶ್ ಮೇಲೆ ಎಫ್ಐಆರ್ ಮಾಡ್ತೀರಾ ಎಂದು ಸ್ಪೀಕರ್ ಯು.ಟಿ.ಖಾದರ್ ಅವರನ್ನು ಪ್ರಶ್ನಿಸಿದರಲ್ಲದೆ, ಬೈರತಿ ಸುರೇಶ್ ಬೇಷರತ್ ಕ್ಷಮೆ ಯಾಚಿಸಬೇಕು. ಕರಾವಳಿಯ ತುಳುನಾಡು ವಿಶೇಷ ಸಂಸ್ಕೃತಿ ಅಳವಡಿಸಿಕೊಂಡ ಜಿಲ್ಲೆ. ದೈವ ದೇವರುಗಳ ಬಗ್ಗೆ ದೊಡ್ಡ ಚಿಂತನೆ ನೀಡುವ ಜಿಲ್ಲೆ ಕರಾವಳಿ. ಕರಾವಳಿಯ ಬಗ್ಗೆ ಕರಾವಳಿಗರು ಬಗ್ಗೆ ಸದನದಲ್ಲಿ ಆಡಿದ ಮಾತು ದುಃಖ ತಂದಿದೆ ಎಂದರು.

ಶಾಸಕರು ಕರಾವಳಿ ಬಗ್ಗೆ ಮಾತಾಡಿದಾಗ ಸುಮ್ಮನೆ ಕೂರಲು ಆಗಲ್ಲ. ಸ್ಪೀಕರ್ ಸ್ಥಾನ ಪಡೆದವರು ಕರಾವಳಿಯ ಜನರಿಂದಲೇ ಬಂದವರು. ಕರಾವಳಿಗರಿಗೆ ಈ ರೀತಿ ಮಾತಾಡುವ ಸಂದರ್ಭದಲ್ಲಿ ಸ್ಪೀಕರ್ ಯಾವುದೇ ಪ್ರತಿರೋಧ ಮಾಡದೇ ಇರುವುದು ಸರಿಯಲ್ಲ. ಮಂತ್ರಿಯನ್ನು ತಕ್ಷಣ ಮಾತು ನಿಲ್ಲಿಸುವ ಕೆಲಸ ಸ್ಪೀಕರ್ ಮಾಡಬೇಕಾಗಿತ್ತು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ರೀತಿ ಸ್ಪೀಕರ್ ನಡೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಏನಿದು ವಿವಾದ?: ಕರಾವಳಿಗೆ ಬೆಂಕಿ ಹಾಕಿ ಆಯ್ತು ಇದೀಗ ಇಲ್ಲಿ ಬೆಂಕಿ ಹಾಕುತ್ತಿದ್ದಾರೆ ಎಂದು ಸಚಿವ ಬೈರತಿ ಸುರೇಶ್ ವಿಧಾನಸಭೆಯಲ್ಲಿ ವಾಗ್ದಾಳಿ ನಡೆಸಿದ್ದರು. ದ್ವೇಷ ಭಾಷಣ ವಿಧೇಯಕ ಅಂಗೀಕಾರ ಸಂದರ್ಭದಲ್ಲಿ ಬೈರತಿ ಹೇಳಿಕೆ ಕೋಲಾಹಲಕ್ಕೆ ಕಾರಣವಾಗಿತ್ತು.

ವಿಪಕ್ಷದ ಧ್ವನಿ ಅಡಗಿಸುವ ಕೆಲಸ!

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ

ಬೆಳಗಾವಿ, ಡಿ.18– ಕಾಂಗ್ರೆಸ್ ಪಕ್ಷವು ದ್ವೇಷ ಭಾಷಣ ನಿಯಂತ್ರಣ ಮಸೂದೆ ಮೂಲಕ ವಿಪಕ್ಷದ ಧ್ವನಿ ಅಡಗಿಸುವ ಕೆಲಸ ಮಾಡಲು ಹೊರಟಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ಮಸೂದೆ ಮೂಲಕ ಪತ್ರಕರ್ತರ ಧ್ವನಿಯನ್ನೂ ನಿಯಂತ್ರಿಸುವ ಕೆಲಸ ಮಾಡಲು ಹೊರಟಿದ್ದಾರೆ. ಸಾಮಾಜಿಕ ಜಾಲತಾಣದಲ್ಲೂ ಯಾರಾದರೂ ತಮ್ಮ ಅಭಿಪ್ರಾಯ ತಿಳಿಸಿದರೆ, ಅದನ್ನು ಹತ್ತಿಕ್ಕಿ, 7–8 ವರ್ಷ ಜೈಲಿಗೆ ಹಾಕುವ ದುಸ್ಸಾಹಸಕ್ಕೆ ಹೊರಟಿದ್ದಾರೆ ಎಂದು ಆಕ್ಷೇಪಿಸಿದರು.

ಇದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದ್ದು ಇದನ್ನು ವಿರೋಧಿಸುತ್ತೇವೆ. ಸ್ಪೀಕರ್ ಅವರು ಪ್ರಜಾಪ್ರಭುತ್ವ ವಿರೋಧಿ ನಡೆ ಅನುಸರಿಸುತ್ತಿದ್ದಾರೆ. ಬೈರತಿ ಸುರೇಶ್ ಅವರು ಕರಾವಳಿ ಭಾಗದ ಮತದಾರರಿಗೆ ಅಪಮಾನ ಮಾಡಿದ್ದಾರೆ. 1975ರ ತುರ್ತು ಪರಿಸ್ಥಿತಿಯನ್ನು ನೆನಪಿಸುವ ಕೆಲಸವನ್ನು ಕಾಂಗ್ರೆಸ್ ಸರಕಾರ ಮಾಡಲು ಹೊರಟಿದೆ ಎಂದರು.

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಯೋಧರಿಗೆ 8 ತಿಂಗಳಿಂದ ಈ ಸರ್ಕಾರ ಗೌರವಧನ ಕೊಟ್ಟಿಲ್ಲ ಕಾರಣ ಏನು, ಖಜಾನೆ ಖಾಲಿಯೇ ಎಂದು ಪ್ರಶ್ನಿಸಿದ ಅವರು, ಯಾವುದೋ ದಬ್ಬಾಳಿಕೆ, ಬೆದರಿಕೆ ಹಾಕಿದಂತೆ ನನಗೆ ಬೆದರಿಕೆ ಹಾಕಲು ಬರಬೇಡಿ. ನಾನೊಬ್ಬ ಜನಪ್ರತಿನಿಧಿ, ಒಂದು ರಾಷ್ಟ್ರೀಯ ಪಕ್ಷದ ರಾಜ್ಯ ಅಧ್ಯಕ್ಷ ಎಂದು ಎಚ್ಚರಿಕೆ ನೀಡಿದರು.

ಖಜಾನೆ ಖಾಲಿ ಎಂದರೆ ಸಿಟ್ಟೇಕೆ?: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭ್ರಷ್ಟಾಚಾರದ ಕುರಿತು ತಮ್ಮ ಬಾಯಲ್ಲಿ ಮಾತನಾಡದೇ ಇರುವುದು ಒಳ್ಳೆಯದು. ರಾಜ್ಯ ರಾಜಕೀಯದಲ್ಲಿ ಭ್ರಷ್ಟಾಚಾರದ ಪಿತಾಮಹ ಯಾರೆಂದು ಕೇಳಿದರೆ ಕಾಂಗ್ರೆಸ್ ಪಕ್ಷದವರು ಎಂದು ಹೆಸರು ಹೇಳುತ್ತಾರೆ



ಯಡಿಯೂರಪ್ಪ ಅವರ ವಿರುದ್ಧ ಷಡ್ಯಂತ್ರದ ಕುರಿತು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ. ಶಿವಕುಮಾರ್ ಅವರು ಒಂದು ಜವಾಬ್ದಾರಿಯುತ ಸ್ಥಾನದಲ್ಲಿದ್ದು, ವಿಪಕ್ಷದ ಪ್ರಶ್ನೆಗೆ ಉತ್ತರ ಕೊಡುವ ತಾಕತ್ತಿದ್ದರೆ ಸದನದಲ್ಲಿ ಬಂದು ಮಾತನಾಡಲಿ ಎಂದು ಆಗ್ರಹಿಸಿದರು. ಎರಡೂವರೆ ವರ್ಷ ಕಳೆದರೂ 2.5 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು ನೇಮಕಾತಿ ಮಾಡಿಲ್ಲ. ಗುಂಡಿಗಳನ್ನು ಮುಚ್ಚಿಲ್ಲ, ಜಗಳೂರು ತಾಲೂಕಿನ ನಿರುದ್ಯೋಗಿ ಯುವಕ ಅಂಜಿನಪ್ಪ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಳ ಮೀಸಲಾತಿ ನೆಪದಲ್ಲಿ ಹುದ್ದೆ ಭರ್ತಿ ಮಾಡುತ್ತಿಲ್ಲ ಎಂದು ದೂರಿದರು.

ಮುಖ್ಯಮಂತ್ರಿಗಳ ತವರು ಜಿಲ್ಲೆಯ ಚೈತ್ರಾ ಬಿ ಕೊಕೋ ಸ್ಪರ್ಧೆಯಲ್ಲಿ 32 ಬಾರಿ ರಾಷ್ಟ್ರಮಟ್ಟದಲ್ಲಿ, ಅಂತರರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ್ದಾರೆ. ಅಕ್ಕಪಕ್ಕದ ರಾಜ್ಯಗಳು ಇಂತಹ ಕೊಕೋ ಪ್ರತಿಭೆಗೆ 1 ಕೋಟಿ ರೂ., 2 ಕೋಟಿ ರೂ.ಪ್ರಶಸ್ತಿ ಕೊಟ್ಟಿವೆ. ಆದರೆ ಕಾಂಗ್ರೆಸ್ ಸರ್ಕಾರವು ಅಂತಹ ಪ್ರತಿಭೆಗೆ ಕೇವಲ 5 ಲಕ್ಷ ರೂ. ಕೊಟ್ಟಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಆ ಯುವತಿ 5 ಲಕ್ಷವನ್ನು ಸರಕಾರದ ಮುಖಕ್ಕೆ ಬಿಸಾಕಿದ್ದಾಳೆ. ಖಜಾನೆ ಖಾಲಿ ಆಗಿಲ್ಲ ಎಂದರೆ ಇದೇನು ಎಂದು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡರು.

ಸಾರಿಗೆ ನಿಗಮಗಳಿಗೆ ಶಕ್ತಿ ಯೋಜನೆಯ 4 ಸಾವಿರ ಕೋಟಿ ಬಾಕಿ; ಈಗ 441 ಕೋಟಿ ಬಿಡುಗಡೆ

ಬೆಳಗಾವಿ, ಡಿ.18– ಸರ್ಕಾರವನ್ನು ಸುಭದ್ರ ಮಾಡಿಕೊಳ್ಳಲು ಜಾರಿಗೆ ತಂದ ಗ್ಯಾರಂಟಿ ಯೋಜನೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಗೃಹಲಕ್ಷ್ಮಿ ಯೋಜನೆಯ ಹಣ ಬಾಕಿ ಉಳಿಸಿ ಕೊಂಡಿರುವ ರಾಜ್ಯ ಸರ್ಕಾರ, ಶಕ್ತಿ ಯೋಜನೆಯ ಸಾವಿರಾರು ಕೋಟಿ ರೂ. ಹಣವನ್ನೂ ಬಾಕಿ ಉಳಿಸಿಕೊಂಡಿರುವುದು ಈಗ ದಾಖಲೆ ಸಮೇತ ಬೆಳಕಿಗೆ ಬಂದಿದೆ.

ಕಳೆದ ಎರಡೂವರೆ ವರ್ಷದಿಂದ ಕೆಎಸ್ಆರ್‌ಟಿಸಿ, ಬಿಎಂಟಿಸಿ, ಕಲ್ಯಾಣ ಕರ್ನಾಟಕ ಸಾರಿಗೆ, ವಾಯುವ್ಯ ಸಾರಿಗೆ ನಿಗಮಗಳಿಗೆ ಸರ್ಕಾರ ಒಟ್ಟು 4 ಸಾವಿರ ಕೋಟಿ ರೂ. ಬಾಕಿ ಉಳಿಸಿಕೊಂಡಿದೆ.

ಇದೀಗ ನಾಲ್ಕೂ ನಿಗಮಗಳಿಗೆ ಸೇರಿ ಕೇವಲ 441 ಕೋಟಿ ಹಣ ಬಿಡುಗಡೆ ಮಾಡಲಾಗಿದೆ ಕೆಎಸ್ಆರ್‌ಟಿಸಿ 171.41 ಕೋಟಿ ರೂ., ಬಿಎಂಟಿಸಿ 75.65 ಕೋಟಿ ರೂ., ಕೆಕೆಆರ್‌ಟಿಸಿ 86.92 ಕೋಟಿ ರೂ., ಎನ್ ಡಬ್ಲ್ಯೂಕೆಆರ್‌ಟಿಸಿ 107.67 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ಇತ್ತ ಗೃಹಲಕ್ಷ್ಮಿಯರ ಹಣವೂ ಬಾಕಿ ಇದೆ. 2023ರ ಜೂನ್ ತಿಂಗಳಲ್ಲಿ ಯೋಜನೆ ಆರಂಭವಾಗಿ ಮೊದಲ ಕಂತು ಹಾಕಿದ್ದು, 2023ರ ಆಗಸ್ಟ್‌ನಲ್ಲಿ ಒಟ್ಟು 5 ತಿಂಗಳು ಖಾತೆಗೆ ಹಣ ಹಾಕಿತ್ತು. 2024ರಲ್ಲಿ ಪೂರ್ತಿ 12 ತಿಂಗಳು ಗೃಹಲಕ್ಷ್ಮಿಯರ ಖಾತೆಗೆ ಹಣ ಜಮೆ ಆಗಿದೆ. ಆದರೆ 2025ರಲ್ಲಿ ಗೃಹಲಕ್ಷ್ಮಿ ಯೋಜನೆಗೆ ಆರ್ಥಿಕ ವಿಘ್ನ ಎದುರಾಗಿದೆ.



ಡಿಕೆಶಿಗೆ ಸತೀಶ್ ಜಾರಕಿಹೊಳಿ ಸೆಡ್ಡು

ಡಿನ್ನರ್ ಮೀಟಿಂಗ್ ನೆಪದಲ್ಲಿ ಸಿಎಂ ಬಣದಿಂದಲೂ ಶಕ್ತಿ ಪ್ರದರ್ಶನ

ಬೆಳಗಾವಿ, ಡಿ.18– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಜಟಾಪಟಿ ಹೈಕಮಾಂಡ್ ಅಂಗಳ ತಲುಪಿದ ಬೆನ್ನಲ್ಲೇ ರಾಜ್ಯದಲ್ಲಿ ನಡೆಯುತ್ತಿದ್ದ ರಾಜಕೀಯ ವಾಗ್ಯುದ್ಧಕ್ಕೆ ಕೊಂಚ ಬ್ರೇಕ್ ಬಿದ್ದಿತ್ತು. ಆದರೆ ಬೆಳಗಾವಿ ಅಧಿವೇಶನದ ಹೊತ್ತಲ್ಲೇ ಡಿಸಿಎಂ ಡಿಕೆಶಿ ಆಯೋಜಿಸಿದ್ದ ಡಿನ್ನರ್ ಮೀಟಿಂಗ್ ಬಳಿಕ ಕಾಂಗ್ರೆಸ್ ಪಾಳಯದಲ್ಲಿ ಮತ್ತೆ ಬಣ ಬಡಿದಾಟ ಆರಂಭವಾಗಿದೆ. ಡಿಕೆಶಿಗೆ ಕೌಂಟರ್ ಎಂಬಂತೆ ಸಿಎಂ ಸಿದ್ದರಾಮಯ್ಯ ಆಪ್ತ ಬಣದ ಪ್ರಭಾವಿ ನಾಯಕ ಸತೀಶ್ ಜಾರಕಿಹೊಳಿ ಏರ್ಪಡಿಸಿದ್ದ ಡಿನ್ನರ್ ಮೀಟಿಂಗೇ ಇದಕ್ಕೆ ಸಾಕ್ಷಿ.



ಬೆಳಗಾವಿಯ ಖಾಸಗಿ ಹೋಟೆಲ್‌ನಲ್ಲಿ ಊಟದ ನೆಪದಲ್ಲಿ ಸಿಎಂ ಸಿದ್ದರಾಮಯ್ಯ ಬಣದ ಬಹುತೇಕ ಶಾಸಕರು ಒಟ್ಟಿಗೆ ಸೇರಿದ್ದಾರೆ. ಸುಮಾರು 36 ಮಂದಿ ಶಾಸಕರು ಡಿನ್ನರ್ ಮೀಟಿಂಗ್‌ನಲ್ಲಿ ಭಾಗಿಯಾಗಿದ್ದು, ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಕೂಡ ಇದರಲ್ಲಿ ಭಾಗಿಯಾಗಿರುವುದು ವಿಶೇಷವಾಗಿತ್ತು. ನಮ್ಮ ಜೊತೆ ಶಾಸಕರ ಬಲ ಇದೆ ಎಂದು ತೋರಿಸಲು ಡಿನ್ನರ್ ಆಯೋಜಿಸಿದ್ದ ಡಿ.ಕೆ.ಶಿವಕುಮಾರ್ ಅವರಿಗೆ ಕೌಂಟರ್ ಎನ್ನುವಂತೆ ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಮತ್ತೊಂದು ಬಣ ಒಟ್ಟಾಗಿರೋದು ಬೇರೆಯದ್ದೇ ಸಂದೇಶ ರವಾನಿಸಿದೆ. ಅಧಿಕಾರ ಹಂಚಿಕೆ ವಿಚಾರದ ಬಗ್ಗೆ ಕಾಂಗ್ರೆಸ್ ವರಿಷ್ಠರು ಕೂಡ ಚರ್ಚೆ ನಡೆಸುತ್ತಿದ್ದು, ಸಾಧಕ ಮತ್ತು ಬಾಧಕಗಳ ಪರಿಶೀಲನೆಗೆ ಮುಂದಾಗಿದ್ದಾರೆ. ಈ ಹೊತ್ತಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಈ ಬೆಳವಣಿಗೆಗಳು, ಹೈಕಮಾಂಡ್‌ಗೆ ಸಂದೇಶ ರವಾನಿಸುವ ನಾಯಕರ ಯತ್ನ ಎಂಬ ಮಾತುಗಳೂ ಕೇಳಿಬಂದಿವೆ.


ಬಾಬಾ ಸಾಹೇಬ್ ಪಾಟೀಲ್, ಅಪ್ಪಾಜಿ ಸಿಎಸ್ ನಾಡಗೌಡ, ಕೆ.ಎನ್.ರಾಜಣ್ಣ, ಡಾ.ಯತೀಂದ್ರ ಸಿದ್ದರಾಮಯ್ಯ, ಬಿ.ಆರ್.ಪಾಟೀಲ್, ಯಾಸಿರ್ ಖಾನ್ ಪಠಾಣ್, ಎಂ.ಆರ್.ಪಾಟೀಲ್, ಶ್ರೀನಿವಾಸ್ ಮಾನೆ, ಮಂಥರ್ ಗೌಡ, ವಿಶ್ವಾಸ್ ವೈದ್ಯ, ಬಸವಂತಪ್ಪ ಆಸೀಫ್ ಸೇಠ್, ಪಾವಗಡ ವೆಂಕಟೇಶ್, ಕಂಪ್ಲಿ ಗಣೇಶ್, ಶ್ರೀನಿವಾಸ್ ತರೀಕೆರೆ, ಎನ್.ಟಿ.ಶ್ರೀನಿವಾಸ್, ರಾಘವೇಂದ್ರ ಹಿಟ್ನಾಳ್, ದರ್ಶನ್ ಧ್ರುವನಾರಾಯಣ್, ನಾರಾ ಭರತ್ ರೆಡ್ಡಿ, ಮಹಾಂತೇಶ್ ಕೌಜಲಗಿ, ಭೀಮಣ್ಣ ನಾಯ್ಕ, ಬಿ.ಬಿ.ಚಿಮ್ಮನಕಟ್ಟಿ ಯು.ಬಿ.ಬಣಕಾರ್, ಬಸವರಾಜ್ ಶಿವಣ್ಣನವರ್, ರಾಜು ಕಾಗೆ, ಕೋನರೆಡ್ಡಿ, ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ಪುಟ್ಟರಂಗಶೆಟ್ಟಿ, ರಾಜ ನರಸಿಂಹ ನಾಯಕ್, ರವಿ ಬೋಸರಾಜು, ಅಲ್ಲಮ ಪ್ರಭು ಪಾಟೀಲ್, ಜಿ.ಟಿ.ಪಾಟೀಲ್, ಗಣೇಶ್ ಹುಕ್ಕೇರಿ, ರಘುಮೂರ್ತಿ ಮತ್ತು ಪ್ರಕಾಶ್ ಕೋಳಿವಾಡ ಡಿನ್ನರ್ ಮೀಟಿಂಗ್‌ನಲ್ಲಿ ಭಾಗಿಯಾಗಿದ್ದರು.

ರಾಜ್ಯದಲ್ಲಿ 315 ಕುಸ್ತಿಪಟುಗಳಿಗೆ ಅನುಭವಿ ತರಬೇತುದಾರರಿಂದ ಕ್ರೀಡಾ ತರಬೇತಿ

ಪರಿಷತ್‌ನಲ್ಲಿ ಮಂಜೇಗೌಡರಿಗೆ ಸಿಎಂ ಸಿದ್ದರಾಮಯ್ಯ ಉತ್ತರ

ಬೆಳಗಾವಿ, ಡಿ.18– ರಾಜ್ಯದಲ್ಲಿ 315 ಕುಸ್ತಿಪಟುಗಳಿಗೆ ಉಚಿತವಾಗಿ ನುರಿತ ಕುಸ್ತಿ ತರಬೇತುದಾರರಿಂದ ವೈಜ್ಞಾನಿಕ ಕ್ರೀಡಾ ತರಬೇತಿ ನೀಡಲಾಗುತ್ತಿದೆ ಎಂದು ಕ್ರೀಡಾ ಇಲಾಖೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸಿ.ಎನ್.ಮಂಜೇಗೌಡರ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ 92 ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಗುತ್ತಿಗೆ ಅವಧಿ ಮುಕ್ತಾಯಗೊಂಡ ಕೂಡಲೇ ಅವರನ್ನು ಬಿಡುಗಡೆಗೊಳಿಸಿ ಮರುನೇಮಕ ಮಾಡಿಕೊಳ್ಳುವಾಗ ಅವರ ಕಾರ್ಯಕ್ಷಮತೆ ಪರಿಶೀಲಿಸಿ ನೇಮಕ ಮಾಡಿಕೊಳ್ಳಲಾಗುವುದು. ರಾಜ್ಯದಲ್ಲಿ ಕುಸ್ತಿ ಕ್ರೀಡೆಯ ಅಭಿವೃದ್ಧಿಗಾಗಿ ರಾಜ್ಯದ 7 ಕ್ರೀಡಾ ವಸತಿ ನಿಲಯಗಳಲ್ಲಿ ಕುಸ್ತಿ ಕ್ರೀಡಾ ವಿಭಾಗಗಳನ್ನು ಆರಂಭಿಸಲಾಗಿದ್ದು, ಪ್ರತಿವರ್ಷ ರಾಜ್ಯ ಮಟ್ಟದ ಕುಸ್ತಿ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಕುಸ್ತಿ ಕ್ರೀಡಾಪಟುಗಳಿಗೆ ಸ್ಪರ್ಧಾ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ.



ಮಂಜೇಗೌಡ

ಇದಲ್ಲದೇ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ, ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ, ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರಿಗೆ ನೀಡಲಾಗುತ್ತಿದೆ. ಅಲ್ಲದೇ ಸಾಧಕ ಕ್ರೀಡಾಪಟುಗಳಿಗೆ ಉದ್ಯೋಗವಕಾಶ ಕಲ್ಪಿಸುತ್ತಿದ್ದು ಶೇ. 3ರಷ್ಟು ಮೀಸಲಾತಿಯನ್ನು ಪೊಲೀಸ್ ಮತ್ತು ಅರಣ್ಯ ಇಲಾಖೆಗಳಲ್ಲಿ ನೀಡಲಾಗುತ್ತಿದೆ ಎಂದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಮಂಜೇಗೌಡರು, ರಾಜ್ಯದ ಕ್ರೀಡಾ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕ್ರೀಡಾ ತರಬೇತುದಾರರ ಸಂಖ್ಯೆ ಎಷ್ಟು, ಅವರನ್ನು ವರ್ಷಕ್ಕೊಮ್ಮೆ 1 ತಿಂಗಳ ಕಾಲ ಬಿಡುಗಡೆಗೊಳಿಸಲಾಗುವುದೇ, ಬಿಡುಗಡೆಗೊಳಿಸಿದರೆ ಕ್ರೀಡಾಪಟುಗಳಿಗೆ ತೊಂದರೆಯಾಗುವುದಿಲ್ಲವೇ? ಗ್ರಾಮೀಣ ಕ್ರೀಡೆಯಾದ ಕುಸ್ತಿಗೆ ಸರ್ಕಾರದ ಬೆಂಬಲ ಇಲ್ಲದಿರುವುದು, ಕುಸ್ತಿ ತರಬೇತುದಾರರು ಹಾಗೂ ಕುಸ್ತಿ ತರಬೇತಿ ಕೇಂದ್ರಗಳಿಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೇ, ಕುಸ್ತಿ ತರಬೇತುದಾರರನ್ನು ನೇಮಕ ಮಾಡುವುದು ಮತ್ತು ತರಬೇತಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುವುದೇ? ದೋಷಪೂರಿತ ನಿಯಮಗಳನ್ನು ಕೈಬಿಟ್ಟು ಕ್ರೀಡಾ ಬೆಳವಣಿಗೆಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುವುದೇ ಎಂದು ಪ್ರಶ್ನಿಸಿದರು.

ದುಬಾರಿಯಾದ ಮದ್ಯ ನಶೆ ಏರಿಸಿಕೊಳ್ಳಲು ಮದ್ಯ ಪ್ರಿಯರ ಹಿಂದೇಟು

ಬಿಯರ್, ಹಾಟ್ ಡ್ರಿಂಕ್ಸ್ ಮಾರಾಟ ಗಣನೀಯವಾಗಿ ಇಳಿಕೆ

ಬೆಳಗಾವಿ, ಡಿ.18(ಬಿಎಲ್‌ಯು)– ಮದ್ಯದ ಬೆಲೆ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಮದ್ಯ ಪ್ರಿಯರು ನಶೆ ಏರಿಸಿಕೊಳ್ಳಲು ಹಿಂಜರಿಯುತ್ತಿದ್ದಾರೆ. ವಿಧಾನ ಪರಿಷತ್ ಅಧಿವೇಶನದಲ್ಲಿ ರಾಜ್ಯ ಸರ್ಕಾರ ನೀಡಿರುವ ಅಂಕಿ ಅಂಶಗಳು ಇದನ್ನು ಸ್ಪಷ್ಟಪಡಿಸುತ್ತವೆ.



ತಿಮ್ಮಾಪುರ

ಕಳೆದ ವರ್ಷ ಅಂದರೆ 2024–25ನೇ ಸಾಲಿನಲ್ಲಿ 708.85 ಲಕ್ಷ ಕೇಸ್ ಹಾಟ್ ಡ್ರಿಂಕ್ಸ್ ಹಾಗೂ 450.36 ಲಕ್ಷ ಕೇಸ್ ಬಿಯರ್ ಮಾರಾಟವಾಗಿತ್ತು.

ಆದರೆ ಈ ವರ್ಷ ಅಂದರೆ 2025–26ನೇ ಸಾಲಿನ ನವೆಂಬರ್ ಅಂತ್ಯಕ್ಕೆ 458.95 ಲಕ್ಷ ಕೇಸ್ ಹಾಟ್ ಡ್ರಿಂಕ್ಸ್ ಹಾಗೂ 257.34 ಲಕ್ಷ ಕೇಸ್ ಬಿಯರ್ ಮಾರಾಟವಾಗಿದೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಸಭಾ ಅಧಿವೇಶನದ ವೇಳೆ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರು ಶಾಸಕ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ವಿಧಾನ ಪರಿಷತ್‌ನಲ್ಲಿ ಲಿಖಿತ ಉತ್ತರ ನೀಡಿದರು.

ಈ ಮೂಲಕ ಹಾಟ್ ಡ್ರಿಂಕ್ಸ್ ಹಾಗೂ ಬಿಯರ್ ಮಾರಾಟದಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ರಾಜ್ಯ ಸರ್ಕಾರ ಮದ್ಯದ ಬೆಲೆ ಹೆಚ್ಚಳ ಮಾಡಿದೆ ಎಂಬ ಆರೋಪವಿದೆ. ಬೆಲೆ ದುಬಾರಿಯಾಗಿರುವ ಹಿನ್ನೆಲೆ ಮದ್ಯ ಪ್ರಿಯರು ಮದ್ಯ ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಸರ್ಕಾರ ನೀಡಿರುವ ಅಂಕಿ ಅಂಶಗಳು ಇದನ್ನು ಸ್ಪಷ್ಟಪಡಿಸುತ್ತವೆ ಎಂದು ವಿಪಕ್ಷಗಳು ಆರೋಪಿಸಿವೆ.

2024–25ನೇ ಹಣಕಾಸು ವರ್ಷದಲ್ಲಿ ನವೆಂಬರ್ ಅಂತ್ಯಕ್ಕೆ 24,287 ಕೋಟಿ ಆದಾಯ ಬಂದಿದೆ. ರಾಜ್ಯದಲ್ಲಿ ಒಟ್ಟು 14,099 ಪರವಾನಗಿ ಇದೆ. 1992 ರಿಂದಲೇ ಹೊಸದಾಗಿ ಸಿಎಲ್–2 (ಚಿಲ್ಲರೆ ಮದ್ಯದ ಅಂಗಡಿ) ಹಾಗೂ ಸಿಎಲ್ –9 (ಬಾರ್ ಅಂಡ್ ರೆಸ್ಟೋರೆಂಟ್) ಸನ್ನದು ನೀಡಲು ನಿರ್ಬಂಧ ವಿಧಿಸಲಾಗಿದೆ.

ಸರ್ಕಾರದಿಂದ ಗೃಹಲಕ್ಷ್ಮಿಯ 5 ಸಾವಿರ ಕೋಟಿ ಲೂಟಿ

ಕಾಂಗ್ರೆಸ್ ಮಾನ–ಮರ್ಯಾದೆ ಬಟಾಬಯಲು: ವಿಪಕ್ಷ ನಾಯಕ ಆರ್.ಅಶೋಕ್ ಆಕ್ರೋಶ



ಬೆಳಗಾವಿ, ಡಿ.18– ರಾಜ್ಯ ಸರ್ಕಾರವು ಗೃಹಲಕ್ಷ್ಮಿ ಯೋಜನೆಯ 5 ಸಾವಿರ ಕೋಟಿ ಲೂಟಿ ಹೊಡೆದಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಮಾಧ್ಯಮಗಳ ಜೊತೆ ಗುರುವಾರ ಮಾತನಾಡಿದ ಅವರು, ಘಟಾಘಟ್ ಎಂದು ಸುಮಾರು 1.26 ಕೋಟಿ ಮನೆಯ ಗೃಹಿಣಿಯರಿಗೆ ಅದು ತಲುಪಬೇಕಿತ್ತು. ಇದರಲ್ಲಿ ಮೋಸ ಮಾಡಿದ್ದಾರೆ ಎಂದು ದೂರಿದರು.

ಶಕ್ತಿ ಯೋಜನೆಯಲ್ಲೂ ಹಣ ಬಾಕಿ ಇದೆ. ಕಾರ್ಮಿಕರು ಬೀದಿಗಿಳಿದು ಹೋರಾಡುವಂತಾಗಿದೆ. ಕಾಂಗ್ರೆಸ್ ಸರ್ಕಾರ ದಿವಾಳಿ ಆಗಿದೆ. ಸಂಬಳ ಕೊಡಲೂ ಹಣ ಇಲ್ಲ ಆ ಪರಿಸ್ಥಿತಿ ಬಂದಿದೆ ಕಾಂಗ್ರೆಸ್ಸಿನ ಮಾನ ಮರ್ಯಾದೆ ಬಟಾಬಯಲಾಗಿದೆ ಎಂದು ಟೀಕಿಸಿದರು.

ಹಣ ಇಲ್ಲ, ಇನ್ನೊಂದೆಡೆ ತೆರಿಗೆ ಮೇಲೆ ತೆರಿಗೆ. ಈಗ ಸ್ಟಾಂಪ್ ಡ್ಯೂಟಿ ಹೆಚ್ಚಿಸುವುದಾಗಿ ಹೇಳುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಮುಂದಿನ ಬಜೆಟ್‌ನಲ್ಲಿ ಎಣ್ಣೆ ತೆಗೆದುಕೊಳ್ಳುವವರ ಮೇಲೂ ಟ್ಯಾಕ್ಸ್ ಬೀಳಲಿದೆ. ಮನೆ ತೆರಿಗೆ ಹೆಚ್ಚಿಸಲಿದ್ದಾರೆ. ನಾಗರಿಕರಿಗೆ ಕೊಡುವ ಸೌಲಭ್ಯಕ್ಕೆ ಕತ್ತರಿ ಹಾಕುವ ತುಘಲಕ್ ಸರ್ಕಾರ ಇದು ಎಂದು ದೂರಿದರು.

ಮೊಟ್ಟೆ ತಿನ್ನಿ; ಏನೂ ತೊಂದರೆ ಇಲ್ಲ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಯ

ಬೆಳಗಾವಿ, ಡಿ.18– ಮೊಟ್ಟೆಯಲ್ಲಿ ಕ್ಯಾನ್ಸರ್‌ಕಾರಕ ಅಂಶವಿದೆ ಎಂಬ ವದಂತಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತೆರೆ ಎಳೆದಿದ್ದಾರೆ. ಯಾವುದೇ ಕ್ಯಾನ್ಸರ್‌ಕಾರಕ ಅಂಶವಿಲ್ಲ. ಯಾರು ಆತಂಕಪಡಬೇಕಿಲ್ಲ, ತಿನ್ನಲು ಸುರಕ್ಷಿತವಾಗಿದೆ ಎಂದು ತಿಳಿಸಿದ್ದಾರೆ.

ವಿಧಾನಸಭೆ ಪ್ರಶ್ನೋತ್ತರ ಅವಧಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ ಬಿಜೆಪಿ ಶಾಸಕ ಸುನೀಲ್‌ಕುಮಾರ್, ಮೊಟ್ಟೆಯ ಬಗ್ಗೆ ಕೆಲವೊಂದು ಮಾಹಿತಿಗಳು ಕೇಳಿ ಬರುತ್ತಿವೆ. ಈ ಬಗ್ಗೆ ಆರೋಗ್ಯ ಸಚಿವರು ಸ್ಪಷ್ಟನೆ ನೀಡಲಿ ಎಂದು ಒತ್ತಾಯಿಸಿದರು. ಇದಕ್ಕೆ ಸರ್ಕಾರ ಸ್ಪಷ್ಟನೆ ನೀಡಿದೆ.

ಮೊಟ್ಟೆ ಸೇವನೆ ಬಗ್ಗೆ ಯಾವುದೇ ಆತಂಕಪಡುವ ಅಗತ್ಯವಿಲ್ಲ. ಕಳೆದ ವರ್ಷ 147 ಮೊಟ್ಟೆ ಮಾದರಿಗಳನ್ನು ಪರೀಕ್ಷಿಸಲಾಗಿತ್ತು ಪರೀಕ್ಷಿಸಿದ ಮಾದರಿಗಳಲ್ಲಿ ಕೇವಲ ಒಂದು ಫೇಲ್ ಆಗಿದ್ದು, ಉಳಿದವು ಉತ್ತಮ ವಾಗಿದ್ದವು. ಮೊಟ್ಟೆ ಆರೋಗ್ಯಕ್ಕೆ ಒಳ್ಳೆಯದು, ಸೇವಿಸಬಹುದು ಎಂದು ಸಚಿವರು ಭರವಸೆ ನೀಡಿದ್ದಾರೆ. ಮೊಟ್ಟೆಯ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಮೊಟ್ಟೆಯನ್ನು ಶಾಲಾ ಮಕ್ಕಳಿಗೆ ಕೊಡಬಹುದು, ತಿನ್ನಬಹುದು, ಆರೋಗ್ಯಕರವಾಗಿದೆ ಎಂದು ಸ್ಪಷ್ಟಪಡಿಸಿದರು.



ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ನಿರ್ದಿಷ್ಟಬ್ರ್ಯಾಂಡ್‌ನ ಮೊಟ್ಟೆಗಳಲ್ಲಿ ಕ್ಯಾನ್ಸರ್ ಉಂಟು ಮಾಡಬಲ್ಲ 'ಜೀನೋಟಾಕ್ಸಿಕ್' ಕೂಡಿದೆ ಎಂಬ ವಿಡಿಯೋ ಹರಿದಾಡುತ್ತಿತ್ತು ಸಹಜವಾಗಿ ಇದು ಜನರಲ್ಲಿ ಆತಂಕಕ್ಕೆ ಎಡೆಮಾಡಿಕೊಟ್ಟಿತ್ತು. ಮೊಟ್ಟೆಗಳಲ್ಲಿ ನಿಷೇಧಿತ ಕ್ಯಾನ್ಸರ್‌ಕಾರಕ ಅಂಶವಿದೆ ಎಂಬ ವದಂತಿಗಳು ಹಬ್ಬಿರುವ ಪರಿಣಾಮ ಶಾಲಾ ಮಕ್ಕಳಿಗೆ ಕೊಡಲು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣ ಆಗಿತ್ತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಲೆಕ್ಷನ್ ಕಿಂಗ್!

●ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ●ಅವರ ತಂದೆ ಹೆಸರು ಕೆಡಲು ಅವರೇ ಕಾರಣ!

ಬೆಳಗಾವಿ, ಡಿ.18(ಕೆಎಂಶಿ)– ಕಲೆಕ್ಷನ್ ಕಿಂಗ್ ಎಂಬ ಬಿರುದು ಇದ್ದರೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೆ ಸಲ್ಲುತ್ತದೆ. ಅವರ ತಂದೆ ಹೆಸರು ಕೆಡಲು ಇವರೇ ಕಾರಣ ಎಂಬುದನ್ನು ಮರೆಯಬಾರದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಗುರುತರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಖಜಾನೆ ಖಾಲಿ ಮಾಡಿ ಪಕ್ಷದ ಹೈಕಮಾಂಡ್ ತೃಪ್ತಿಪಡಿಸಲಾಗುತ್ತಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಯಾವ ಖಜಾನೆ ಖಾಲಿ ಆಗಿದೆ. ಅವರ ಕಲೆಕ್ಷನ್‌ಗಳು, ಅಕೌಂಟ್‌ಗಳು ಮತ್ತು ವಹಿವಾಟುಗಳನ್ನು ಬಿಚ್ಚಿಡಬೇಕೇ ಎಂದು ಸವಾಲು ಹಾಕಿದರು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದರೆ, ಏನು ಉತ್ತರಿಸಬೇಕು ಎಂಬುದೂ ನನಗೂ ಗೊತ್ತಿದೆ ಪಕ್ಷದ ಅಧ್ಯಕ್ಷರಾಗಿ ಇತಿಮಿತಿಯಲ್ಲಿ ಮಾತನಾಡಲಿ. ಮೊದಲು ವಿಧಾನಸಭೆಗೆ ಬಂದು ಮಾತನಾಡಲು ಹೇಳಿ, ತಪ್ಪಿಸಿಕೊಂಡು ಹೋಗಿ ಎಲ್ಲೋ ಹೇಳುವುದಲ್ಲ. ಇಲ್ಲಿ ಬಂದು ಮಾತನಾಡಲಿ, ವಿಜಯೇಂದ್ರ ಅವರಿಗೆ ಅನುಭವವಿಲ್ಲ ಎಂದರು.



ಡಿ.ಕೆ. ಶಿವಕುಮಾರ್

ಸಕ್ಕರೆ ಕಾರ್ಖಾನೆಗಳ ವಿಷಯದಲ್ಲಿ ಸರ್ಕಾರ ರೈತರ ಪರ ತೀರ್ಮಾನ ತೆಗೆದುಕೊಂಡಿದೆ. ಕಬ್ಬು, ಮೆಕ್ಕೆಜೋಳ ಬೆಲೆ ಸಮಸ್ಯೆ ಬಗೆಹರಿಸಿದ್ದೇವೆ. ಸರ್ಕಾರದ ನಿರ್ಧಾರಗಳನ್ನು ಗಮನದಲ್ಲಿಡಲು ರೈತರನ್ನು ಪ್ರಾರ್ಥಿಸುತ್ತೇನೆ.

ಉತ್ತರ ಕರ್ನಾಟಕ ವಿಷಯದ ಚರ್ಚೆಗಳಿಗೆ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರು ಉತ್ತರ ನೀಡುತ್ತಾರೆ. ಈ ಭಾಗದ ನೀರಾವರಿ ಯೋಜನೆಗಳಾದ ಯುಕೆಪಿ, ಮಹದಾಯಿ ವಿಚಾರ ಕುರಿತು ಅವಕಾಶ ಸಿಕ್ಕರೆ ನಾನು ಉತ್ತರಿಸುತ್ತೇನೆ. ಕಳೆದ 24 ತಿಂಗಳಿಂದ ಗೃಹಲಕ್ಷ್ಮಿ ಹಣ ಮಹಿಳೆಯರಿಗೆ ನೀಡಿದ್ದೇವೆ ಆರ್ಥಿಕ ಇಲಾಖೆ ಹಣ ಬಿಡುಗಡೆ ಮಾಡಿದೆ. ಇದರಲ್ಲಿ ಸಚಿವರು ಯಾವುದೇ ತಪ್ಪು ಮಾಹಿತಿ ನೀಡಿಲ್ಲ.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ಅಧಿನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುತ್ತಿರುವ ವಿಚಾರ ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎನ್ನುವ ಪ್ರತಿಪಕ್ಷಗಳು, ಜನರ ದಾರಿ ತಪ್ಪಿಸಲು ವಿಷಯ ಪ್ರಸ್ತಾಪಿಸುತ್ತಿವೆ.

ದೆಹಲಿ ಪೊಲೀಸರು ನ್ಯಾಷನಲ್ ಹೆರಾಲ್ಡ್ ಪ್ರಕರಣ ಕುರಿತ ಎಫ್ಐಆರ್ ವಾಪಸ್ ಪಡೆಯುವುದು ಉತ್ತಮ ಎಂದರು. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಹಣ ಏಕೆ ನೀಡಿಲ್ಲ. ನರೇಗಾ ಅನುದಾನ ಇದುವರೆಗೂ ಬಂದಿಲ್ಲ. ಜಲಜೀವನ ಮಿಷನ್ ಹಣವನ್ನೂ ಕೊಟ್ಟಿಲ್ಲ. ರಾಜ್ಯಕ್ಕೆ ಬರಬೇಕಾದ ಅನುದಾನಗಳು, ಜಿಎಸ್‌ಟಿ ಪರಿಹಾರ ಸಿಕ್ಕಿಲ್ಲ. ಗೃಹಲಕ್ಷ್ಮಿ ಹಣದ ಬಗ್ಗೆ ಮಾತನಾಡುತ್ತಾರೆ ಎಂದು ಕುಟುಕಿದರು.

ಮಹಾರಾಷ್ಟ್ರ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಬಿಜೆಪಿ ಕೊಟ್ಟ ಮಾತುಗಳನ್ನು ಉಳಿಸಿಕೊಳ್ಳಲು ಆಗಿಲ್ಲ. ನಾವು ಕೊಟ್ಟ ಭರವಸೆಗಳನ್ನು ಈಡೇರಿಸಿದ್ದೇವೆ ಎಂದರು.

ಸಿದ್ದರಾಮಯ್ಯರಿಗೆ ತಾನು ಇನ್ನೆಷ್ಟು ದಿನ ಸಿಎಂ ಆಗಿರುತ್ತೇನೋ ಎಂಬ ಗೊಂದಲ!

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ

ಬೆಳಗಾವಿ, ಡಿ.18(ಕೆಎಂಶಿ)– ತಾನು ಇನ್ನೆಷ್ಟು ದಿನ ಮುಖ್ಯಮಂತ್ರಿ ಆಗಿರುತ್ತೇನೋ ಎಂಬ ಗೊಂದಲ ಸಿದ್ದರಾಮಯ್ಯ ಅವರನ್ನು ಕಾಡುತ್ತಿದ್ದು, ಭ್ರಷ್ಟಾಚಾರ ಬಿಟ್ಟರೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳೇ ಆಗುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.

ನಾಯಕತ್ವ ಸಮಸ್ಯೆಗೆ ಕಳೆದೊಂದು ವರ್ಷದಲ್ಲಿ ಪರಿಹಾರ ಕಂಡುಕೊಳ್ಳಲು ಆಡಳಿತ ಪಕ್ಷಕ್ಕೆ ಆಗುತ್ತಿಲ್ಲ. ಒಳಜಗಳ, ಡಿನ್ನರ್ ಮೀಟಿಂಗ್ ಬೆಳಗಾವಿಯಲ್ಲೂ ಮುಂದುವರೆದಿದೆ. ಮುಖ್ಯಮಂತ್ರಿ ವಿಚಾರಕ್ಕೆ ಸಂಬಂಧಿಸಿದಂತೆ ಒಳಜಗಳದ ಪರಿಣಾಮ ಆಡಳಿತ ಹಳಿ ತಪ್ಪಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದಾಗಿನಿಂದ ಒಂದಾದ ಮೇಲೊಂದು ಹಗರಣ ಬೆಳಕಿಗೆ ಬರುತ್ತಿದೆ. ಭ್ರಷ್ಟಾಚಾರದ ಹಣ ಹೈಕಮಾಂಡ್‌ಗೆ ಸಂದಾಯ ಮಾಡುವುದು ಮುಂದುವರೆದಿದೆ. ಇದನ್ನು ಹಿಂದಿನಿಂದಲೂ ಹೇಳುತ್ತಿದ್ದೇನೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ನೂರಾರು ಕೋಟಿ ರೂ. ಪೋಲಾಗಿದೆ ಎಂದರು.

ಗುತ್ತಿಗೆದಾರರಿಂದ ವಸೂಲಿ ಮೂಲಕ ಭ್ರಷ್ಟಾಚಾರ ಎಸಗಿ, ಖಜಾನೆ ಖಾಲಿ ಮಾಡಿ ಕಾಂಗ್ರೆಸ್ ಹೈಕಮಾಂಡ್ ತೃಪ್ತಿಪಡಿಸಿ ಅಧಿಕಾರದಲ್ಲಿ ಮುಂದುವರೆಯುವ ಆಟವೊಂದೇ ಸರ್ಕಾರದಲ್ಲಿ ನಡೆಯುತ್ತಿದೆ. ನೀರಾವರಿ ಯೋಜನೆಗಳ ಪ್ರಗತಿ ಶೇ.10ರಷ್ಟೂ ಆಗಿಲ್ಲ.

ಕಂದಾಯ ಸಚಿವರ ವಿರುದ್ಧದ ಆರೋಪ ಗಂಭೀರ ಸ್ವರೂಪದ್ದಾಗಿದ್ದು, ದಾಖಲಾತಿ ಪರಿಶೀಲಿಸದೇ 'ನಮ್ಮ ತಂದೆ ಕಾಲದ್ದು, ನಮ್ಮ ತಾತನ ಕಾಲದ್ದು' ಎಂಬುದಾಗಿ ಹೇಳಿಕೊಂಡು ಅಕ್ರಮ ನಡೆಸಲು ಕಾನೂನಿನಲ್ಲಿ ಅವಕಾಶ ಇದೆಯೇ.

ಆಡಳಿತ ಹಳಿ ತಪ್ಪಿದೆ: ಗೃಹಲಕ್ಷ್ಮೀ ಯೋಜನೆ ಕುರಿತು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸದನಕ್ಕೆ ತಪ್ಪು ಮಾಹಿತಿ ನೀಡುವ ಮೂಲಕ ಅಪಹಾಸ್ಯಕ್ಕೆ ಒಳಗಾಗಿದ್ದಾರೆ. ಶಕ್ತಿ ಯೋಜನೆ ಗ್ಯಾರಂಟಿ ಪರಿಣಾಮ ಸಾರಿಗೆ ಇಲಾಖೆ ಸಂಕಷ್ಟಕ್ಕೆ ಸಿಲುಕಿದೆ. ಸರಿಯಾದ ಸಮಯಕ್ಕೆ ಸಂಬಳ ಕೊಡಲು ಆಗುತ್ತಿಲ್ಲ.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಹಳಿ ತಪ್ಪಿದ್ದು ಬರುವ ದಿನಗಳಲ್ಲಿ ಇವರ ಬಂಡವಾಳ ಇನ್ನಷ್ಟು ಬಯಲಾಗಲಿದೆ ಎಂದರು.

ಡಿ.21ರಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮ

ಮಂಡ್ಯ, ಡಿ.18– ಪಲ್ಸ್ ಪೋಲಿಯೋ ಕಾರ್ಯಕ್ರಮ ಡಿ.21ರಿಂದ 24ರವರೆಗೆ (ಗ್ರಾಮೀಣ ಭಾಗದಲ್ಲಿ 3 ದಿನ ಮತ್ತು ನಗರ ಭಾಗದಲ್ಲಿ 4 ದಿನ)ನಡೆಯಲಿದೆ.

ಸೂಕ್ಷ್ಮ ಕ್ರಿಯಾ ಯೋಜನೆ ಅನುಸಾರ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ 0–5 ವರ್ಷದೊಳಪಟ್ಟ ಒಟ್ಟು 1,16,724 ಮಕ್ಕಳಿಗೆ ಲಸಿಕೆ ನೀಡಬೇಕಾಗಿದ್ದು, ಶೇ.100 ರಷ್ಟು ಸಾಧನೆ ಸಾಧಿಸುವ ಉದ್ದೇಶದಿಂದ ಜಿಲ್ಲೆಯಲ್ಲಿ ಒಟ್ಟು 723 ಪೋಲಿಯೋ ಬೂತ್‌ಗಳು, 1446 ತಂಡಗಳು, 2892 ಲಸಿಕಾ ಸಿಬ್ಬಂದಿ, 120 ವಾಹನ ಹಾಗೂ 146 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ

ಡಿ.21 ರಂದು ಬೆಳಗ್ಗೆ 8 ಗಂಟೆಗೆ ಮಂಡ್ಯದ ಕಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಪಲ್ಸ್ ಪೋಲಿಯೋ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ವ ಸದಸ್ಯರ ಸಭೆ

ಮಂಡ್ಯ, ಡಿ.18– ಕರ್ನಾಟಕ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಡಿ.21ರಂದು ಬೆಳಗ್ಗೆ 11.30ಕ್ಕೆ ಸಂಘದ ಆವರಣದಲ್ಲಿ ನಡೆಯಲಿದೆ. ಸಂಘದಲ್ಲಿ 6000 ಆಜೀವ ಸದಸ್ಯರಿದ್ದಾರೆ. ಎಲ್ಲರಿಗೂ ಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದವರು ಸಭೆಯಲ್ಲಿ ಭಾಗವಹಿಸಲು ಈ ಮೂಲಕ ಆಹ್ವಾನಿಸಲಾಗುತ್ತಿದೆ ಎಂದು ಸಂಘದ ನಿರ್ದೇಶಕ ಹೆಚ್.ಎನ್.ನಾಗಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಂಚಣಿ ಅದಾಲತ್

ಮಂಡ್ಯ, ಡಿ.18– ಮಹಾಲೇಖಪಾಲರ ಕಚೇರಿ ಮುಖ್ಯ ಮಹಾಲೇಖಪಾಲರು ಡೆಪ್ಯೂಟಿ ಅಕೌಂಟೆಂಟ್ ಜನರಲ್, ಹಿರಿಯ ಲೆಕ್ಕಾಧಿಕಾರಿಗಳು, ಬ್ಯಾಂಕುಗಳು ಹಾಗೂ ಖಜಾನೆ ಇಲಾಖೆ ಅಧಿಕಾರಿಗಳ ಸಮನ್ವಯದೊಂದಿಗೆ ಪಿಂಚಣಿದಾರರ ಕುಂದುಕೊರತೆ ಮತ್ತು ಅಹವಾಲುಗಳಿಗೆ ಸಂಬಂಧಿಸಿದಂತೆ ಮೈಸೂರು ವಿಭಾಗ ಮಟ್ಟದ ಪಿಂಚಣಿ ಹಾಗೂ ಜಿಪಿಎಫ್ ಅದಾಲತ್ ಕಾರ್ಯಕ್ರಮ ಡಿ.26 ರಂದು ಬೆಳಗ್ಗೆ 10.30ಕ್ಕೆ ಚಿಕ್ಕಮಗಳೂರು ಡಿಸಿ ಕಚೇರಿ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ನಡೆಯಲಿದೆ.

ಆಯಾ ಜಿಲ್ಲೆಯ ಪಿಂಚಣಿದಾರರು ಈ ಪಿಂಚಣಿ ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆ ನಿವಾರಿಸಿಕೊಳ್ಳಬಹುದು ಎಂದು ಚಿಕ್ಕಮಗಳೂರು ಜಿಲ್ಲಾ ಖಜಾನೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಮಳವಳ್ಳಿಯಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಯಂತ್ಯೋತ್ಸವ

ಭಕ್ತಿಭಾವದ ಶಾಂತಿ–ಸೌಹಾರ್ದ ಪ್ರಾರ್ಥನಾ ಯಾತ್ರೆ



ಶಾಂತಿ–ಸೌಹಾರ್ದ ಪ್ರಾರ್ಥನಾ ಯಾತ್ರೆಗೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಮಳವಳ್ಳಿ, ಡಿ.18– ಆದಿಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಅಂಗವಾಗಿ ಗುರುವಾರ ಬೆಳಗ್ಗೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಪಟ್ಟಣದ ಪೇಟೆ ಒಕ್ಕಲಿಗರ ಬೀದಿಯಲ್ಲಿ ಶಾಂತಿ–ಸೌಹಾರ್ದ ಪ್ರಾರ್ಥನಾ ಯಾತ್ರೆ ಸುತ್ತೂರು ಗುರುಪರಂಪರೆಯ ಸಂಪ್ರದಾಯ ಬದ್ಧ ಆಚರಣೆಯಂತೆ ವೈಭವಯುತವಾಗಿ ಭಕ್ತಿಭಾವದಿಂದ ನಡೆಯಿತು.

ಯಾತ್ರೆ ಪಟ್ಟಣದ ಪೇಟೆ ಬೀದಿಗೆ ಬರುತ್ತಿದ್ದಂತೆ ಮಹಿಳೆಯರಿಂದ ಪೂರ್ಣಕುಂಭ ಕಳಸ, ದಾರಿಯುದ್ದಕ್ಕೂ ತಳಿರು ತೋರಣ, ರಂಗೋಲಿಗಳಿಂದ ಸಿಂಗರಿಸಿದ ಪೇಟೆ ಬೀದಿ ಮಹಾಜನತೆ ಸೌಹಾರ್ದ ರಥ ಯಾತ್ರೆಯನ್ನು ಭಕ್ತಿ ಪೂರ್ವಕವಾಗಿ ಸ್ವಾಗತಿಸಿದರು. ಅಲ್ಲದೇ ನೂರಾರು ಮುಸ್ಲಿಂ ಮುಖಂಡರು ಸ್ವಾಮೀಜಿ ಅವರನ್ನು ಭಕ್ತಿ ಪೂರ್ವಕವಾಗಿ ಬರಮಾಡಿಕೊಂಡು ಶ್ರೀಗಳಿಗೆ ಭಕ್ತಿ ಸಮರ್ಪಿಸಿ ಆಶೀರ್ವಾದ ಪಡೆದು ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಪೇಟೆ ಬೀದಿಯಲ್ಲಿ 2 ಗಂಟೆಗೂ ಹೆಚ್ಚು ಕಾಲ ಸಂಚರಿಸಿದ ಯಾತ್ರೆಯಲ್ಲಿ ಜಾತಿ ಮತವಿಲ್ಲದೆ ಪೇಟೆ ಬೀದಿಯ ಸಾವಿರಾರು ನಿವಾಸಿಗಳು ಭಾಗವಹಿಸಿ, ದಾರಿಯುದ್ದಕ್ಕೂ ಹೂ ಚೆಲ್ಲಿ ಸ್ವಾಮೀಜಿ ಅವರನ್ನು ಸ್ವಾಗತಿಸಿದರು. ಡೊಳ್ಳು ಕುಣಿತ, ವೀರಗಾಸೆ, ಪೂಜಾ ಕುಣಿತ, ಭಜನೆ ನೆರೆದಿದ್ದ ಭಕ್ತ ಮಹಾಶಯರಲ್ಲಿ ಭಕ್ತಿ ಭಾವನೆಯನ್ನು ಇಮ್ಮಡಿಗೊಳಿಸಿತು.

ಪಾಂಡವಪುರದ ಬೇಬಿ ಬೆಟ್ಟದ ಶ್ರೀರಾಮ ಯೋಗಿಶ್ವರ ಮಠದ ಶ್ರೀಶಿವಬಸವ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಗುರು ಜಂಗಮ ಲಿಂಗಕ್ಕೆ ತಲೆಬಾಗಿದ ಎಲ್ಲರೂ ಶರಣರೆ. ಇಲ್ಲಿ ಯಾವುದೇ ಜಾತಿ, ಮತ, ಪಂಥವಿಲ್ಲದೆ ಎಲ್ಲರೂ ನಮ್ಮವರು ಎಂಬ ನಿಟ್ಟಿನಲ್ಲಿ ಸುತ್ತೂರು ಶ್ರೀಗಳ ಜಯಂತಿ ಕಾರ್ಯಕ್ರಮ ಪಟ್ಟಣದಲ್ಲಿ ಬಹಳ ಅದ್ಧೂರಿಯಾಗಿ ಭಕ್ತಿ ಪೂರ್ವಕವಾಗಿ ನಡೆಯುತ್ತಿರುವುದು ಶ್ಲಾಘನೀಯ. ಸುತ್ತೂರು ಶ್ರೀಗಳು ಎಲ್ಲಾ ಮತ ಮಾನ್ಯರನ್ನು, ಸರ್ವ ಜನರನ್ನು ಸಮಾನ ಭಾವ ಹಾಗೂ ಚಿತ್ತದಿಂದ ನೋಡಿದ ಪ್ರತೀಕವೇ ಈ ಜಯಂತಿ ಕಾರ್ಯಕ್ರಮದ ಯಶಸ್ವಿಗೆ ಮೂಲ ಕಾರಣ ಎಂದರು.

ವೈದ್ಯನಾಥಪುರದ ಶ್ರೀಕದಂಬ ಜಂಗಮ ಮಠದ ಶ್ರೀರೇಣುಕಾ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಆಧ್ಯಾತ್ಮಿಕ ಬೆಳಕನ್ನು ಜಗತ್ತಿಗೆ ಪ್ರಚಾರ ಪಡಿಸುತ್ತಿರುವುದು ಸುತ್ತೂರು ಗುರು ಪರಂಪರೆ. ಈ ಸುತ್ತೂರು ಪರಂಪರೆಯ ದಾರ್ಶನಿಕರು ಮಳವಳ್ಳಿಯಲ್ಲಿ ನೆಲೆಯೂರಿ ಈ ಪವಿತ್ರ ಕಾರ್ಯಕ್ರಮ ನಡೆಸುತ್ತಿರುವುದು ಈ ಕ್ಷೇತ್ರದ ಜನರ ಸುಯೋಗವಾಗಿದೆ ಎಂದರು.

ಯಾತ್ರೆಯಲ್ಲಿ ಭಾಗವಹಿಸಿದ್ದ ಸುತ್ತೂರು ಶ್ರೀಗಳು ಪೇಟೆ ಬೀದಿಯ ಇತಿಹಾಸ ಪ್ರಸಿದ್ಧ ಗೌರಿಗುಡಿ, ವೀರಮಾಸ್ತಿ ಕೆಂಪಮ್ಮ, ಸಿದ್ದಾಪ್ಪಾಜಿ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಅಲ್ಲದೇ ಪೇಟೆ ಬೀದಿಯಲ್ಲಿರುವ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಯಾತ್ರೆಯಲ್ಲಿ ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಮರಿತಿಬ್ಬೇ ಗೌಡ, ಪೇಟೆ ಬೀದಿ ಯಜಮಾನರು, ಸಾವಿರಾರು ಜನರು ಭಕ್ತಿ ಸಮರ್ಪಿಸಿದರು. ಸುತ್ತೂರು ಶ್ರೀಗಳು ಎಲ್ಲಾ ಸಮುದಾಯದ ಯಜಮಾನರು, ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಮುಖಂಡರನ್ನು ಗೌರವಿಸಿ, ಆಶೀರ್ವಾದಿಸಿದರು.

ನಾಳೆಯಿಂದ ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ಪಂದ್ಯಾವಳಿಗೆ ನಿಖಿಲ್ ಕುಮಾರಸ್ವಾಮಿ ಚಾಲನೆ



ಸುದ್ದಿಗೋಷ್ಠಿಯಲ್ಲಿ ಗಜೇಂದ್ರ ಮಾತನಾಡಿದರು.

ಭಾರತೀನಗರ, ಡಿ.18– ಕನ್ನಡ ರಾಜ್ಯೋತ್ಸವ ಪ್ರಯುಕ್ತ ಡಿ.20, 21ರಂದು ದೊಡ್ಡರಸಿನಕೆರೆಯಲ್ಲಿ ಶ್ರೀಕಾಳಿಕಾಂಬ ಯುವ ಕ್ರೀಡಾ ಬಳಗದಿಂದ ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ರಂಗಭೂಮಿ ಕಲಾವಿದರ ಸಂಘದ ಹೋಬಳಿ ನಿರ್ದೇಶಕ ಗಜೇಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ನೇತೃತ್ವದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ದಿ.ಡಿ.ಎಂ.ಮಂಚೇಗೌಡರ ಹಾಗೂ ಗ್ರಾಮದ ಕ್ರೀಡಾಪಟುಗಳಾದ ದಿ.ಎನ್.ಎಸ್.ಸತೀಶ್, ದಿ.ನಾರಾಯಣ್, ದಿ.ಶ್ಯಾಮ್, ದಿ.ಡಿ.ಸಿ.ನಾಗೇಶ್ ಅವರ ಸ್ಮರಣಾರ್ಥ ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ.

ವಿಜೇತರಿಗೆ ಪ್ರಥಮ 80 ಸಾವಿರ, ದ್ವಿತೀಯ 60 ಸಾವಿರ, ತೃತೀಯ 40 ಸಾವಿರ, ಚತುರ್ಥ 20 ಸಾವಿರ ನಗದು ಹಾಗೂ ಆಕರ್ಷಕ ಟ್ರೋಫಿ ನೀಡುವ ಜೊತೆಗೆ ಕೆ.ಎಂ.ದೊಡ್ಡಿ ಸಮೃದ್ಧಿ ಮೊಬೈಲ್ ಮಳಿಗೆಯಿಂದ ಉತ್ತಮ ಸರಣಿ ದಾಳಿಗಾರ, ಉತ್ತಮ ಸರಣಿ ಹಿಡಿತಗಾರನಿಗೆ ಆಕರ್ಷಕ ಸ್ಮಾರ್ಟ್ ಫೋನ್ ನೀಡಲಾಗುವುದು. ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧೆಡೆಗಳಿಂದ 80 ರಿಂದ 90 ತಂಡಗಳು ಭಾಗವಹಿಸಲಿವೆ. ಭಾಗವಹಿಸುವ ಎಲ್ಲಾ ತಂಡಗಳಿಗೂ ವಸತಿ ಮತ್ತು ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಇನ್ನೂ ಹೆಚ್ಚು ತಂಡಗಳು ಭಾಗವಹಿಸಿದರೂ ಮೂಲ ಸೌಕರ್ಯ ಒದಗಿಸಲು ಶ್ರೀ ಕಾಳಿಕಾಂಬ ಯುವ ಕ್ರೀಡಾ ಬಳಗ ಸಿದ್ಧ ಎಂದರು.

ಪಂದ್ಯಾವಳಿಯಲ್ಲಿ 7 ಜನರ ತಂಡದಲ್ಲಿ ಒಂದೇ ಗ್ರಾಮದ ಐವರು ಆಟಗಾರರು ಕಡ್ಡಾಯವಾಗಿರಬೇಕು. ಇನ್ನುಳಿದ ಇಬ್ಬರು ಆಟಗಾರರಿಗೆ ಹೊರಗಿನವರಿಗೆ ಅವಕಾಶವಿರುತ್ತದೆ. ಆಟಗಾರರಿಗೆ ಆಧಾರ್ ಕಾರ್ಡ್ ಕಡ್ಡಾಯ ಎಂದರು.

ಕಾಳಿಕಾಂಬ ಯುವ ಕ್ರೀಡಾ ಬಳಗದ ಅಧ್ಯಕ್ಷ ಡಿ.ಹೆಚ್.ಮಹೇಶ್ ಮಾತನಾಡಿ, ದೊಡ್ಡರಸಿನಕೆರೆ ಗ್ರಾಮದಲ್ಲೇ ಚಿತ್ರೀಕರಿಸಿರುವ ಕಮಲಮ್ಮ ಕಂಬೈನ್ಸ್‌ನ ಅಂಬಿ ಸುಬ್ಬಣ್ಣ ನಿರ್ದೇಶನ ಹಾಗೂ ನಿರ್ಮಾಣದ ಗಜೇಂದ್ರ ಕೇರ್ ಆಫ್ ದೊಡ್ಡರಸಿನಕೆರೆ ಚಲನಚಿತ್ರದ ಟ್ರೈಲರ್ ಅನ್ನು ನಿಖಿಲ್ ಕುಮಾರಸ್ವಾಮಿ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಕಾರ್ಯಕ್ರಮದ ಆಯೋಜಕರಾದ ಗೂಳಿ ಮಹೇಶ್, ಸಂದೀಪ್, ಕಿರಣ್, ಸಂತೋಷ್ ಇದ್ದರು.



ಮಾಜಿ ಸಚಿವ ಹೆಚ್.ಡಿ.ರೇವಣ್ಣಗೆ ಸನ್ಮಾನ

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಹೊಳೆನರಸೀಪುರ ನಿವಾಸದಲ್ಲಿ ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎಸ್.ಆರ್.ದಿನೇಶ್ ನೇತೃತ್ವದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅಭಿಮಾನಿಗಳ ಬಳಗದ ಸದಸ್ಯರು ಸನ್ಮಾನಿಸಿದರು.

'ಕೈ' ಕಾರ್ಯಕರ್ತರಿಂದ ಬಿಜೆಪಿ ಕಚೇರಿಗೆ ಮುತ್ತಿಗೆ ಯತ್ನ



ಮಂಡ್ಯದಲ್ಲಿ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು.

ಮಂಡ್ಯ, ಡಿ.18– ಕೇಂದ್ರ ಸರ್ಕಾರವು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ರಾಷ್ಟ್ರೀಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯವನ್ನು (ಇಡಿ) ಬಳಸಿಕೊಂಡು ತೊಂದರೆ ನೀಡಲಾಗುತ್ತಿದೆ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲಾ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ನಗರದ ಬಂದೀಗೌಡ ಬಡಾವಣೆಯ ಕಾಂಗ್ರೆಸ್ ಕಚೇರಿಯಿಂದ ಬಿಜೆಪಿ ಕಚೇರಿಯತ್ತ ಮೆರವಣಿಗೆ ಹೊರಟ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ಸುಭಾಷ್ ನಗರದಲ್ಲಿರುವ ಬಿಜೆಪಿ ಕಚೇರಿ ಬಳಿ ಬ್ಯಾರಿಕೇಡ್ ಹಾಕಿ ತಡೆದು ವಶಕ್ಕೆ ಪಡೆದರು.

ಈ ವೇಳೆ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದರಾದರೂ ಪರಿಸ್ಥಿತಿ ಉದ್ವಿಗ್ನಗೊಳ್ಳುತ್ತಿದ್ದಂತೆ ಪೊಲೀಸರು ಪ್ರತಿಭಟನಾನಿರತ ಮುಖಂಡರನ್ನು ತಮ್ಮ ವಶಕ್ಕೆ ಪಡೆದು ಬಂಧಿಸಿ, ಡಿಎಆರ್ ವ್ಯಾನ್‌ನಲ್ಲಿ ಕರೆದೊಯ್ದರು. ಬಿಜೆಪಿ ಹಾಗೂ ಪೊಲೀಸರ ವಿರುದ್ಧವು ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಮಾತನಾಡಿ, ಬಿಜೆಪಿ ದ್ವೇಷ ರಾಜಕಾರಣದಲ್ಲಿ ತೊಡಗಿದ್ದು, ಕಾಂಗ್ರೆಸ್ ನಾಯಕರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಅಪಪ್ರಚಾರ ಮಾಡುತ್ತಿದೆ. ಬಿಜೆಪಿಯ ಈ ಕುತಂತ್ರಕ್ಕೆ ಉತ್ತರವಾಗಿ ನ್ಯಾಯಾಲಯದಲ್ಲಿ ನ್ಯಾಯ ಸಿಕ್ಕಿದೆ. ಮುಂದಿನ ದಿನಗಳಲ್ಲಿ ದೇಶದ ಜನ ಬಿಜೆಪಿಯವರಿಗೆ ಬುದ್ಧಿ ಕಲಿಸುತ್ತಾರೆ ಎಂದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್ ಮಾತನಾಡಿ, ಪ್ರತಿ ಸಂದರ್ಭದಲ್ಲೂ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ಸುಪ್ರೀಂ ಕೋರ್ಟ್ ಹಾಗೂ ಕಾನೂನನ್ನು ಧಿಕ್ಕರಿಸುವ ಮೂಲಕ ಮೋದಿ ಅವರು ದ್ವೇಷ ಹಾಗೂ ಸ್ವಾರ್ಥ ರಾಜಕಾರಣ ಮಾಡುತ್ತಿದ್ದಾರೆ. ಇನ್ನಾದರೂ ಇಂತಹ ಪ್ರಯತ್ನವನ್ನು ಕೈ ಬಿಡದಿದ್ದರೆ ದೇಶಾದ್ಯಂತ ಉಗ್ರ ಹೋರಾಟವನ್ನು ಕಾಂಗ್ರೆಸ್ ಪಕ್ಷ ಮಾಡುತ್ತದೆ ಎಂದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪ.ಜಾತಿ ವಿಭಾಗದ ಜಿಲ್ಲಾ ಉಪಾಧ್ಯಕ್ಷ ವಿಜಯ ಕುಮಾರ್, ಕಾಂಗ್ರೆಸ್ ಜಿಲ್ಲಾ ವಕ್ತಾರ ಸಿ.ಎಂ.ದ್ಯಾವಪ್ಪ, ನಗರಸಭೆ ಮಾಜಿ ಸದಸ್ಯ ಶ್ರೀಧರ್, ಮುಖಂಡರಾದ ರಮೇಶ್, ಕೃಷ್ಣ, ಶಬರಿನ್ ತಾಜ್ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ದ್ವೇಷ ಭಾಷಣಕ್ಕೆ ಕಡಿವಾಣ

ಮಾಡಲಾಗಿದೆ ಎಂದು ಗೃಹ ಸಚಿವ ಡಾ. ಜಿ ಪರಮೇ ಶ್ವರ್ ಸ್ಪಷ್ಟಪಡಿಸಿದರು.

ಈಗಾಗಲೇ ಮುದ್ರಿತ ಪುಸ್ತಕ ಗಳಿಗೂ ಅನ್ವಯ: ಈಗಾಗಲೇ ಮುದ್ರಿತ ವಾಗಿರುವ ಪುಸ್ತಕ, ಗ್ರಂಥದಲ್ಲಿ ದ್ವೇಷದ ಮಾತುಗಳು ಇವೆ ಎಂದಾದರೆ ಏನು ಕ್ರಮ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ಪ್ರಶ್ನಿಸಿದರು. ಇದಕ್ಕೆ ಸ್ಪಷ್ಟನೆ ನೀಡಿದ ಪರಮೇಶ್ವರ್, ಹಳೆ ಪುಸ್ತಕದಲ್ಲಿ ಇಂತಹ ಅಂಶ ಇದ್ದರೂ ಅದು ಕೂಡ ಈ ಕಾನೂನಿನ ವ್ಯಾಪ್ತಿಯಲ್ಲಿ ಬರಲಿದೆ. ಅಂತವನ್ನು ಬ್ಯಾನ್ ಮಾಡುವ ಪ್ರಕ್ರಿಯೆಗೆ ಅವಕಾಶ ಇದೆ ಎಂದು ವಿವರಿಸಿದರು.

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿ: ವಿಧೇಯಕದ ಬಗ್ಗೆ ವಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, 75 ವರ್ಷದ ಹಿಂದೆ ಯಾವ ತಜ್ಞರಿಗೆ ಬಾರದ ಆಲೋಚನೆ ನಮ್ಮ ಗೃಹ ಸಚಿವರಿಗೆ ಏಕೆ ಬಂತು, ರಾಜಕೀಯ ದ್ವೇಷ ತೀರಿಸಿಕೊಳ್ಳಲು ಇದನ್ನು ಬಳಕೆ ಮಾಡುವಂತಹ ಅವಕಾಶ ಸಿಕ್ಕಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸ್ ಅಧಿಕಾರಿಗಳು ಹಿಟ್ಲರ್ ಆಗಲು ಅವಕಾಶ ಇದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಲಿದೆ. ಕಾರ್ಟೂನ್ ರಚಿಸಲು ಅವಕಾಶ ಇಲ್ಲದಂತಾಗುತ್ತದೆ. ಭ್ರಷ್ಟಾಚಾರದಂತಹ ಗಂಭೀರ ಆರೋಪ ಸುದ್ದಿ ಮಾಡಿದರೆ ಮಾಧ್ಯಮದ ಪ್ರತಿನಿಧಿಗಳು ಮೊದಲೇ ಜಾಮೀನು ಪಡೆಯುವಂತಹ ಸ್ಥಿತಿ ಇದೆ ಎಂದು ಆತಂಕ ವ್ಯಕ್ತಪಡಿಸಿದರು. ವಿಧೇಯಕ ಜಾರಿಗೆ ತರುವ ಉದ್ದೇಶ ಓಟ್ ಬ್ಯಾಂಕ್ ರಾಜಕಾರಣವಾಗಿದೆ. ತುರ್ತು ಪರಿಸ್ಥಿತಿ ಜಾರಿಗೆ ತಂದವರಿಂದ ಇನ್ನೇನು ಬಯಸಲು ಸಾಧ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ವಿಧೇಯಕದ ಪ್ರತಿಯನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಮಾತಿಗೆ ಸಿಗದ ಅವಕಾಶ: ದ್ವೇಷ ಭಾಷಣ ವಿರೋಧಿ ಮಸೂದೆ ಸದನದಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚೆ ಆಗಲಿದೆ ಎಂಬ ನಿರೀಕ್ಷೆ ಇತ್ತು. ಈ ಬಗ್ಗೆ ಬಿಜೆಪಿ ಸದಸ್ಯರೂ ಚರ್ಚೆಯ ನಿರೀಕ್ಷೆಯಲ್ಲಿದ್ದರು. ಆದರೆ ಸಚಿವ ಬೈರತಿ ಸುರೇಶ್ ಕರಾವಳಿ ಬಗ್ಗೆ ನೀಡಿದ ಹೇಳಿಕೆ ಕೋಲಾಹಲ ಸೃಷ್ಟಿಸಿತು. ಈ ಗದ್ದಲದ ನಡುವೆಯೇ ವಿಧೇಯಕವೂ ಅಂಗೀಕಾರಗೊಂಡಿತು.

ಹಾಕಿದರೆ ದಂಡದ ಜೊತೆಗೆ ಜೈಲು ಶಿಕ್ಷೆ

ಹಾಗಾಗಿ ಸರ್ಕಾರ ಹೊಸ ನಿಯಂತ್ರಣ ಮಾರ್ಗಸೂಚಿಗಳನ್ನು ಹೊರಡಿಸಿದೆ ಎಂದು ತಿಳಿಸಿದ್ದಾರೆ.

ನಿಯಮ ಉಲ್ಲಂಘನೆಯಾದರೆ ಶಿಕ್ಷೆ: ಪಾರಿವಾಳಗಳಿಂದ ಸಾರ್ವಜನಿಕರ ಆರೋಗ್ಯದಲ್ಲಿ ಉಂಟಾಗುತ್ತಿರುವ ಏರುಪೇರುಗಳನ್ನು ಗಂಭೀರವಾಗಿ ಪರಿಗಣಿಸಿರುವ ಆರೋಗ್ಯ ಇಲಾಖೆ, ಇನ್ನು ಮುಂದೆ ಎಲ್ಲೆಂದರಲ್ಲಿ ಪಾರಿವಾಳಗಳಿಗೆ ಆಹಾರ ನೀಡುವಂತಿಲ್ಲ ಎಂಬ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಒಂದು ವೇಳೆ ಈ ನಿಯಮ ಉಲ್ಲಂಘಿಸಿದರೆ, ಅವರ ವಿರುದ್ಧ ಬಿಎನ್ಎಸ್ ಸೆಕ್ಷನ್ 270, 271 ಮತ್ತು 272 ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತದೆ. ಅಲ್ಲದೆ, ದಂಡದ ಜೊತೆಗೆ 6 ತಿಂಗಳವರೆಗೆ ಜೈಲು ಶಿಕ್ಷೆ ಆಗಬಹುದು.

ಈ ಮಾರ್ಗಸೂಚಿ ಹೊರಡಿಸುವ ಮುನ್ನ ಕೆಲ ದಿನಗಳ ಹಿಂದೆ ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಈ ಕುರಿತು ಜಿಬಿಎಗೆ ಪತ್ರ ಬರೆದು ಮನವಿ ಮಾಡಿದ್ದರು. ಅವರ ಪತ್ರದಲ್ಲಿ ಬೆಂಗಳೂರು ಮಹಾನಗರದಲ್ಲಿ ಪಾರಿವಾಳಗಳ ಸಂಖ್ಯೆ ತೀವ್ರ ಹೆಚ್ಚಳವಾಗುತ್ತಿರುವ ಹಾಗೂ ಪಾರಿವಾಳಗಳಿಂದ ಶ್ವಾಸಕೋಶ ಸಮಸ್ಯೆ ಹೆಚ್ಚಾಗುತ್ತಿರುವ ಆತಂಕವನ್ನು ನನ್ನೊಡನೆ ಕೆಲವು ನಿಯೋಗಗಳು ಹಂಚಿಕೊಂಡಿದ್ದವು. ವಿಶೇಷವಾಗಿ ಉದ್ಯಾನವನಗಳಲ್ಲಿ ಬೆಳಗ್ಗೆ ನಡಿಗೆ ಮಾಡುವವರ, ವ್ಯಾಯಾಮ ಮಾಡುವವರಿಂದ ಆತಂಕ ವ್ಯಕ್ತವಾಗಿತ್ತು ಎಂದು ತಿಳಿಸಿದ್ದರು. ಅಲ್ಲದೆ, ನಾನು ಈ ಕುರಿತು ಕೆಲವು ಶ್ವಾಸಕೋಶ ತಜ್ಞರನ್ನು ಭೇಟಿ ಮಾಡಿ ಚರ್ಚಿಸಿದ್ದೆ. ಈ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತರಿಗೆ ನಾನು 3.11.25 ರಂದು ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದೆ.

ಕಳೆದ ವಾರ ಬೆಳಗಾವಿಯ ಅಧಿವೇಶನದ ಸಂದರ್ಭದಲ್ಲಿ ರಾಜ್ಯದ ಆರೋಗ್ಯ ಸಚಿವರು ಹಾಗೂ ರಾಜ್ಯದ ಆರೋಗ್ಯ ಪ್ರಧಾನ ಕಾರ್ಯದರ್ಶಿಗಳು ನನ್ನೊಡನೆ ಈ ವಿಚಾರ ಪ್ರಸ್ತಾಪಿಸಿ ನನ್ನ ಮನವಿಯಲ್ಲಿ ಹುರುಳಿದೆ ಎಂದು ಹೇಳಿ ಈ ಕುರಿತು ಸೂಕ್ತ ಆದೇಶ ಹೊರಡಿಸುವುದಾಗಿ ಹೇಳಿದ್ದರು ಎಂದು ಸುರೇಶ್‌ಕುಮಾರ್ ತಿಳಿಸಿದ್ದಾರೆ. ಸರ್ಕಾರದ ಈ ಆದೇಶ ಕೆಲ ಪಕ್ಷಿ ಪ್ರಿಯರಿಗೆ ಬೇಸರ ತಂದಿದೆ.

ಮೈಸೂರು ಅರಮನೆ ಮುಂಭಾಗ ಕೆಲವು ಸಂಸ್ಥೆಗಳು ಪಾರಿವಾಳಗಳಿಗೆ ಈ ಹಿಂದೆ ಆಹಾರ ಹಾಕುತ್ತಿದ್ದವು. ಇತ್ತೀಚೆಗೆ ಇದರ ವಿರುದ್ಧ ಹಲವರು ಧ್ವನಿ ಎತ್ತಿದ್ದು, ಕೆಲ ನಾಗರಿಕರು ಸಭೆ ನಡೆಸಿ, ಅರಮನೆ ಮುಂಭಾಗ ಪಾರಿವಾಳಗಳಿಗೆ ಆಹಾರ ಹಾಕುವುದರಿಂದ ಉಂಟಾಗುವ ದುಷ್ಪರಿಣಾಮದ ಬಗ್ಗೆ ಗಮನ ಸೆಳೆದ ಹಿನ್ನೆಲೆಯಲ್ಲಿ ಸ್ಥಳೀಯ ಆಡಳಿತವು ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿರ್ಬಂಧಿಸಿದ್ದನ್ನು ಸ್ಮರಿಸಬಹುದು.

ತನಿಖೆ ಇನ್ನೂ ಪೂರ್ಣಗೊಂಡಿಲ್ಲ; ಎಸ್‌ಪಿಪಿ

ವೆಂಕಟೇಶ ಅರಬಟ್ಟಿ ಅವರು ವರದಿ ಸಲ್ಲಿಸಿ ವಾದ ಮಂಡಿಸಿದರು.

ಅಂತಿಮ ವರದಿ ಸಲ್ಲಿಸಲು ಸಾಧ್ಯವಾಗದ ಕಾರಣ ಬಿಚ್ಚಿಟ್ಟ ಎಸ್‌ಪಿಪಿ: ಎಸ್‌ಪಿಪಿ ವೆಂಕಟೇಶ ಅರಬಟ್ಟಿ ಮಾತನಾಡಿ, ಕೆಲವು ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಪೂರ್ವಾನುಮತಿ ಕೇಳಲಾಗಿದೆ. ಆದರೆ ಇನ್ನೂ ಅನುಮತಿ ದೊರಕದ ಕಾರಣ ಅಂತಿಮ ವರದಿ ಸಲ್ಲಿಸಲು ಸಾಧ್ಯವಾಗಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ನ್ಯಾಯಾಧೀಶರು, ಕೆಲವು ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್ ಅನುಮತಿ ಬಾಕಿ ಇದೆ ಎಂದು ವರದಿ ಸಲ್ಲಿಸುತ್ತಿದ್ದೀರಾ. ಹಾಗಾದರೆ ಇದರಲ್ಲಿ ಯಾಕೆ ಅಂತಿಮ ವರದಿ ಸಲ್ಲಿಸಲಾಗಿಲ್ಲ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಸ್‌ಪಿಪಿ, ತನಿಖಾ ವರದಿ ಸಿದ್ಧವಾಗಿದೆ. ಆದರೆ ಪ್ರಾಸಿಕ್ಯೂಷನ್ ಅನುಮತಿ ಸಿಗದ ಹಿನ್ನೆಲೆಯಲ್ಲಿ ವರದಿಯನ್ನು ಸೀಲ್ಡ್ ಕವರ್‌ನಲ್ಲಿ ಸಲ್ಲಿಸಲು ಅನುಮತಿ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ನ್ಯಾಯಾಧೀಶರು ಪ್ರಕರಣದ ಕೇಸ್ ಡೈರಿ ಸಲ್ಲಿಸುವಂತೆ ಎಸ್‌ಪಿಪಿಗೆ ಸೂಚನೆ ನೀಡಿದರು. ಸ್ವಲ್ಪ ಸಮಯ ನೀಡಿದರೆ ಸೀಲ್ಡ್ ಕವರ್‌ನಲ್ಲಿ ವರದಿ ಸಲ್ಲಿಸಲು ಸಿದ್ಧವಿರುವುದಾಗಿ ಎಸ್‌ಪಿಪಿ ಭರವಸೆ ನೀಡಿದರು.

ಈ ವೇಳೆ ದೂರುದಾರು ಪರವಾಗಿ ಹಾಜರಾದ ಸ್ನೇಹಮಯಿ ಕೃಷ್ಣ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ನ್ಯಾಯಾಲಯವನ್ನು ದಾರಿ ತಪ್ಪಿಸುವ ಪ್ರಯತ್ನ ನಡೆಯುತ್ತಿದೆ. ಯಾವುದೇ ಸಮರ್ಪಕ ತನಿಖೆ ನಡೆಯುತ್ತಿಲ್ಲ. ಆರೋಪಿಗಳನ್ನು ರಕ್ಷಿಸುವ ಕೆಲಸ ಮಾಡಲಾಗುತ್ತಿದೆ ಎಂದು ವಾದಿಸಿದರು. ತನಿಖಾಧಿಕಾರಿಗಳು ಸರ್ವಾಧಿಕಾರಿಗಳೇ! ನ್ಯಾಯಾಲಯ ಸೂಚನೆ ನೀಡಿದ ಬಳಿಕವೂ ಒಬ್ಬೇ ಒಬ್ಬರನ್ನೂ ತನಿಖೆ ಮಾಡಿಲ್ಲ. ತನಿಖೆ ನಡೆದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು ಎಂದು ಅವರು ಕಠಿಣವಾಗಿ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಸ್‌ಪಿಪಿ, ನಾವು ಕೇಸ್ ಡೈರಿ ಸಲ್ಲಿಸಲು ಸಿದ್ಧವಿದ್ದೇವೆ ಎಂದು ತಿಳಿಸಿದರು. ಈ ವೇಳೆ ಸ್ನೇಹಮಯಿ ಕೃಷ್ಣ ಅವರು ಬಿ–ರಿಪೋರ್ಟ್ ಕುರಿತು ತಕ್ಷಣ ಆದೇಶ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದರು. ಆದರೆ ನ್ಯಾಯಾಧೀಶರು, ಅಂತಿಮ ವರದಿ ಇನ್ನೂ ಸಲ್ಲಿಕೆಯಾಗಿಲ್ಲ. ಭಾಗಶಃ ವರದಿ ಆಧರಿಸಿ ಆದೇಶ ನೀಡುವುದು ಹೇಗೆ ಸಾಧ್ಯ ಎಂದು ಸ್ಪಷ್ಟಪಡಿಸಿದರು. ವಿಚಾರಣೆಯ ವೇಳೆ ಲೋಕಾಯುಕ್ತ ಪೊಲೀಸರ ಪರವಾಗಿ ತನಿಖೆಯ ಪ್ರಗತಿ ವರದಿ ಸಲ್ಲಿಸಲಾಗಿದ್ದು, ತನಿಖೆ ಅಂತಿಮ ಹಂತದಲ್ಲಿದೆ ಎಂದು ಎಸ್‌ಪಿಪಿ ತಿಳಿಸಿದರು. ಬಿ–ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ಮೇಲಿನ ಆದೇಶವನ್ನು, ತನಿಖೆ ಪೂರ್ಣಗೊಳ್ಳದ ಕಾರಣ ಈವರೆಗೆ ಮುಂದೂಡಲಾಗಿತ್ತು ಎಂದು ನ್ಯಾಯಾಲಯ ಗಮನಿಸಿದೆ.

ನ್ಯಾಯಾಲಯವು, ಬಿ–ರಿಪೋರ್ಟ್‌ಗೆ ಸಂಬಂಧಿಸಿದಂತೆ ಹೆಚ್ಚುವರಿ ವಾದಗಳಿದ್ದಲ್ಲಿ ಇಡಿ, ದೂರುದಾರ ಮತ್ತು ಲೋಕಾಯುಕ್ತ ಪೊಲೀಸರ ಪರವಾಗಿ ಸಲ್ಲಿಸಲು ಅವಕಾಶ ನೀಡಿ, ವಿಚಾರಣೆಯನ್ನು ಡಿಸೆಂಬರ್ 23ಕ್ಕೆ ಮುಂದೂಡಿತು. ಇದೇ ವೇಳೆ ಡಿ.23ರಂದು ಕೇಸ್ ಡೈರಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ನಿರ್ದೇಶನ ನೀಡಿತು.

ಲೋಕಾಯುಕ್ತ ಪೊಲೀಸರ ಸ್ಥಿತಿಗತಿ ವರದಿಯ ಪ್ರಕಾರ ಒಟ್ಟು 11 ಪ್ರಕರಣಗಳಲ್ಲಿ 10 ಪ್ರಕರಣಗಳ ತನಿಖೆ ಇನ್ನೂ ಬಾಕಿಯಿದ್ದು, 11ನೇ ಪ್ರಕರಣವಾದ ದಿನೇಶ್‌ಕುಮಾರ್ ಪ್ರಕರಣದಲ್ಲಿ ಮಾತ್ರ ಆರೋಪಪಟ್ಟಿ ಸಿದ್ಧವಾಗಿದೆ. ಆದರೆ ಆ ಆರೋಪಪಟ್ಟಿ ಸಲ್ಲಿಸಲು ಕೂಡ ಪೂರ್ವಾನುಮತಿ ಕೋರಲಾಗಿದೆ. ಕೆಲವು ಪ್ರಕರಣಗಳಲ್ಲಿ ತನಿಖೆ ನಡೆಸಲು ಅಗತ್ಯ ಅನುಮತಿ ಇನ್ನೂ ದೊರಕಿಲ್ಲ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ನ್ಯಾಯಾಲಯವು ಡಿ.23ರಂದು ಕೇಸ್ ಡೈರಿ ಪರಿಶೀಲಿಸಿದ ಬಳಿಕ, ಬಿ.ರಿಪೋರ್ಟ್ ಪ್ರಶ್ನಿಸಿರುವ ಅರ್ಜಿಯ ಮೇಲೆ ಆದೇಶ ನೀಡುವುದಾಗಿ ತಿಳಿಸಿದೆ.

ಮೂರು ವರ್ಷ ಜೈಲು; 1 ಲಕ್ಷ ರೂ. ದಂಡ

ಸಚಿವರು, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ಸಾಮಾಜಿಕವಾಗಿ ಬಹಿಷ್ಕಾರ ಹಾಕುವುದು ನಡೆದಿದೆ. ಇದು ಮಾನವ ಹಕ್ಕುಗಳ, ನಾಗರಿಕ ಹಕ್ಕುಗಳ ಉಲ್ಲಂಘನೆ, ಇದನ್ನು ನಿಷೇಧಿಸಲು ಐತಿಹಾಸಿಕ ಮಸೂದೆಯನ್ನು ರೂಪಿಸಲಾಗಿದೆ ಎಂದರು. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, 21ನೇ ಶತಮಾನದಲ್ಲಿ ನಾವೆಲ್ಲರೂ ಒಂದೇ ಎಂದು ಭಾಷಣ ಮಾಡಿದರೂ ನಿರ್ಬಂಧ, ತಾರತಮ್ಯ ಮುಂದುವರಿದಿದೆ. ಹೋಟೆಲ್, ಕ್ಷೌರ ಸೇರಿದಂತೆ ಇತರ ಸೇವೆ ನಿರ್ಬಂಧಿಸುವುದು, ಬಹಿಷ್ಕಾರ ಹಾಕುವುದು ಅಕ್ಷಮ್ಯವಾಗಿದ್ದು, ಕಾಯ್ದೆ ಜಾರಿಯಾದಾಗ ಹಳ್ಳಿಗಳಲ್ಲಿ ಸಾಮಾಜಿಕ ಬಹಿಷ್ಕಾರ ನಿಷೇಧ, ದಂಡ ಹಾಗೂ ಶಿಕ್ಷೆ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.


ಬಿಜೆಪಿಯ ಶಾಸಕರಾದ ಎಸ್. ಸುರೇಶ್‌ಕುಮಾರ್, ಆರಗ ಜ್ಞಾನೇಂದ್ರ, ಸಿಮೆಂಟ್ ಮಂಜು ಹಾಗೂ ಜೆಡಿಎಸ್‌ನ ನೇಮಿರಾಜ ನಾಯ್ಕ್ ಮತ್ತಿತರರು ಮಾತನಾಡಿದರು. ಕಾಂಗ್ರೆಸ್‌ನ ಟಿ.ಬಿ.ಜಯಚಂದ್ರ ಮಾತನಾಡಿ, ಸಾಮಾಜಿಕ ಬಹಿಷ್ಕಾರಕ್ಕೆ ಸಂಬಂಧಿಸಿದಂತೆ ಪೊಲೀಸರು ಸ್ವಯಂ ಪ್ರೇರಿತರಾಗಿ ದೂರು ದಾಖಲಿಸಿಕೊಳ್ಳಲು ಅವಕಾಶ ಕಲ್ಪಿಸಿ ಮಸೂದೆಗೆ ತಿದ್ದುಪಡಿ ತರಬೇಕು ಎಂದು ಸಲಹೆಯನ್ನು ಅಳವಡಿಸಿಕೊಳ್ಳುವುದಾಗಿ ಮಹದೇವಪ್ಪ ಭರವಸೆ ನೀಡಿದರು. ಬಳಿಕ ಸದನ ಪಕ್ಷಾತೀತವಾಗಿ ಮಸೂದೆಗೆ ಅನುಮೋದನೆ ನೀಡಿತು.

ಶುಭಾಶಯ...



ಮೈಸೂರು ತಾಲೂಕು ಜಯಪುರ ಗ್ರಾಮದ ದೇವಮ್ಮ ಪಟೇಲ್ ಚಿಕ್ಕ ಅಂಕೇಗೌಡ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ ಶಾಸಕ ಜಿ.ಟಿ ದೇವೇಗೌಡರ 75ನೇ ಜನ್ಮ ದಿನೋತ್ಸವ ಮತ್ತು ಅಭಿನಂದನಾ ಕಾರ್ಯಕ್ರಮ ನಡೆಯಿತು. ಶಾಸಕ ಜಿ.ಟಿ ದೇವೇಗೌಡರನ್ನು ಅವರ ಪತ್ನಿ ಶ್ರೀಮತಿ ಲಲಿತಾ ಅವರೊಂದಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಶಾಲು ಹೊದಿಸಿ, ಹಾರ ಹಾಕಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಮುಖಂಡರಾದ ದಾರಿಪುರ ಬಸವಣ್ಣ, ಜವರನಾಯಕ, ಅಬ್ದುಲ್ ಮುತಾಲೀಫ್, ಮರಿಸಿದ್ದೇಗೌಡ, ಬರಡನಪುರ ಬಸವಣ್ಣ, ಮಹದೇವಯ್ಯ, ಎಂ.ನಾಗರಾಜು, ಅಭಿಷೇಕ್, ಬಿ.ರೇಣುಕಾ, ಹೊಸಕೆರೆ ಮಂಜುನಾಥ್, ಬೈರೇಶ್, ಟಿ.ಪಿ ನಾಗರಾಜು, ರಂಗಸ್ವಾಮಿ, ಶಿವರಾಜು, ಸಂತೋಷ್ ಕುಮಾರ್, ಅಂಕಪ್ಪ, ಗುಜ್ಜನಾಯಕ ಮತ್ತು ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖಂಡರು ಉಪಸ್ಥಿತರಿದ್ದರು.

ನಾಳೆ ಪ್ರೊ.ವಿ.ಕೆ.ನಟರಾಜ್ ಸ್ಮರಣಾರ್ಥ ಪುಸ್ತಕ ಬಿಡುಗಡೆ, ವಿಶೇಷ ಉಪನ್ಯಾಸ



ಮೈಸೂರು, ಡಿ.18(ಪಿಎಂ)– ಕಳೆದ ವರ್ಷ ನಿಧನರಾದ ಪ್ರೊ.ವಿ.ಕೆ.ನಟರಾಜ್ ಅವರ ಸ್ಮರಣಾರ್ಥ ಡಿ.20ರಂದು ಮೈಸೂರು ವಿವಿಯ ಮಾನಸ ಗಂಗೋತ್ರಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ವಿಶೇಷ ಉಪನ್ಯಾಸ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಜಂಟಿ ಆಶ್ರಯದಲ್ಲಿ ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮ ನಡೆಯಲಿದೆ. ನವದೆಹಲಿಯ ಜವಾಹರ ಲಾಲ್ ನೆಹರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್ 'ಫಾರ್ ಎ ಸೆಟ್ ಆಫ್ ಕಾನ್ಸ್ಟಿಟ್ಯೂಷನಲಿ ಗ್ಯಾರಂಟಿಯೆಟೆಡ್ ಫಂಡಮೆಂಟಲ್ ಎಕಾನಮಿಕ್ ರೈಟ್ಸ್' ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಕಾರ್ಯಕ್ರಮ ಉದ್ಘಾಟಿಸಲಿರುವ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಇದೇ ವೇಳೆ ಪ್ರೊ.ವಿ.ಕೆ.ನಟರಾಜ್ ಅವರ ಸ್ಮರಣಾರ್ಥ ಪ್ರೊ.ಅಬ್ದುಲ್ ಅಜೀಜ್ ಮತ್ತು ಪ್ರೊ.ಕೆ.ಗಾಯತ್ರಿ ಅವರು ಸಂಪಾದಿಸಿರುವ 'ಕಾಂಟೆಂಪರರಿ ಡೆವಲಪ್‌ಮೆಂಟ್ ಡಿಬೇಟ್ಸ್ ಇನ್ ಇಂಡಿಯಾ' ಪುಸ್ತಕವನ್ನೂ ಬಿಡುಗಡೆ ಮಾಡಲಿದ್ದಾರೆ. ಮೈಸೂರು ವಿವಿ ಸೆಂಟರ್ ಫಾರ್ ವುಮೆನ್ ಸ್ಟಡೀಸ್‌ನ ಮಾಜಿ ನಿರ್ದೇಶಕಿ ರಾಮೇಶ್ವರಿ ವರ್ಮ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರೊ.ವಿ.ಕೆ.ನಟರಾಜ್ ಅವರು ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಅಧ್ಯಯನ ಕ್ಷೇತ್ರದಲ್ಲಿ ಖ್ಯಾತ ಶಿಕ್ಷಣ ತಜ್ಞರಾಗಿದ್ದರು. ಚೆನ್ನೈನ ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟಲ್ ಸ್ಟಡೀಸ್‌ನ ನಿರ್ದೇಶಕರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಮೈಸೂರು ಮೃಗಾಲಯದ ಹುಲಿ ತಾಯಮ್ಮ ಚೇತರಿಕೆ


ಮೈಸೂರು, ಡಿ.18(ಬಿಎಲ್‌ಯು)– ನಿತ್ರಾಣಗೊಂಡಿದ್ದ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಹುಲಿ 'ತಾಯಮ್ಮ' ಚೇತರಿಸಿಕೊಂಡಿದೆ. ಐದು ವರ್ಷದ ಈ ಹುಲಿ ದಿಢೀರನೆ ಆಹಾರ ತ್ಯಜಿಸಿತ್ತು. ಇದರಿಂದ ನಿತ್ರಾಣಗೊಂಡ ತಾಯಮ್ಮ ನ ಸ್ಥಿತಿ ನಿನ್ನೆ ಗಂಭೀರವಾಗಿತ್ತು.

ಮೃಗಾಲಯದ ಪಶು ವೈದ್ಯ ಸಿಬ್ಬಂದಿ ತಾಯಮ್ಮನಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ನಿನ್ನೆಗಿಂತ ಇಂದು ಸ್ವಲ್ಪ ಚೇತರಿಸಿಗೊಂಡಿರುವ ಹುಲಿ ನೀರು ಸೇವಿಸಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿರ್ದೇಶಕಿ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷ ತಿಳಿಸಿದ್ದಾರೆ. ಯಾವ ಕಾರಣದಿಂದ ತಾಯಮ್ಮ ನೀರು, ಆಹಾರ ತ್ಯಜಿಸಿದೆ, ನಿಶ್ಯಕ್ತಗೊಳ್ಳಲು ಕಾರಣವೇನು ಎಂಬ ಬಗ್ಗೆ ಪ್ರಯೋಗಾಲಯದ ವರದಿಯಿಂದ ತಿಳಿದು ಬರಲಿದೆ.

ಪ್ರಯೋಗಾಲಯದ ವರದಿ ಆಧರಿಸಿ ಮುಂದಿನ ಚಿಕಿತ್ಸೆ ನೀಡಲಾಗುವುದು. ಸದ್ಯ ನಿಶ್ಯಕ್ತಗೊಂಡಿರುವ ತಾಯಮ್ಮನ ಆರೋಗ್ಯದ ಬಗ್ಗೆ ನಿಗಾ ವಹಿಸಲಾಗಿದೆ ಎಂದು ಅನುಷ ಮಾಹಿತಿ ನೀಡಿದ್ದಾರೆ.

ಅಗ್ನಿಶಾಮಕ ದಳದ ಕಚೇರಿ ಕಟ್ಟಡದ ಒಂದು ಭಾಗ ಕುಸಿದು ಬರೋಬ್ಬರಿ 6 ವರ್ಷವಾಯಿತು

●126 ವರ್ಷವಾದರೂ ಗಟ್ಟಿಮುಟ್ಟಾಗಿರುವ ಪಾರಂಪರಿಕ ಕಟ್ಟಡ ●ನೆಲಸಮ ಬಿಟ್ಟು ಬೇರೆ ದಾರಿಯೇ ಇಲ್ಲವೆಂದ ತಜ್ಞರು



ಕೆಲ ವರ್ಷದ ಹಿಂದೆ ದ್ವಾರದ ಭಾಗ ಕುಸಿದು ಬಿದ್ದ ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ದಳದ ಕಚೇರಿ ಕಟ್ಟಡವಿದು.

ಮೈಸೂರು, ಡಿ.18(ಬಿಎಲ್‌ಯು)– ಪಾರಂಪರಿಕ ಕಟ್ಟಡಗಳ ತವರೂರಾದ ಸಾಂಸ್ಕೃತಿಕ ನಗರಿ ಮೈಸೂರು ತನ್ನ ಗತ ವೈಭವ ಕಳೆದುಕೊಳ್ಳುತ್ತಿದೆ. ಸೂಕ್ತ ನಿರ್ವಹಣೆ ಇಲ್ಲದ ಪಾರಂಪರಿಕ ಕಟ್ಟಡಗಳು ಒಂದೊಂದಾಗಿ ನಾಶವಾಗುತ್ತಿವೆ. ಶಿಥಿಲಗೊಂಡಿರುವ ಅಗ್ನಿಶಾಮಕ ದಳದ ಕಚೇರಿ ಸೇರಿದಂತೆ ಇತರೆ ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲವೆಂದು ತಜ್ಞರು ವರದಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪೂರ್ಣವಾಗಿ ನೆಲಸಮಗೊಳಿಸಿ ಮರು ನಿರ್ಮಾಣ ಮಾಡಲು ಸರ್ಕಾರ ತೀರ್ಮಾನ ಕೈಗೊಂಡಿದೆ. ಪಾರಂಪರಿಕ ಶೈಲಿಯ ಕಟ್ಟಡಗಳು ಒಂದೊಂದೇ ನಾಶವಾಗುತ್ತಾ ಮೈಸೂರಿಗಿರುವ ಪಾರಂಪರಿಕ ನಗರಿ ಎಂಬ ಟ್ಯಾಗ್ ಅಳಿಸಿ ಹೋಗಲಿದೆ.

ರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಪಾರಂಪರಿಕ ಶೈಲಿಯ ಮೈಸೂರಿನ ಅಗ್ನಿಶಾಮಕದಳದ ಕಚೇರಿಗೆ ಬರೋಬ್ಬರಿ 126 ವರ್ಷಗಳ ಇತಿಹಾಸವಿದೆ. ಮೈಸೂರಿನ ಪಾರಂಪರಿಕ ಸೊಬಗು ಮೇಳೈಸುವ ಸರಸ್ವತಿಪುರಂನ ಈ ಅಗ್ನಿಶಾಮಕ ದಳದ ಕಚೇರಿಯ ದ್ವಾರದ ಭಾವಣಿ ಕುಸಿದು 6 ವರ್ಷಗಳಾಗಿವೆ.

ಈ ಕಟ್ಟಡವನ್ನು ನವೀಕರಿಸಲು ಸರ್ಕಾರ ನಿರ್ಧರಿಸಿ, ಸಮಗ್ರ ಯೋಜನಾ ವರದಿ ತಯಾರಿಸಿತ್ತು. ಇದಕ್ಕಾಗಿ 22 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ಅದೇ ಸಮಯದಲ್ಲಿ ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಮಹಾರಾಣಿ ಕಾಲೇಜಿನ ಕಟ್ಟಡ ಕುಸಿದು ಬಿದ್ದ ಹಿನ್ನೆಲೆಯಲ್ಲಿ ತಜ್ಞರ ವರದಿ ಪಡೆದ ನಂತರ ದುರಸ್ತಿ ಮಾಡಿಸಲು ಜಿಲ್ಲಾಡಳಿತ ನಿರ್ಧರಿಸಿತ್ತು.

ಈ ಸಂಬಂಧ ಲೋಕೋಪಯೋಗಿ ಇಲಾಖೆಯ ಐವರು ತಜ್ಞರ ಸಮಿತಿಯನ್ನು ಸರ್ಕಾರ ರಚನೆ ಮಾಡಿತ್ತು. ಅಗ್ನಿಶಾಮಕ ದಳದ ಕಚೇರಿಗೆ ಖುದ್ದು ಭೇಟಿ ನೀಡಿದ ತಜ್ಞರ ಸಮಿತಿ, ಸಮಗ್ರವಾಗಿ ಪರಿಶೀಲನೆ ನಡೆಸಿತು. ಯಾವುದೇ ಕಾರಣಕ್ಕೂ ಈ ಕಟ್ಟಡವನ್ನು ನವೀಕರಣ ಮಾಡಲು ಸಾಧ್ಯವಿಲ್ಲ. ಇದನ್ನು ಪೂರ್ಣವಾಗಿ ನೆಲಸಮ ಮಾಡಿ, ಪುನರ್ ನಿರ್ಮಾಣ ಮಾಡುವ ಮಾರ್ಗ ಬಿಟ್ಟರೆ ಬೇರೆ ದಾರಿಯೇ ಇಲ್ಲ. ಒಂದು ವೇಳೆ ನವೀಕರಣ ಮಾಡಿದರೆ ಮತ್ತೆ ಕುಸಿದು ಬೀಳಲಿದೆ ಎಂದು ತಜ್ಞರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳದ ಕಚೇರಿಯನ್ನು ಪೂರ್ಣವಾಗಿ ನೆಲಸಮ ಮಾಡಿ ಪುನರ್ ನಿರ್ಮಾಣ ಮಾಡಲು ಸರ್ಕಾರ ತೀರ್ಮಾನ ಕೈಗೊಂಡಿದೆ. ಇದಕ್ಕಾಗಿ 30 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಆದರೆ ಕಟ್ಟಡದ ಮರು ನಿರ್ಮಾಣಕ್ಕೆ ಸರ್ಕಾರದ ಖಜಾನೆಯಲ್ಲಿ ಹಣವಿಲ್ಲ. ಇದರಿಂದ ಅಗ್ನಿಶಾಮಕ ದಳದ ಕಚೇರಿಯ ಪುನರ್ ನಿರ್ಮಾಣ ಕಾರ್ಯ ನನೆಗುದಿಗೆ ಬಿದ್ದಿದೆ.

ಸಿಎಸ್‌ಆರ್ ಫಂಡ್‌ನಲ್ಲಿ ನಿರ್ಮಾಣ ಕಾರ್ಯ ಕೈಗೊಳ್ಳಲು ಕೂಡ ಅಡ್ಡಿಯಾಗಿದೆ. ಇದರಿಂದ ಅಗ್ನಿಶಾಮಕದಳದ ಕಚೇರಿ ಅಸ್ಥಿಪಂಜರದಂತೆ ನಿಂತಿದೆ. ರಾಜರ ಕಾಲದ ಇತಿಹಾಸ ಸಾರುವ ಪಾರಂಪರಿಕ ಶೈಲಿಯ ಕಟ್ಟಡಕ್ಕೆ ಈ ಗತಿ ಬಂತಲ್ಲಾ ಎಂದು ಮೈಸೂರಿಗರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಮರು ನಿರ್ಮಾಣಕ್ಕೆ ಸರ್ಕಾರಕ್ಕೆ 30 ಕೋಟಿ ಗತಿ ಇಲ್ಲವೇ....

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾರಾಟ ನಡೆಸಲು ವಿಮಾನ ಹಾಗೂ ಹೆಲಿಕಾಪ್ಟರ್‌ಗೆ 47 ಕೋಟಿ ಖರ್ಚಾಗಿದೆ. ಭ್ರಷ್ಟಾಚಾರದಿಂದ ಸರ್ಕಾರದ ಖಜಾನೆ ಸೋರುತ್ತಿದೆ. ಪರಿಸ್ಥಿತಿ ಹೀಗಿರುವಾಗ ಪಾರಂಪರಿಕ ಶೈಲಿಯ ಕಟ್ಟಡ ಮರು ನಿರ್ಮಾಣಕ್ಕೆ ಸರ್ಕಾರಕ್ಕೆ 30 ಕೋಟಿ ರೂಪಾಯಿಗೆ ಗತಿ ಇಲ್ಲವೆ ಎಂಬ ಪ್ರಶ್ನೆ ಎದುರಾಗಿದೆ.

ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣಕ್ಕೆ 50 ಕೋಟಿ ಹಣವಿಲ್ಲವೆಂದು ಖಾಸಗಿಯವರಿಗೆ ಇಡೀ ಹೋಟೆಲ್ ಅನ್ನು 30 ವರ್ಷಕ್ಕೆ ಗುತ್ತಿಗೆ ನೀಡುತ್ತಿದ್ದಾರೆ. ಅಗ್ನಿ ಅವಘಡ ಸಂಭವಿಸಿದಾಗ ತುರ್ತು ಸೇವೆ ಕಲ್ಪಿಸುವ ಅಗ್ನಿಶಾಮಕ ದಳದ ಕಚೇರಿ ಮರು ನಿರ್ಮಾಣಕ್ಕೆ 30 ಕೋಟಿ ಇಲ್ಲವೆಂದು ಕಳೆದ 6 ವರ್ಷಗಳಿಂದ ಪಾಳು ಬಿಟ್ಟಿದ್ದಾರೆ. ಸದ್ಯ ಈ ವಿಚಾರ ವಿಧಾನಸಭಾ ಅಧಿವೇಶನದಲ್ಲೂ ಪ್ರತಿಧ್ವನಿಸಿದೆ.

ಮುಂದಿನ ಪೀಳಿಗೆ ಫೋಟೋದಲ್ಲಿ ನೋಡುವ ದಿನ ದೂರವಿಲ್ಲ

ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡದಿದ್ದರೆ ಭವಿಷ್ಯದಲ್ಲಿ ಪಾರಂಪರಿಕ ಕಟ್ಟಡಗಳೆಲ್ಲಾ ಧರೆಗುರುಳುತ್ತವೆ. ಮುಂದಿನ ಪೀಳಿಗೆ ಇವುಗಳನ್ನು ಫೋಟೋದಲ್ಲಿ ನೋಡುವ ಪರಿಸ್ಥಿತಿ ಎದುರಾಗುತ್ತದೆ.

ಮೈಸೂರು ಅರಮನೆಯ ಛಾವಣಿ ಕಳೆದ ವಾರ ಕುಸಿದು ಬಿದ್ದಿದೆ. ನಗರದ ಸಯ್ಯಾಜಿರಾವ್ ರಸ್ತೆಯ ಕಾವೇರಿ ಎಂಪೋರಿಯಂ, ಲಿಡ್ಕರ್ ಕಟ್ಟಡದ ಮೇಲೆ ಅರಳಿ ಮರಗಳು ಬೇರು ಬಿಡುತ್ತಾ ಇಡೀ ಕಟ್ಟಡವನ್ನು ಅಪೋಶನ ತೆಗೆದುಕೊಳ್ಳುವ ದಿನ ದೂರವಿಲ್ಲ ಎಂಬ ಆತಂಕ ಎದುರಾಗಿದೆ. ದೇವರಾಜ ಮಾರುಕಟ್ಟೆ, ಲ್ಯಾನ್ಸ್ ಡೌನ್ ಕಟ್ಟಡವನ್ನು ಕೂಡ ನವೀಕರಣ ಮಾಡಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿರುವ ರಾಜ್ಯ ಸರ್ಕಾರ, ಮರು ನಿರ್ಮಾಣಕ್ಕೆ ತೀರ್ಮಾನ ಮಾಡಿದೆ.

ನೆಲಸಮ ಮಾಡದೆ, ಸಂರಕ್ಷಣೆ ಮಾಡಲೇ ಬೇಕು

ಅಗ್ನಿಶಾಮಕದಳದ ಕಚೇರಿಯ ಕಟ್ಟಡವನ್ನು ನೆಲಸಮ ಮಾಡದೆ ಸಂರಕ್ಷಣೆ ಮಾಡಬೇಕು. ನಾನು, ಸಂಸದರಾದ ಯದುವೀರ್ ಸೇರಿದಂತೆ ಹಲವು ತಜ್ಞರು ಅಗ್ನಿಶಾಮಕದಳ ಕಚೇರಿಗೆ ಭೇಟಿ ನೀಡಿ ಇಂಚಿಂಚು ಪರಿಶೀಲನೆ ಮಾಡಿದ್ದೇವೆ. ಈ ಹಿಂದೆ ಕಟ್ಟಡ ನಿರ್ಮಾಣಕ್ಕೆ ಬಳಸಿದ ವಸ್ತುಗಳನ್ನೆ ಮತ್ತೆ ಬಳಸಿಕೊಂಡು ನವೀಕರಣ ಮಾಡಬಹುದು. ಈ ಮೂಲಕ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಬಹುದು. ಈ ಸಂಬಂಧ ಸರ್ಕಾರಕ್ಕೆ ವರದಿ ಕೂಡ ನೀಡಿದ್ದೇವೆ. ಮೈಸೂರಿನ ಆಯುರ್ವೇದ ಕಾಲೇಜು, ಜಯಲಕ್ಷ್ಮಿ ವಿಲಾಸ ಮ್ಯಾನ್ಷನ್, ದೊಡ್ಡ ಗಡಿಯಾರ, ಕಾಡಾ ಕಚೇರಿ, ಮೈಸೂರು ಸರ್ಕಾರಿ ಅತಿಥಿ ಗೃಹ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳನ್ನು ಸರ್ಕಾರವೇ ನವೀಕರಣ ಮಾಡಿ, ಪಾರಂಪರಿಕತೆ ಸ್ವರೂಪ ಉಳಿಸಲಾಗಿದೆ. ಅದೇ ರೀತಿ ಅಗ್ನಿಶಾಮಕ ದಳದ ಕಚೇರಿಯ ಪಾರಂಪರಿಕ ಕಟ್ಟಡವನ್ನು ಕೂಡ ಸಂರಕ್ಷಣೆ ಮಾಡಬೇಕು. ಪಾರಂಪರಿಕ ಕಟ್ಟಡಗಳನ್ನು ಒಡೆದು ಪುನರ್ ನಿರ್ಮಾಣ ಮಾಡುವುದು ಸುಲಭ, ಆದರೆ ಅದೇ ಶೈಲಿ ಹಾಗೂ ವಿನ್ಯಾಸದಲ್ಲಿ ಮತ್ತೊಂದು ಕಟ್ಟಡ ನಿರ್ಮಾಣ ಕಷ್ಟ. ಇದೇ ರೀತಿ ಪಾರಂಪರಿಕ ಕಟ್ಟಡಗಳನ್ನು ನೆಲಸಮ ಮಾಡಿದರೆ ಮೈಸೂರಿಗಿರುವ ಪಾರಂಪರಿಕ ನಗರ ಟ್ಯಾಗ್ ಲೈನ್ ತನಗೆ ತಾನೆ ಮರೆಯಾಗುತ್ತದೆ.

- ಪ್ರೊ. ರಂಗರಾಜು, ಪಾರಂಪರಿಕ ತಜ್ಞ

ಎಲ್ಲಾ ಹವಾಗುಣಕ್ಕೆ ಹೊಂದಿಕೊಳ್ಳುವ ವಿಶಿಷ್ಟ ಅನುಭವ



126 ವರ್ಷಗಳ ಇತಿಹಾಸವಿರುವ ಅಗ್ನಿಶಾಮಕ ದಳದ ಕಚೇರಿ ಕಟ್ಟಡ ಸರ್ವ ಕಾಲದಲ್ಲೂ ಆಹ್ಲಾದಕರ ವಾತಾವರಣ ಕಲ್ಪಿಸಲಿದೆ.

ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿ, ಮೇಲಾಧಿಕಾರಿಗಳ ಕಚೇರಿ, ವಿಶ್ರಾಂತಿ ಗೃಹ, ವಸತಿ ಗೃಹ, ಉಗ್ರಾಣ, ಕಂಟ್ರೋಲ್ ರೂಂ ಸೇರಿದಂತೆ ಇತರೆ ಕೊಠಡಿಗಳಿವೆ. ಬೇಸಿಗೆಯ ಉರಿ ಬಿಸಿಲಲ್ಲೂ ಈ ಕಟ್ಟಡದ ಒಳಗೆ ತಣ್ಣನೆಯ ಅನುಭವವಾಗುತ್ತದೆ. ಮೂರು ರಸ್ತೆ ಕೂಡುವ ಮಧ್ಯೆ ಭಾಗದಲ್ಲಿರುವ ಈ ಕಚೇರಿಗೆ ತಂಪಾದ ಗಾಳಿ ಸುಳಿಯಲಿದೆ.

ಚಳಿಗಾಲದಲ್ಲಿ ಅಂತಹ ಚಳಿಯೂ ಆಗುವುದಿಲ್ಲ, ಮಳೆಗಾಲದಲ್ಲಿ ಹಜಾರಕ್ಕೆ ನೀರು ಸೋಕುವುದಿಲ್ಲ. ಒಟ್ಟಾರೆ, ಎಲ್ಲಾ ಹವಾಗುಣಕ್ಕೆ ಹೊಂದಿಕೊಳ್ಳುವ ಕಟ್ಟಡವಾಗಿದೆ.

ಕಳೆದ ಆರು ವರ್ಷದ ಹಿಂದೆ ಕಚೇರಿಯ ಮುಂಭಾಗ ಕುಸಿದು ಬಿದ್ದರೂ ಹಿಂಭಾಗದ ಕೊಠಡಿಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಆದರೆ ಶಿಥಿಲಾವಸ್ಥೆಯಲ್ಲಿದ್ದ ಕಾರಣ ವಸತಿ ಗೃಹದ ವಾಸಿಗಳನ್ನು ಖಾಲಿ ಮಾಡಿಸಲಾಗಿದೆ. ಇದರಿಂದ ವಸತಿ ಗೃಹದ ಕಟ್ಟಡ ಕೂಡ ಪಾಳು ಬಿದ್ದಿದೆ. ರಾಜರ ಕಾಲದ ಪಾರಂಪರಿಕ ಕಟ್ಟಡಗಳನ್ನು, ಅದೇ ಶೈಲಿ ಹಾಗೂ ವಿನ್ಯಾಸದಲ್ಲಿ ನಿರ್ಮಾಣ ಮಾಡಲು ಇಂದಿನ ಹೆಸರಾಂತ ಪರಿಣಿತ ಇಂಜಿನಿಯರ್‌ಗಳಿಗೆ ಸಾಧ್ಯವಿಲ್ಲ. ಇರುವ ಕಟ್ಟಡಗಳ ಸೂಕ್ತ ನಿರ್ವಹಣೆಯನ್ನಾದರೂ ಮಾಡಿ ಅದನ್ನು ಸಂರಕ್ಷಿಸಲು ಗಮನ ಹರಿಸಬೇಕಿದೆ.

ನೈಸ್ ಕಾರಿಡಾರ್ ವ್ಯಾಪ್ತಿ ರೈತರಿಗೆ ಎಲ್ಲಾ ಅನುಕೂಲ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ



ಬೆಳಗಾವಿ, ಸುವರ್ಣವಿಧಾನಸೌಧ, ಡಿ.18(ಕೆಎಂಶಿ)– ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನಾ ಪ್ರಾಧಿಕಾರ ವ್ಯಾಪ್ತಿಯ ರೈತರ ಅನುಕೂಲಕ್ಕೆ ಕ್ರಮ ವಹಿಸಲಾಗಿದ್ದು, ವಿನ್ಯಾಸ, ನಕ್ಷೆ ಪ್ರಸ್ತಾವನೆಗಳಿಗೆ ನಿಯಮಾನುಸಾರ ಅನುಮೋದನೆ ನೀಡಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಮಧು ಜಿ. ಮಾದೇಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಬಿಎಂಐಸಿಎಪಿಎ ವ್ಯಾಪ್ತಿ ರೈತರಿಗೆ ಮನೆ ಕಟ್ಟಲು, ಭೂ ಪರಿವರ್ತನೆ ಮತ್ತು ವಿನ್ಯಾಸ ನಕ್ಷೆ ಅನುಮೋದನೆ ಅಥವಾ ಭೂ ಉಪಯೋಗ ಬದಲಾವಣೆ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ನಿಗದಿತ ಅವಧಿಯಲ್ಲಿ ತಾಂತ್ರಿಕ ಅಭಿಪ್ರಾಯ ನೀಡಲಾಗುತ್ತಿದೆ ಎಂದರು.

ಬಿಎಂಐಸಿಎಪಿಎ ಈಗಲೂ ಚಾಲ್ತಿಯಲ್ಲಿದೆ. ಕರ್ನಾಟಕ ಸರ್ಕಾರ ಹಾಗೂ ಮೆಸರ್ಸ್ ನೈಸ್ ಸಂಸ್ಥೆ ಮಧ್ಯೆ ಫ್ರೇಮ್ ವರ್ಕ್ ಅಗ್ರಿಮೆಂಟ್ ಅನ್ವಯ, ಬಿಎಂಐಸಿ ಕಾರಿಡಾರ್‌ನಲ್ಲಿನ ಬೆಳವಣಿಗೆಗಳನ್ನು ಯೋಜನಾ ಬದ್ಧವಾಗಿ ಕಾರ್ಯಗತಗೊಳಿಸಲು ಪ್ರಾಧಿಕಾರದ ಅಗತ್ಯತೆ ಇದೆ ಎಂದರು.

ಮುಂದಿನ ಶೈಕ್ಷಣಿಕ ವರ್ಷಾರಂಭಕ್ಕೆ ಮುನ್ನ 11 ಸಾವಿರ ಶಿಕ್ಷಕರ ನೇಮಕ



ಬೆಳಗಾವಿ, ಸುವರ್ಣವಿಧಾನಸೌಧ, ಡಿ.18(ಕೆಎಂಶಿ)– ಮುಂಬರುವ ಶೈಕ್ಷಣಿಕ ವರ್ಷಾರಂಭಕ್ಕೆ ಮುನ್ನ 11,000 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ಹರೀಶ್ ಪೂಂಜ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 41,088 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ. ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 1,78,935 ಹುದ್ದೆಗಳು ಮಂಜೂರಾಗಿದ್ದು ಈ ಪೈಕಿ 1,33,345 ಹುದ್ದೆಗಳು ಭರ್ತಿಯಾಗಿವೆ. 45,590 ಹುದ್ದೆಗಳು ಖಾಲಿ ಇವೆ. ಇವುಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಈಗಾಗಲೇ ಕ್ರಮ ವಹಿಸಲಾಗಿದೆ ಎಂದರು.

2025–2026ನೇ ಶೈಕ್ಷಣಿಕ ಸಾಲಿಗೆ ಪ್ರಾಥಮಿಕ ಶಾಲೆಗಳಲ್ಲಿ 40,000 ಮತ್ತು ಪ್ರೌಢಶಾಲೆಗಳಲ್ಲಿ 11,000 ಸೇರಿದಂತೆ ಒಟ್ಟಾರೆ 51,000 ಅತಿಥಿ ಶಿಕ್ಷಕರ ನೇಮಕಾತಿ ಮೂಲಕ ಶಿಕ್ಷಕರ ಕೊರತೆ ಸರಿದೂಗಿಸಿ, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಆಗದಂತೆ ಕ್ರಮವಹಿಸಲಾಗಿದೆ. ಅಲ್ಲದೇ, ವಿಕಲಚೇತನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ವಿಶೇಷ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ಗ್ರೀನ್ ಬೆಲ್ಟ್ ದಾಟಿ ಕಾಡಿನಲ್ಲಿ ಮನೆ, ರೆಸಾರ್ಟ್ ನಿರ್ಮಾಣವೇ ಮಾನವ–ವನ್ಯಜೀವಿ ಸಂಘರ್ಷಕ್ಕೆ ಕಾರಣ

●ಅರಣ್ಯಾಧಿಕಾರಿ ಜಿ.ರವೀಂದ್ರ ಖಚಿತ ನುಡಿ ●ಆಹಾರ ಹರಸಿ ಬರುವ ವನ್ಯಜೀವಿಗಳ ಘಾಸಿಗೊಳಿಸಿದರೆ ಅಪಾಯ ಖಚಿತ

ಮೈಸೂರು, ಡಿ.18(ವಿವಿಹೆಚ್)– ರಾಜ್ಯದಲ್ಲಿ ಹುಲಿ, ಆನೆ ಸಂತತಿ ಹೆಚ್ಚಾಗಿದೆ. ಅವುಗಳ ಅರಣ್ಯ ಇಲಾಖೆ ರಕ್ಷಣೆ ಮಾಡುವ ಕೆಲಸ ಮಾಡುತ್ತಿದ್ದರೆ, ಇತ್ತ ಗ್ರೀನ್ ಬೆಲ್ಟ್ ದಾಟಿ ಕಾಡಿನಲ್ಲಿ ಮನೆ, ರೆಸಾರ್ಟ್ ನಿರ್ಮಾಣ ಆಗುತ್ತಿವೆ. ಇದು ಮಾನವ–ವನ್ಯಜೀವಿ ಸಂಘರ್ಷಕ್ಕೆ ಪ್ರಮುಖ ಕಾರಣ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ ಅಭಿಪ್ರಾಯಪಟ್ಟರು.



ಕಾರ್ಯಕ್ರಮ ಕುರಿತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ರವೀಂದ್ರ ಮಾತನಾಡಿದರು.

ಮೈಸೂರಿನ ಪೀಪಲ್ಸ್ ಪಾರ್ಕ್‌ನ ನಗರ ಕೇಂದ್ರ ಗ್ರಂಥಾಲಯದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಗುರುವಾರ ಆಯೋಜಿಸಲಾಗಿದ್ದ ವನ್ಯಜೀವಿ ಸಂರಕ್ಷಣೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾಣಿಗಳು ಒಂದೇ ಅಥವಾ ಸೀಮಿತ ಪ್ರದೇಶದಲ್ಲಿ ವಾಸ ಮಾಡುವುದಿಲ್ಲ. ಹುಲಿಗಳು ತಮ್ಮ ಟೆರಟರಿ ಗುರುತಿಸಿಕೊಳ್ಳಲು ನಾಡಿನತ್ತ ಹೆಜ್ಜೆ ಹಾಕಿದರೆ, ಸಮರ್ಪಕ ಆಹಾರದ ಕೊರತೆಯಿಂದ ಆನೆ, ಚಿರತೆಗಳು ನಾಡಿಗೆ ಲಗ್ಗೆಯಿಡುತ್ತವೆ. ಕಾಡಿನಿಂದ ನಾಡಿಗೆ ಆಹಾರ ಅರಸಿ ಬರುವ ಪ್ರಾಣಿಗಳ ಮೇಲೆ ದಾಳಿ ಮಾಡಿ ಘಾಸಿಗೊಳಿಸುವುದರಿಂದ ಅವು ಮಾನವರ ಮೇಲೆ ಅಕ್ರಮಣ ಮಾಡುತ್ತವೆ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವಿರಬೇಕು ಎಂದರು.

ಎಐ ದುರ್ಬಳಕೆಯಿಂದ ಅರಣ್ಯ ಇಲಾಖೆಗೆ ಭಾರೀ ಕಿರುಕುಳ ಕೊಡಲಾಗುತ್ತಿದೆ. ಕಾಡಿನಿಂದ ನಾಡಿಗೆ ಪ್ರಾಣಿಗಳು ಬಂದು ದಾಳಿ ಮಾಡುತ್ತಿರುವಂತೆ, ಉಪಟಳ ನೀಡುವಂತೆ ಎಐ ಚಿತ್ರ–ವೀಡಿಯೋ ರಚಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡಲಾಗುತ್ತಿದ್ದು, ಇಂತಹವರ ವಿರುದ್ಧ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಕಾನೂನು ಸುವ್ಯವಸ್ಥೆ ಕದಡುವ ವಿಚಾರಗಳ ಸಂಬಂಧ ವಿದ್ಯಾರ್ಥಿಗಳು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಜೊತೆಗೆ ಇಂತಹ ಸೂಕ್ಷ್ಮ ವಿಚಾರಗಳನ್ನು ಸಾರ್ವಜನಿಕರು ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಸಲೀಂ ಅಲಿ ಪಕ್ಷಿ ವಿಜ್ಞಾನ ಮತ್ತು ನೈಸರ್ಗಿಕ ಇತಿಹಾಸ ಕೇಂದ್ರ (ಎಸ್‌ಎಸಿಓನ್)ದ ಪ್ರಧಾನ ವಿಜ್ಞಾನಿಗಳಾದ ಡಾ.ಹೊನ್ನವಳಿ ಎನ್.ಕುಮಾರ್ ಮಾತನಾಡಿ, 30 ವರ್ಷಗಳ ಕಾಲ ನನ್ನ ಜೀವನವನ್ನು ಪ್ರಾಣಿ ಸಂಕುಲದ ಮೇಲಿನ ಅಧ್ಯಯನಕ್ಕಾಗಿ ಮುಡುಪಾಗಿಟ್ಟಿದ್ದೇನೆ. ವನ್ಯಜೀವಿ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದ್ದು, ಪ್ರತಿಯೊಬ್ಬ ನಾಗರಿಕನೂ ಜವಾಬ್ದಾರಿಯಿಂದ ತನ್ನ ಕರ್ತವ್ಯವನ್ನು ನಿಭಾಯಿಸಬೇಕಿದೆ ಎಂದರು.

ಮಾನವ–ಪ್ರಾಣಿ ಸಂಘರ್ಷಕ್ಕೆ ಪ್ರಮುಖ ಕಾರಣ, ತಡೆಗಟ್ಟಬಹುದಾದ ಅವಕಾಶಗಳು, ಇತರೆ ವಿಚಾರಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು. ಇದಕ್ಕಾಗಿ ನಮ್ಮ ಇಲಾಖೆಯಿಂದ ಹಲವಾರು ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಮೇವಾಸಿಂಗ್, ನಗರ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕ ಬಿ. ಮಂಜುನಾಥ್, ಗ್ರಾಮೀಣ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕಿ ಸುಮಾ ಪ್ರಕಾಶ್, ಹೆಚ್.ಎನ್.ಕುಮಾರ್ ಉಪಸ್ಥಿತರಿದ್ದರು.

> ಜೀವ ವೈವಿಧ್ಯತೆ ಎಂದರೆ ಮಾನವ ಮಾತ್ರ ಬದುಕುವುದಲ್ಲ, ಎಲ್ಲ ಪ್ರಾಣಿ, ಪಕ್ಷಿ, ಜೀವರಾಶಿಗಳಿಗೂ ಸಮಾನವಾಗಿ ಬದುಕುವ ಹಕ್ಕಿದೆ. ಎಷ್ಟೇ ಸುಭದ್ರ ಬೇಲಿಗಳನ್ನು ಹಾಕಿದ್ದರು ಸಹ ಪ್ರಾಣಿಗಳು ನಾಡಿನತ್ತ ಬರುತ್ತವೆ. ಆಹಾರ ಅರಸಿ ಬರುವ ಪ್ರಾಣಿಗಳಿಗೆ ಹಾನಿ ಮಾಡದೆ ಬಿಟ್ಟುಬಿಡಿ, ಅವು ಆಹಾರ ತಿಂದು ಹೋಗುತ್ತವೆ. ಸರ್ಕಾರದಿಂದ ಪರಿಹಾರವೂ ಸಿಗುತ್ತದೆ.
>
> -ಜಿ.ರವೀಂದ್ರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

ಆರ್. ಸ್ನೇಹಾಗೆ ಪಿಹೆಚ್.ಡಿ



ಮೈಸೂರು, ಡಿ. 18–ಡಾ. ಬಿ.ಎಸ್. ಕೃಷ್ಣ ಅವರ ಮಾರ್ಗದರ್ಶನದಲ್ಲಿ ಆರ್. ಸ್ನೇಹಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡ್ರಗ್ಸ್ ಮಾರಾಟ, ಸೇವನೆ ವಿರುದ್ಧ ನಿರಂತರ ಸಮರ

●ಗೃಹ ಸಚಿವ ಪರಮೇಶ್ವರ್ ಘೋಷಣೆ ●ಆರೋಪಿಗಳ ಚಲನ–ವಲನದ ಮೇಲೆ ಸದಾ ನಿಗಾ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.18(ಕೆಎಂಶಿ)– ರಾಜ್ಯದಲ್ಲಿ ಡ್ರಗ್ಸ್ ಸರಬರಾಜು, ಮಾರಾಟ, ಸೇವನೆ ವಿರುದ್ಧ ನಿರಂತರ ಸಮರ ಸಾರಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಕೇಶವ ಪ್ರಸಾದ್ ಎಸ್. ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಡ್ರಗ್ಸ್ ಮುಕ್ತ ರಾಜ್ಯವಾಗುವವರೆಗೆ ಸಮರ ಮುಂದುವರೆಯಲಿದೆ. ಮಾದಕವಸ್ತು ನಿಗ್ರಹದಳ ಸ್ಥಾಪಿಸಿ ಹೆಚ್ಚು ಅಧಿಕಾರಿಗಳನ್ನು ನೇಮಿಸಿ ಹೆಚ್ಚು ನಿಗಾ ವಹಿಸಲಾಗಿದೆ ಎಂದರು.

ಎನ್‌ಡಿಪಿಎಸ್ ಪ್ರಕರಣಗಳ ಆರೋಪಿಗಳ ಮಾಹಿತಿ ಪೊಲೀಸ್ ಐಟಿ ತಂತ್ರಾಂಶ ಪೋರ್ಟಲ್‌ನಲ್ಲಿ ದಾಖಲಿಸಿ, ಆರೋಪಿಗಳ ದತ್ತಾಂಶ ವಿಶ್ಲೇಷಿಸಿ, ಆರೋಪಿಗಳ ಚಲನ ವಲನಗಳ ಮೇಲೆ ನಿಗಾ ವಹಿಸಲಾಗಿದೆ.



ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಮಾದಕ ವಸ್ತುಗಳ ಸಮನ್ವಯ ಸಮಿತಿ ರಚಿಸಿ ಎನ್‌ಡಿಪಿಎಸ್ ಕಾಯ್ದೆ ಜಾರಿ ಸಂಬಂಧ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಎನ್‌ಡಿಪಿಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳು ಮತ್ತು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೆ, ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ರೂಢಿಗತ ಡ್ರಗ್ಸ್ ಆರೋಪಿಗಳ ಮೇಲೆ ಕಠಿಣ ಕ್ರಮ ಜರುಗಿಸಲಾಗುತ್ತಿದೆ.

ಯುವಜನರಲ್ಲಿ ಮಾದಕ ವಸ್ತು ಬಳಕೆ ತಡೆಗಟ್ಟಲು ಆಯಾ ಠಾಣಾ ವ್ಯಾಪ್ತಿಯ ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಕಾರ್ಯ ಕ್ರಮಗಳನ್ನು ಪ್ರತಿ ತಿಂಗಳು ಆಯೋಜಿಸಲಾಗುತ್ತದೆ.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಗಾಂಜಾ ಮಿಶ್ರಿತ ಸ್ಥಳೀಯ ಗುಟ್ಕಾ ಮಾರಾಟ ಕಂಡು ಬಂದಿಲ್ಲ. ಈ ಸಂಬಂಧ ಯಾವುದೇ ಜಿಲ್ಲೆಯಲ್ಲಿ ಪ್ರಕರಣ ದಾಖಲಾಗಿಲ್ಲ.

ಎನ್‌ಡಿಪಿಎಸ್ ಕಾಯ್ದೆ–1985ರಡಿ 2023ರಲ್ಲಿ 6768, 2024ರಲ್ಲಿ 4168 ಮತ್ತು 2025ರಲ್ಲಿ 5930 ಪ್ರಕರಣ ದಾಖಲಿಸಲಾಗಿದೆ. ಮಾದಕ ವಸ್ತು ಸಾಗಾಟಕ್ಕೆ ಬಳಸುವ ಖಾಸಗಿ ವಾಹನಗಳನ್ನು ಜಪ್ತಿ ಮಾಡಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ.

ಕಿಶೋರ್ ಕುಮಾರ್ ಪುತ್ತೂರು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದ ಜೈಲಿನೊಳಗೆ ಮಾದಕ ವಸ್ತುಗಳು ಹಾಗೂ ಇತರೆ ನಿಷೇಧಿತ ವಸ್ತುಗಳು ತಲುಪದಂತೆ ಎಚ್ಚರ ವಹಿಸಲಾಗುವುದು ಎಂದರು.

ಕರ್ತವ್ಯ ನಿರ್ಲಕ್ಷ್ಯ ಆರೋಪದ ಮೇಲೆ ಕಾರಾಗೃಹಗಳ ಒಟ್ಟು 44 ಅಧಿಕಾರಿ ಮತ್ತು ಸಿಬ್ಬಂದಿ ಅಮಾನತು ಮಾಡಲಾಗಿದೆ.

ವರ್ಗಾವಣಾ ಮಾರ್ಗಸೂಚಿ ಅನುಸಾರ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಗ್ರೂಪ್–ಎ ಮತ್ತು ಬಿ ವೃಂದ ಅಧಿಕಾರಿಗಳ ವರ್ಗಾವಣೆ ಮಾಡಲಾಗುತ್ತಿದೆ ಎಂದರು.

ದೇಶ - ವಿದೇಶ

ಬಾಂಗ್ಲಾದಲ್ಲಿ ಪ್ರತಿಭಟನೆ: ಭಾರತದ ಎರಡು ವೀಸಾ ಅರ್ಜಿ ಕೇಂದ್ರಗಳು ಬಂದ್

ಢಾಕಾ: ಬಾಂಗ್ಲಾದೇಶದಲ್ಲಿ ಆಂತರಿಕ ಪರಿಸ್ಥಿತಿ ಹದಗೆಟ್ಟ ಕಾರಣ ಭದ್ರತಾ ಕಾರಣಗಳಿಂದಾಗಿ ಭಾರತದ ಎರಡು ವೀಸಾ ಅರ್ಜಿ ಕೇಂದ್ರಗಳನ್ನು ಗುರುವಾರ ಮುಚ್ಚಲಾಗಿದೆ. ಭಾರತೀಯ ವೀಸಾ ಅರ್ಜಿ ಕೇಂದ್ರದ ವೆಬ್‌ಸೈಟ್‌ನಲ್ಲಿ ಮಾಹಿತಿ ಹಂಚಿಕೊಳ್ಳಲಾಗಿದೆ.



ಪ್ರಸ್ತುತ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ರಾಜ್‌ಶಾಹಿ ಮತ್ತು ಖುಲ್ನಾ ಕೇಂದ್ರಗಳು ಡಿ.18ರಿಂದ ಮುಚ್ಚಲ್ಪಡುತ್ತವೆ. ಈ ದಿನದಂದು ವೀಸಾ ಸಲ್ಲಿಕೆಗಾಗಿ ಅಪಾಯಿಂಟ್‌ಮೆಂಟ್ ಸ್ಲಾಟ್‌ಗಳನ್ನು ಕಾಯ್ದಿರಿಸಿದ ಎಲ್ಲಾ ಅರ್ಜಿದಾರರಿಗೆ ಸ್ಲಾಟ್ ನೀಡಲಾಗುವುದು ಎಂದು ತಿಳಿಸಲಾಗಿದೆ.

ಮಾಜಿ ಪ್ರಧಾನಿ ಶೇಕ್ ಹಸೀನಾ ಅವರನ್ನು ವಾಪಸ್ ಕಳುಹಿಸಿ ಕೊಡುವುದು ಸೇರಿ ಅನೇಕ ವಿಚಾರಗಳಿಗೆ ಸಂಬಂಧಿಸಿ ಢಾಕಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿ ಎದುರು 'ಜುಲೈ ಒಯಿಕ್ಯಾ' ಸಂಘಟನೆಯ ನೂರಾರು ಸದಸ್ಯರು ಪ್ರತಿಭಟನೆ ನಡೆಸಿ, ಭಾರತ ವಿರೋಧಿ ಘೋಷಣೆಗಳನ್ನು ಬುಧವಾರ ಕೂಗಿದ್ದರು. ಈ ಸಂಬಂಧ ಬಾಂಗ್ಲಾದೇಶದ ರಾಯಭಾರಿ ರಿಯಾಜ್ ಹಮೀದುಲ್ಲಾ ಅವರನ್ನು ಕರೆಸಿದ ಭಾರತದ ವಿದೇಶಾಂಗ ಸಚಿವಾಲಯ ಬುಧವಾರ ಬೆಳಿಗ್ಗೆ ತನ್ನ ಕಳವಳವನ್ನು ವ್ಯಕ್ತಪಡಿಸಿತ್ತು.

ವಿದೇಶಗಳಿಗೆ ತೆರಳಿ ಭಿಕ್ಷೆ ಬೇಡುತ್ತಿರುವ ಪಾಕಿಸ್ತಾನೀಯರು

ಸೌದಿ ಅರೇಬಿಯಾ: ಸೌದಿ ರಾಷ್ಟ್ರಗಳಿಗೆ ವಲಸೆ ಹೋಗುತ್ತಿರುವ ಪಾಕಿಸ್ತಾನೀಯರಲ್ಲಿ ಕೆಲವರು ಅಲ್ಲಿ ಭಿಕ್ಷೆ ಬೇಡಿ ಕೊಂಡು ಜೀವನ ನಡೆಸುತ್ತಿರುವುದು ಪತ್ತೆಯಾಗಿದೆ.



ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಪಾಕಿಸ್ತಾನ ಮೂಲದ ಭಿಕ್ಷುಕರು ಹೆಚ್ಚಾಗುತ್ತಿರುವುದು ಪಾಕಿಸ್ತಾನದ ಇಮೇಜ್‌ಗೆ ಧಕ್ಕೆ ತರುತ್ತಿದೆ. ಸೌದಿ ಅರೇಬಿಯಾ, ಯುಎಇ, ಕುವೈತ್, ಅಜರ್‌ಬೈಜಾನ್ ಮತ್ತು ಬಹ್ರೇನ್‌ನಂತಹ ದೇಶಗಳು ಸಾವಿರಾರು ಪಾಕಿಸ್ತಾನಿ ಭಿಕ್ಷುಕರನ್ನು ಗಡಿಪಾರು ಮಾಡಿವೆ. ಸೌದಿ ಅರೇಬಿಯಾ ಒಂದೇ ಸುಮಾರು 56,000 ಪಾಕಿಸ್ತಾನಿ ಭಿಕ್ಷುಕರನ್ನು ಗಡಿಪಾರು ಮಾಡಿದೆ. ಪಾಕಿಸ್ತಾನದ ನಾಗರಿಕರು ಪರದೇಶಗಳಲ್ಲಿ ಭಿಕ್ಷಾಟನೆಗೆ ಇಳಿದಿರುವುದು ಪಾಕಿಸ್ತಾನಕ್ಕೂ ಗೊತ್ತಿದೆ. ಅದನ್ನು ತಡೆಯಲು ಮುಂದಾಗಿರುವ ಪಾಕಿಸ್ತಾನ, 2025ರಲ್ಲಿ 66,154 ಪ್ರಯಾಣಿಕರನ್ನು ತಡೆದು ತಪಾಸಣೆಗಳನ್ನು ನಡೆಸಿದೆ. ಅವರಲ್ಲಿ ಕೆಲವರು ಸಂಘಟಿತ ಭಿಕ್ಷಾಟನೆ ಗ್ಯಾಂಗ್‌ಗಳಿಗೆ ಸೇರಿದವರೆಂದು ಪತ್ತೆ ಹಚ್ಚಲಾಗಿದ್ದು ಅವರನ್ನು ವಿದೇಶಗಳಿಗೆ ಹೋಗುವುದನ್ನು ತಡೆಯಲು ಪ್ರಯತ್ನಿಸಿದೆ. ಯುಎಇ ಕೂಡ ಪಾಕಿಸ್ತಾನಿ ನಾಗರಿಕರಿಗೆ ವೀಸಾ ನೀಡುವುದನ್ನು ಸ್ಥಗಿತಗೊಳಿಸಿದೆ.

ಕಾಡಾನೆ ಸಮೀಪಕ್ಕೆ ಹೋಗಿ ಸೆಲ್ಫಿ ತೆಗೆದುಕೊಳ್ಳಲು ಯತ್ನಿಸಿದ ಯುವಕನ ತುಳಿದು ಕೊಂದ ಆನೆ


ಜಾರ್ಖಂಡ್: ಸೆಲ್ಫಿಗಾಗಿ ಯುವಕನೋರ್ವ ಕಾಡಾನೆ ಬಳಿ ಹೋಗಿ ಸೆಲ್ಫಿ ತೆಗೆದುಕೊಳ್ಳುವಾಗ ಆನೆ ದಾಳಿ ಮಾಡಿ ಆತನನ್ನು ಕೊಂದಿರುವ ಘಟನೆ ಜಾರ್ಖಂಡ್‌ನ ರಾಮಗಡದಲ್ಲಿ ನಡೆದಿದ್ದು, ಕಾಡಾನೆ ದಾಳಿಯ ಭಯಾನಕ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದೆ.



ಆನೆ ಮೊದಲಿಗೆ ತನ್ನ ಕಾಲಿನಿಂದ ಆತನನ್ನು ತುಳಿದು ಹತ್ಯೆ ಮಾಡಿದೆ. ಅಷ್ಟಕ್ಕೆ ಸುಮ್ಮನಾಗದ ಆನೆ ಸೊಂಡಿಲಿನಲ್ಲಿ ಸುತ್ತಿಕೊಂಡು ಯುವಕನನ್ನು ಬಟ್ಟೆ ಒಗೆಯುವಂತೆ ಎಸೆಯಲು ಪ್ರಾರಂಭಿಸಿತು. ಆ ಯುವಕ ಅಷ್ಟರಲ್ಲಾಗಲೇ ಮೃತಪಟ್ಟಿದ್ದ. ಆದರೆ ಆನೆ ಕೋಪ ಶಾಂತವಾಗಿಲ್ಲ. ಯುವಕನ ದೇಹವನ್ನು ಪದೇ ಪದೇ ನೆಲಕ್ಕೆ ಒಗೆದ ನಂತರ, ಅದು ಅದನ್ನು ಎತ್ತಿಕೊಂಡು ಮತ್ತೆ ಎಸೆಯಲು ಪ್ರಾರಂಭಿಸಿತು. ವ್ಯಾಪಕ ಕಿರುಚಾಟ ಮತ್ತು ಕೂಗಾಟ ಕೇಳಿಬಂದರೂ ಆನೆ ಜಗಲಿಲ್ಲ. ಈ ಘಟನೆಯು ಇಡೀ ಪ್ರದೇಶದಲ್ಲಿ ವ್ಯಾಪಕ ಭೀತಿಯನ್ನುಂಟುಮಾಡಿದೆ. ಮೃತ ಯುವಕನನ್ನು 35 ವರ್ಷದ ಅಮಿತ್ ರಾಜ್ವರ್ ಎಂದು ಗುರುತಿಸಲಾಗಿದೆ.

ಬೆಂಗಳೂರಿನ ಕೆಂಪೇಗೌಡ, ಗುಜರಾತ್‌ನ ಏಕತಾ ಪ್ರತಿಮೆಗಳ ಶಿಲ್ಪಿ ಶತಾಯುಷಿ ರಾಮ್ ಸುತಾರ್ ನಿಧನ

ನೊಯ್ಡಾ: ಗುಜರಾತ್‌ನಲ್ಲಿ ವಿಶ್ವದ ಅತಿ ಎತ್ತರದ ಏಕತಾ ಪ್ರತಿಮೆ, ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡ ಪ್ರತಿಮೆ ಸೇರಿದಂತೆ ಹಲವು ಶಿಲ್ಪ, ಪ್ರತಿಮೆಗಳ ವಿನ್ಯಾಸಕ್ಕೆ ಹೆಸರುವಾಸಿಯಾಗಿದ್ದ ಪ್ರಸಿದ್ಧ ಹಿರಿಯ ಶಿಲ್ಪಿ ರಾಮ್ ಸುತಾರ್ ಅವರು ಕಳೆದ ರಾತ್ರಿ ತಮ್ಮ ನೊಯ್ಡಾದ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಅವರಿಗೆ 101 ವರ್ಷ ವಯಸ್ಸಾಗಿತ್ತು. ಭಾರತದ ಅತ್ಯಂತ ಪ್ರಸಿದ್ಧ ಕಲಾವಿದರಲ್ಲಿ ಒಬ್ಬರಾದ, ದೇಶದ ಸಾಂಸ್ಕೃತಿಕ ಮತ್ತು ಕಲಾತ್ಮಕ ಕ್ಷೇತ್ರದಲ್ಲಿ ಅಳಿಸಲಾಗದ ಛಾಪು ಮೂಡಿಸಿದ ಹಿರಿಯ ಶಿಲ್ಪಿ ರಾಮ್ ಸುತಾರ್, ಭಾರತೀಯ ಕಲೆ ಮತ್ತು ಪರಂಪರೆಗೆ ಅವರ ಸ್ಮರಣೀಯ ಕೊಡುಗೆಗಳಿಗಾಗಿ ಪೂಜಿಸಲ್ಪಟ್ಟ ಸುತಾರ್, ತಮ್ಮ ಜೀವನದ ಕೊನೆಯವರೆಗೂ ಸೃಜನಶೀಲರಾಗಿ ಸಕ್ರಿಯರಾಗಿದ್ದರು. ಕೆಲಸಗಳು ಭಾರತದ ಇತಿಹಾಸ, ಸಂಸ್ಕೃತಿ ಮತ್ತು ಸಾಮೂಹಿಕ ಮನೋಭಾವದ ಪ್ರಬಲ ಅಭಿವ್ಯಕ್ತಿಗಳಾಗಿ ಯಾವಾಗಲೂ ಮೆಚ್ಚುಗೆ ಪಡೆಯುತ್ತವೆ ಎಂದು ಪ್ರಧಾನಿ ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.



ಮನೆ ಬಾಡಿಗೆ ಕೇಳಿದ ಮಾಲಕಿ: ಕೊಂದು ಸೂಟ್ ಕೇಸ್‌ಗೆ ತುಂಬಿದ ದಂಪತಿ

ಗಾಜಿಯಾಬಾದ್: ಬಾಡಿಗೆ ಕೇಳಿದ್ದಕ್ಕೆ ಮನೆ ಮಾಲಕಿಯನ್ನೇ ಬಾಡಿಗೆದಾರರು ಕೊಂದಿರುವ ಘಟನೆ ಗಾಜಿಯಾಬಾದ್‌ನ ರಾಜನಗರದಲ್ಲಿ ನಡೆದಿದೆ. ಕೊಲೆಯ ನಂತರ, ಆರೋಪಿ ದಂಪತಿ ಮಹಿಳೆಯ ದೇಹವನ್ನು ಸೂಟ್‌ಕೇಸ್‌ನಲ್ಲಿರಿಸಿದ್ದರು ಎಂದು ಆರೋಪಿಸಲಾಗಿದೆ.



ಮನೆ ಮಾಲಕಿ ದೀಪ್ಶಿಕಾ ಶರ್ಮಾ (48) ಕೊಲೆಯಾದವರು. ಆಕೆಯನ್ನು ಕೊಂದ ಅಜಯ್ ಗುಪ್ತಾ ಮತ್ತು ಅಕೃತಿ ಗುಪ್ತಾ ದಂಪತಿಯನ್ನು ಬಂಧಿಸಲಾಗಿದೆ. ಉಮೇಶ್ ಶರ್ಮಾ ಮತ್ತು ದೀಪ್ಶಿಕಾ ಶರ್ಮಾ ಸೊಸೈಟಿಯಲ್ಲಿ ಎರಡು ಫ್ಲಾಟ್‌ಗಳನ್ನು ಹೊಂದಿದ್ದು, ಒಂದರಲ್ಲಿ ಅವರು ವಾಸಿಸುತ್ತಿದ್ದರು. ಇನ್ನೊಂದನ್ನು ಗುಪ್ತಾ ದಂಪತಿಗಳಿಗೆ ಬಾಡಿಗೆಗೆ ನೀಡಲಾಗಿತ್ತು.

ಗುಪ್ತಾ ದಂಪತಿ ಸುಮಾರು ನಾಲ್ಕು ತಿಂಗಳಿನಿಂದ ಬಾಡಿಗೆ ಪಾವತಿಸಿರಲಿಲ್ಲ. ಹೀಗಾಗಿ ದೀಪ್ಶಿಕಾ ಬುಧವಾರ ಗುಪ್ತಾ ದಂಪತಿಗಳ ಮನೆಗೆ ಹೋದರು. ಅವರು ಗಂಟೆಗಟ್ಟಲೆ ಹಿಂತಿರುಗದಿದ್ದಾಗ, ಕೆಲಸದಾಕೆ ಮೀನಾ ಕಟ್ಟಡದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ದೀಪ್ಶಿಕಾ ಶರ್ಮಾ, ಗುಪ್ತಾ ದಂಪತಿ ಮನೆ ಒಳ ಹೋಗಿದ್ದಾರೆ. ಆದರೆ ಫ್ಲಾಟ್‌ನಿಂದ ಹೊರಬರಲಿಲ್ಲ ಎಂದು ತಿಳಿದ ನಂತರ ಪೊಲೀಸರಿಗೆ ಕರೆ ಮಾಡಿದ್ದಾರೆ.

ಪೊಲೀಸರು ಬಂದ ನಂತರ, ಗುಪ್ತಾ ದಂಪತಿಗಳ ಮನೆಯನ್ನು ಶೋಧಿಸಲಾಯಿತು, ದೀಪ್ಶಿಕಾ ಶರ್ಮಾ ಅವರ ದೇಹವು ಸೂಟ್‌ಕೇಸ್‌ನಲ್ಲಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಸಿಎನ್‌ಸಿಯಿಂದ 16ನೇ ವಾರ್ಷಿಕ 'ತೋಕ್ ನಮ್ಮೆ' ಕಾರ್ಯಕ್ರಮ

ಬಂದೂಕಿಗೆ ಪೂಜೆ : ಶೂಟಿಂಗ್ ಸ್ಪರ್ಧೆ

ಮಡಿಕೇರಿ,ಡಿ.18– ವಿಶ್ವಸಂಸ್ಥೆಯ ಜಾಗತಿಕ ಅಲ್ಪಸಂಖ್ಯಾತರ ಹಕ್ಕುಗಳ ದಿನ ದಂದು ಸಿಎನ್‌ಸಿ ಸಂಘಟನೆ ವತಿಯಿಂದ 16ನೇ ವಾರ್ಷಿಕ 'ತೋಕ್ ನಮ್ಮೆ' ಮುರ್ನಾಡು ಬಲಂಬೇರಿ ರಸ್ತೆಯ ಬಳಿ ಕಡಿಯತ್ನಾಡ್ ಗ್ರಾಮದಲ್ಲಿ ನಡೆಯಿತು.

ಸಿಎನ್‌ಸಿ ಸಂಚಾಲಕ ಎನ್.ಯು.ನಾಚಪ್ಪ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೂಜೆಗಾಗಿ ಬಂದೂಕುಗಳನ್ನು ಹೂವುಗಳಿಂದ ಅಲಂಕರಿಸಿ, ವಾಹನದಲ್ಲಿರಿಸಿ ದುಡಿ ಕೊಟ್ಟ್ ಪಾಟ್‌ನೊಂದಿಗೆ ಮೆರವಣಿಗೆ ನಡೆಸಲಾಯಿತು. ಬಳಿಕ ಮಕ್ಕಳು, ಮಹಿಳೆಯರು ಮತ್ತು ಪುರುಷರಿಗಾಗಿ ಶೂಟಿಂಗ್ ಸ್ಪರ್ಧೆಗಳು ನಡೆಯಿತು. ಎನ್.ಯು.ನಾಚಪ್ಪ ಅವರು ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಾಚಪ್ಪ, ಕೊಡವರ ಧಾರ್ಮಿಕ ಸಂಸ್ಕಾರವಾದ ಗನ್ ಹಕ್ಕಿಗೆ ಸಿಖ್ಖರ ಕಿರ್ಪಾಣ್ ಮಾದರಿಯಲ್ಲಿ ಸಂವಿಧಾನದ 25–26ನೇ ವಿಧಿ ಪ್ರಕಾರ ಶಾಶ್ವತ ರಾಜ್ಯಾಂಗ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದರು. ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರು ಎಂದೇ ಎಲ್ಲಾ ಕಾಲಂನಲ್ಲೂ ದಾಖಲಿಸಬೇಕು. ಇಲ್ಲದಿದ್ದರೆ 2029ರ ನಂತರ ನಮ್ಮ ವಿಶೇಷ ತೋಕ್ ಹಕ್ಕನ್ನು ಬಹುಸಂಖ್ಯಾತ ಸಮುದಾಯಗಳ ಸಮೀಕರಣದಿಂದ ಕೊಡವರು ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುವ ಅಪಾಯವಿದೆ ಎಂದು ನಾಚಪ್ಪ ಎಚ್ಚರಿಸಿದರು.



ಸಿಎನ್‌ಸಿ 'ತೋಕ್ ನಮ್ಮೆ' ಕಾರ್ಯಕ್ರಮದಲ್ಲಿ ಬಂದೂಕು ಪೂಜಿಸಲಾಯಿತು.

ತೋಕ್ ಕೊಡವರ ಪ್ರಾಚೀನ ಹೆಮ್ಮೆಯ ಹೆಗ್ಗುರುತಾಗಿದ್ದು, ಪೂರ್ವಕಾಲದ ಸಂಪ್ರದಾಯ ಆಚರಣೆಗಳು ಮತ್ತು ಜಾನಪದ ಕಾನೂನು ವ್ಯವಸ್ಥೆಗಳನ್ನು ಪ್ರದರ್ಶಿಸಲು ಮತ್ತು ಸಂರಕ್ಷಿಸಲು, ಸಿಎನ್‌ಸಿ ವಾರ್ಷಿಕವಾಗಿ ತೋಕ್ ನಮ್ಮೆ ಸಾರ್ವಜನಿಕ ಗನ್ ಕಾರ್ನಿವಲ್ ಮಾದರಿಯಲ್ಲಿ ಆಯೋಜಿಸುತ್ತ ಬಂದಿದೆ ಎಂದು ಅವರು ಹೇಳಿದರು.

ಇದೇ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಕೊಡವ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಗಣ್ಯರು ಬಹುಮಾನ ನೀಡಿ ಪ್ರೋತ್ಸಾಹಿಸಿದರು.


ಕಾರ್ಯಕ್ರಮದಲ್ಲಿ ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಕಲಿಯಂಡ ಮೀನಾ ಪ್ರಕಾಶ್, ಪುಲ್ಲೇರ ಸ್ವಾತಿ ಕಾಳಪ್ಪ, ಚೋಳಪಂಡ ಜ್ಯೋತಿ ನಾಣಯ್ಯ, ನಂದೇಟಿರ ಕವಿತಾ ಸುಬ್ಬಯ್ಯ, ಕಲಿಯಂಡ ಪ್ರಕಾಶ್, ಬಾಚರಣಿಯಂಡ ಚಿಪ್ಪಣ್ಣ, ಬಡುವಂಡ ವಿಜಯ, ನಂದೇಟಿರ ರವಿ ಸುಬ್ಬಯ್ಯ, ನೆಲ್ಲಮಕ್ಕಡ ವಿವೇಕ್, ಅಜ್ಜಿಕುಟ್ಟೀರ ಲೋಕೇಶ್, ಕಾಂಡೇರ ಸುರೇಶ್, ಚಂಬಂಡ ಜನತ್, ಪುಲ್ಲೇರ ಕಾಳಪ್ಪ, ಬೇಪಡಿಯಂಡ ದಿನು, ತೋಲಂಡ ಸೋಮಯ್ಯ, ಕಿರಿಯಮಾಡ ಶರಿನ್, ನಂದಿನೆರವಂಡ ವಿಜು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ಕೊಡಗು ಜಿಲ್ಲೆಗೆ ಆಗಮಿಸಿದ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನದ ಜನ ಜಾಗೃತಿ ರಥಯಾತ್ರೆ

ಮಡಿಕೇರಿ,ಡಿ.18– ಹಿಂದೂ ಜಾಗರಣ ವೇದಿಕೆ ಹಾಗೂ ಪರಿವರ್ತನ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಡ್ರಗ್ಸ್ ಮುಕ್ತ ಕರ್ನಾಟಕ' ಅಭಿಯಾನದ ಜನ ಜಾಗೃತಿ ರಥಯಾತ್ರೆ ಕೊಡಗು ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ಪೊನ್ನಂಪೇಟೆ ಶ್ರೀ ರಾಮಕೃಷ್ಣ ಶಾರದಾಶ್ರಮದ ಮುಂಭಾಗ ಸ್ವಾಗತ ಕೋರಿ ರಥಯಾತ್ರೆಗೆ ಚಾಲನೆ ನೀಡಲಾಯಿತು. ಪೊನ್ನಂಪೇಟೆ ಶ್ರೀ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷ ಪರಹಿತಾನಂದ ಮಹಾರಾಜ್ ಅವರು, ಜನ ಜಾಗೃತಿ ರಥದಲ್ಲಿರಿಸಿರುವ ಶಾರದಾ ಮಾತೆಯ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಬಾವುಟ ತೋರುವ ಮೂಲಕ ಕೊಡಗಿನಲ್ಲಿ ಸಂಚರಿಸುವ ರಥಯಾತ್ರೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕುತೂಹಲಕ್ಕಾಗಿ ಮಾದಕ ವಸ್ತು ಸೇವನೆ ಮಾಡುವ ಯುವಕರು, ಅದನ್ನೇ ವ್ಯಸನವನ್ನಾಗಿ ಮಾಡಿಕೊಂಡು ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮಾದಕ ವಸ್ತು ಸೇವನೆಯಿಂದ ಮನಸ್ಸು ಹಾಗೂ ದೇಹದ ಆರೋಗ್ಯ ಕೆಡುತ್ತದೆ. ವ್ಯಸನಕ್ಕೆ ದಾಸರಾದವರು ಕೊಲೆ ಹಾಗೂ ಕಳ್ಳತನದಂತ ಕೃತ್ಯಕ್ಕೆ ಇಳಿದು ಸಮಾಜಕ್ಕೆ ಕಂಟಕರಾಗುವ ಮೂಲಕ ಹೆತ್ತವರಿಗೂ ಕೆಟ್ಟ ಹೆಸರು ತರುತ್ತಾರೆ. ಮಾದಕ ವ್ಯಸನಿಗಳಿಗೆ ಸಮಾಜ ಯಾವುದೇ ರೀತಿಯ ಗೌರವ ನೀಡುವುದಿಲ್ಲ. ಆದ್ದರಿಂದ ಯುವ ಜನತೆ ಮಾದಕ ವಸ್ತುವಿನ ಮಾಯಾಜಾಲದಿಂದ ದೂರವಿದ್ದು ಉತ್ತಮ ಆರೋಗ್ಯವನ್ನು ಹೊಂದುವ ಮೂಲಕ ಸದೃಢ ಹಾಗೂ ಶಕ್ತಿಶಾಲಿ ದೇಶವನ್ನು ಕಟ್ಟಲು ಕಂಕಣ ಬದ್ಧರಾಗಬೇಕು ಎಂದು ಕರೆ ನೀಡಿದರು

ಈ ಸಂದರ್ಭದಲ್ಲಿ ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಹ ಸಂಚಾಲಕ ಅಲ್ಲುಮಾಡ ಶರತ್, ಪೊನ್ನಂಪೇಟೆ ತಾಲೂಕು ಸಂಯೋಜಕ ಸುಳ್ಳಿಮಾಡ ಸಂಪತ್, ಪೊನ್ನಂಪೇಟೆ ತಾಲೂಕು ಸಹ ಸಂಯೋಜಕ ಸುಕೇಶ್ ಕಾರ್ಯಪ್ಪ, ಪೊನ್ನಂಪೇಟೆ ನಗರ ಸಂಚಾಲಕ ಅನಿಲ್ ಪ್ರಸಾದ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಸಂಚಾಲಕ ಚೆಕ್ಕೆರ ಮನು ಕಾವೇರಪ್ಪ, ಕರ್ನಾಟಕ ರಾಜ್ಯ ಸಹ ಸಂಯೋಜಕ ಐನಂಡ ಲಾಲ, ಪೊನ್ನಿಮಾಡ ಜಯಂತ್, ಜೀವನ್, ಚಿರಿಯಪಂಡ ಜೋಯಪ್ಪ, ಅಲೆಮಾಡ ಸುಧೀರ್, ಪದ್ಮನಾಭ, ದಿನೇಶ್ ಹಾಗೂ ಮತ್ತಿತರರು ಹಾಜರಿದ್ದರು.



ಶಾರದಾ ಮಾತೆಗೆ ಪುಷ್ಪಾರ್ಚನೆ ಮಾಡಿ, ಸ್ವಾಗತಿಸಿದ ಶ್ರೀ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರು.

ಕಾಡಾನೆಗಳ ಉಪಟಳ : ಭಯದ ವಾತಾವರಣದಲ್ಲಿ ಗ್ರಾಮಸ್ಥರು


ಕಾಡಾನೆಗಳು ಗದ್ದೆಗೆ ಲಗ್ಗೆ ಇಟ್ಟು ತುಳಿದು ಧ್ವಂಸ ಮಾಡಿರುವುದು.

ನಾಪೋಕ್ಲು : ಇಲ್ಲಿಗೆ ಸಮೀಪದ ನೆಲಜಿ ಗ್ರಾಮದ ವ್ಯಾಪ್ತಿಯಲ್ಲಿ ಕಾಡಾನೆಗಳ ಉಪಟಳ ಅಧಿಕವಾಗಿದ್ದು ರೈತರ ಗದ್ದೆ ಹಾಗೂ ತೋಟಗಳಿಗೆ ದಾಳಿ ಮಾಡಿ ಭಾರೀ ನಷ್ಟವನ್ನುಂಟು ಮಾಡಿವೆ.

ಬಲ್ಲಮಾವಟಿ ಗ್ರಾಮ ಪಂಚಾಯಿತಿ ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆಗಳು ಬೀಡುಬಿಟ್ಟಿದ್ದು ಬತ್ತವನ್ನು ತಿಂದು ತುಳಿದು ಬಾರಿ ನಷ್ಟವನ್ನುಂಟು ಮಾಡಿದ್ದಲ್ಲದೆ ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ನೆಲಜಿ ಗ್ರಾಮದ ನಿವಾಸಿ ಬೆಳೆಗಾರರಾದ ಚೆಟ್ಟಿನೆರವನ ಶಿವಕುಮಾರ್, ಮೊನ್ನಪ್ಪ ಕುಶಾಲಪ್ಪ, ಕರುಂಬಯ್ಯ ಸೇರಿದಂತೆ ಸುತ್ತಮುತ್ತಲಿನ ಕೊಯ್ಲು ಮಾಡಿದ ಗದ್ದೆ ಹಾಗೂ ಕಾಫಿ ತೋಟಗಳಿಗೆ ಲಗ್ಗೆ ಇಟ್ಟು ಬಾರಿ ಪ್ರಮಾಣದ ನಷ್ಟವನ್ನುಂಟು ಮಾಡಿವೆ. ನೆಲಜಿ, ಪೇರೂರು ಗ್ರಾಮ ವ್ಯಾಪ್ತಿಯಲ್ಲಿ ನಿರಂತರ ದಾಳಿ ಮಾಡುತ್ತಿರುವ ಕಾಡಾನೆಗಳಿಂದಾಗಿ ಗ್ರಾಮದ ನಿವಾಸಿಗಳಲ್ಲಿ ಜೀವ ಭಯದ ವಾತಾವರಣ ನಿರ್ಮಾಣವಾಗಿದೆ. ಕಾಫಿ ಫಸಲು ಕೊಯ್ಲಿಗೆ ಸಮಯವಾಗುತ್ತಿರುವುದರಿಂದ ಕಾರ್ಮಿಕರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದು, ತೀವ್ರ ಸಮಸ್ಯೆ ಎದುರಾಗಿದೆ.

ಈ ಬಗ್ಗೆ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಿದ್ದರು. ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿರುವ ಬೆಳೆಗಾರರು ಕೂಡಲೇ ನಷ್ಟ ಪರಿಹಾರ ಹಾಗೂ ಕಾಡಾನೆಗಳನ್ನು ಕಾಡಿಗೆ ಹಟ್ಟಿ ನಿಯಂತ್ರಿಸುವ ಕೆಲಸ ಮಾಡಬೇಕೆಂದು. ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪುಣ್ಯಸ್ಮರಣೆ

ಮಡಿಕೇರಿ ಡಿ.18– ವೀರ ಸೇನಾನಿ, ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪುಣ್ಯಸ್ಮರಣಾ ಕಾರ್ಯಕ್ರಮವು ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ಗುರುವಾರ ಸರಳವಾಗಿ ನಡೆಯಿತು. ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಸಿಬ್ಬಂದಿ ಹಾಗೂ ಪ್ರವಾಸಿಗರು ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ಎಬಿವಿಪಿ ದಕ್ಷಿಣ ಪ್ರಾಂತದ ಸಮ್ಮೇಳನದ ಅಂಗವಾಗಿ ಬೃಹತ್ ಜಾಥಾ



ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ದಕ್ಷಿಣ ಪ್ರಾಂತದ 45ನೇ ಸಮ್ಮೇಳನದ ಅಂಗವಾಗಿ ಮಡಿಕೇರಿಯಲ್ಲಿ ಬೃಹತ್ ಜಾಥಾ ನಡೆಸಲಾಯಿತು. ನಗರದ ಗೌಡ ಸಮಾಜದಿಂದ ಆರಂಭವಾದ ಜಾಥಾ ಜ್ಯೂನಿಯರ್ ಕಾಲೇಜು ರಸ್ತೆ, ಇಂದಿರಾ ಗಾಂಧಿ ವೃತ್ತ, ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ವೃತ್ತ, ಮೇಜರ್ ಮಂಗೇರಿರ ಮುತ್ತಣ್ಣ ವೃತ್ತ ಜನರಲ್ ತಿಮ್ಮಯ್ಯ ವೃತ್ತದ ಮೂಲಕ ಹಾದು ಸಾರ್ವಜನಿಕ ಸಮಾವೇಶ ಆಯೋಜಿತ ಗಾಂಧಿ ಮೈದಾನದಲ್ಲಿ ಸಮಾವೇಶಗೊಂಡಿತು.

2 ಲಕ್ಷ ರೂ. ಮೌಲ್ಯದ ಬ್ರೇಸ್‌ಲೆಟ್ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದ ಪೆಟ್ರೋಲ್ ಬಂಕ್ ಸಿಬ್ಬಂದಿ

ಮಡಿಕೇರಿ: ಪೆಟ್ರೋಲ್ ಬಂಕ್‌ನಲ್ಲಿ ಸಿಕ್ಕಿದ್ದ 2 ಲಕ್ಷರೂ. ಮೌಲ್ಯದ ಚಿನ್ನದ ಬ್ರೇಸ್‌ಲೆಟ್ ಅನ್ನು ಅಲ್ಲಿನ ಸಿಬ್ಬಂದಿ ಮಾಲೀಕರಿಗೆ ಮರಳಿಸುವ ಮೂಲಕ ಪ್ರಾಮಾಣಿಕತೆ ಪ್ರದರ್ಶಿಸಿ ಮಾದರಿಯಾಗಿದ್ದಾರೆ.

ಸುಂಟಿಕೊಪ್ಪದ ಟಿ.ಎಂ.ಬಸವರಾಜು ಪತ್ನಿಯೊಂದಿಗೆ ಶಿವಮೊಗ್ಗಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಕೊಡಗರಹಳ್ಳಿಯಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ವಾಹನಕ್ಕೆ ಇಂಧನ ತುಂಬಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ಅವರ ಕೈಯಲ್ಲಿದ್ದ ಬ್ರೇಸ್‌ಲೆಟ್ ಬಿದ್ದು ಹೋಗಿತ್ತು.



ಕೊಣನೂರು ಬಳಿ ಕೈಯಲ್ಲಿದ್ದ ಬ್ರೇಸ್‌ಲೆಟ್ ಕಾಣೆಯಾಗಿರುವುದು ಬಸವರಾಜು ಗಮನಕ್ಕೆ ಬಂದಿದ್ದು, ವಾಪಸ್ ಹಿಂದಿರುಗಿ ತಾವು ವಾಹನ ನಿಲ್ಲಿಸಿದ್ದ ವಿವಿಧ ಸ್ಥಳಗಳಲ್ಲಿ ಪರಿಶೀಲನೆ ನಡೆಸಿದ್ದರು. ಈ ಸಂದರ್ಭ ಪೆಟ್ರೋಲ್ ಬಂಕ್‌ನ ಸಿಬ್ಬಂದಿ ರಾಧ ಎಂಬಾಕೆ ಬ್ರೇಸ್‌ಲೆಟ್ ಅನ್ನು ಸುರಕ್ಷಿತವಾಗಿ ಮಾಲೀಕರಿಗೆ ಹಸ್ತಾಂತರಿಸಿರುವುದು ಗೊತ್ತಾಗಿದೆ.

ಮಾಲೀಕರಿಂದ ಬ್ರೇಸ್‌ಲೆಟ್ ಹಿಂದಿರುಗಿ ಪಡೆದ ಬಸವರಾಜು ಸಿಬ್ಬಂದಿ ಬಂಕ್ ಸಿಬ್ಬಂದಿ ರಾಧಾ ಅವರ ಪ್ರಾಮಾಣಿಕತೆಯನ್ನು ಪ್ರಶಂಸಿಸಿದರು. 17 ಗ್ರಾಂ ಮೌಲ್ಯದ ಚಿನ್ನದ ಬ್ರೇಸ್‌ಲೆಟ್ ಅನ್ನು ಸುರಕ್ಷಿತವಾಗಿ ಮಾಲೀಕರಿಗೆ ಒಪ್ಪಿಸಿ ಪ್ರಾಮಾಣಿಕತೆ ಮೆರೆದ ರಾಧಾ ಸಮಾಜದ ಎಲ್ಲರಿಗೂ ಮಾದರಿಯಾಗಿದ್ದು, ಆಕೆಗೆ ಸೂಕ್ತ ಬಹುಮಾನ ನೀಡುವುದಾಗಿಯೂ ಬಸವರಾಜು ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಕನ್ನಡ ಕಡೆಗಣನೆ: ಕರವೇ ಪ್ರತಿಭಟನೆ



ಕುಶಾಲನಗರ : ಇಲ್ಲಿನ ರೈತ ಭವನದಲ್ಲಿ ಎಲ್‌ಐಸಿಯ ಎರಡು ದಿನಗಳ ದಕ್ಷಿಣ ವಲಯ ಪ್ರತಿನಿಧಿಗಳ ಸಮಾವೇಶದಲ್ಲಿ ಕನ್ನಡ ಭಾಷೆಯನ್ನು ಸಂಪೂರ್ಣ ಕಡೆಗಣಿಸಲಾಗಿದೆ ಎಂದು ಆರೋಪಿಸಿ ಟಿ.ಎ. ನಾರಾಯಣಗೌಡರ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಮುತ್ತಿಗೆ ಹಾಕಿ ಸ್ಥಳೀಯ ಆಯೋಜಕರನ್ನು ತರಾಟೆಗೆ ತೆಗೆದುಕೊಂಡರು.

ಎಲ್ಲಾ ಸ್ವಾಗತ ಫಲಕ ಆಂಗ್ಲಮಯವಾಗಿದೆ. ಕನ್ನಡ ಕಡೆಗಣಿಸಿ ಇಂಗ್ಲಿಷ್ ಮತ್ತು ಹಿಂದಿಗೆ ಭಾಷೆಗೆ ಒತ್ತು ನೀಡಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಕರವೇ ನಗರಾಧ್ಯಕ್ಷ ಯೋಗೇಶ್ ನೇತೃತ್ವ ದಲ್ಲಿ ಮುತ್ತಿಗೆ ಹಾಕಿದ ಪದಾಧಿಕಾರಿಗಳು ಕನ್ನಡ ಭಾಷೆ ಮರೆತು ನಡೆಸುತ್ತಿರುವ ಕಾರ್ಯಕ್ರಮವನ್ನು ಖಂಡಿಸಿ ಹೋರಾಟದ ಎಚ್ಚರಿಕೆ ನೀಡಿದರು.

ಕೇರಳ ಮತ್ತು ತಮಿಳುನಾಡಿನಿಂದ ಸಮಾವೇಶಕ್ಕೆ ಎಲ್‌ಐಸಿ ಏಜೆಂಟರು ಆಗಮಿಸಿದ್ದು ಅವರಿಗೆ ಕನ್ನಡ ಭಾಷೆ ಬಾರದ ಕಾರಣ ಈ ವ್ಯವಸ್ಥೆ ಮಾಡಲಾಗಿದೆ ಎಂದು ಸ್ಥಳೀಯ ಏಜೆಂಟರು ಸಮಜಾಯಿಷಿ ನೀಡಿದರೂ ಸುಮ್ಮನಾಗದ ಕರವೇ ಹೋರಾಟಗಾರರು ಕನ್ನಡಕ್ಕೆ ಮೊದಲ ಆದ್ಯತೆ ನೀಡುವಂತೆ ಎಚ್ಚರಿಸಿದರು. ನಂತರ ಸಮಾವೇಶ ಪ್ರಮುಖರು ಅಚಾತುರ್ಯದ ಬಗ್ಗೆ ಕ್ಷಮೆಯಾಚನೆ ಮಾಡಿದರು.

ಈ ಸಂದರ್ಭ ಕರವೇ ರಾಜ್ಯ ಸಂಚಾಲಕಿ ದೀಪ ಪೂಜಾರಿ, ಜಿಲ್ಲಾ ಮಹಿಳಾಧ್ಯಕ್ಷೆ ಜ್ಯೋತಿ ಕುದುಪಜೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿವ್ಯ ದೇವಾಂಗ, ಮಡಿಕೇರಿ ಕ್ಷೇತ್ರ ಅಧ್ಯಕ್ಷ ಆನಂದ್ ಗೌಡ, ಮಹಿಳಾ ತಾಲೂಕು ಅಧ್ಯಕ್ಷೆ ಹಾನಗಲ್ ರೂಪ ಗಣೇಶ್, ಕಾರ್ಯದರ್ಶಿ ರಾಕೇಶ್, ತಾಲೂಕು ಸಂಘಟನಾ ಕಾರ್ಯದರ್ಶಿ ಜೈ ಸ್ವಾಮಿ, ತಾಲೂಕು ಸಹ ಸಂಘಟನಾ ಕಾರ್ಯದರ್ಶಿ ಪವನ್, ನಗರ ಮಹಿಳಾಧ್ಯಕ್ಷೆ ಅನಿತಾ ದೇವಾಂಗ, ನಗರ ಘಟಕದ ಉಪಾಧ್ಯಕ್ಷ ರವಿ ಡಿ.ಎನ್, ಕೂಡಿಗೆ ಹೋಬಳಿ ಅಧ್ಯಕ್ಷ ರಾಜೇಶ್ ಹಾಗೂ ಸದಸ್ಯ ಚಂದ್ರು ಭಾಗವಹಿಸಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಅಧಿಕಾರ ದುರುಪಯೋಗ ಆರೋಪ

ಕೇಂದ್ರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

- ಜಿಲ್ಲಾ ಬಿಜೆಪಿ ಕಚೇರಿಗೆ ಮುತ್ತಿಗೆ ಯತ್ನ
- ಪ್ರತಿಭಟನಾಕಾರರ ಬಂಧನ, ಬಿಡುಗಡೆ

ಚಾಮರಾಜನಗರ, ಡಿ.18– ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರ ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಿ ನಗರದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ರಾಮಸಮುದ್ರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಮೆರವಣಿಗೆ ಹೊರಟ ಕಾಂಗ್ರೆಸ್ ಮುಖಂಡರು ಕುಲುಮೆ ರಸ್ತೆ ಮೂಲಕ ಜಿಲ್ಲಾ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪ್ರತಿಭಟನಾಕಾರರನ್ನು ಪೊಲೀಸರು ತಡೆದರು. ಇದರಿಂದ ಆಕ್ರೋಶಗೊಂಡ ಪ್ರತಿಭಟನಾಕಾರರು ಬಿಜೆಪಿ ಕಚೇರಿ ಎದುರು ಕೆಲಕಾಲ ಪ್ರತಿಭಟನೆ ನಡೆಸಲು ಅನುವು ಮಾಡಿಕೊಡುವಂತೆ ಒತ್ತಾಯಿಸಿದರು. ಮನವಿ ತಿರಸ್ಕರಿಸಿದ ಹಿನ್ನೆಲೆಯಲ್ಲಿ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

ಕಾಂಗ್ರೆಸ್ ಮುಖಂಡ ಕೆರೆಹಳ್ಳಿ ನವೀನ್ ಮಾತನಾಡಿ, ನಾವು ಬಿಜೆಪಿ ಕಚೇರಿ ಎದುರು ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತೇವೆ. ಅಶಾಂತಿ ಉಂಟು ಮಾಡುವುದಿಲ್ಲ. ಆದ್ದರಿಂದ ಬಿಜೆಪಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲು ಅವಕಾಶ ಮಾಡಿಕೊಡಬೇಕೇ ಹೊರತು ಪೊಲೀಸರು ನಮ್ಮ ಪ್ರತಿಭಟನೆ ಹತ್ತಿಕ್ಕಲು ಮುಂದಾಗಿರುವುದು ಸರಿಯಲ್ಲ ಎಂದು ಕಿಡಿಕಾರಿದರು.


ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಪ್ರತಿಭಟನೆ ನಡೆಸಲು ನಮ್ಮ ಇಲಾಖೆಯಿಂದ ಯಾವುದೇ ತಕರಾರಿಲ್ಲ. ಆದರೆ, ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಬಿಡುವುದಿಲ್ಲ. ಇದರಿಂದ ಘರ್ಷಣೆ ಉಂಟಾಗುವ ಸಾಧ್ಯತೆ ಇದೆ. ಆದ್ದರಿಂದ ತಾವು ಇಲ್ಲಿಯೇ ಪ್ರತಿಭಟನೆ ನಡೆಸಿ ತೆರಳಬೇಕು ಎಂದರು.

ಆದರೂ ಪ್ರತಿಭಟನಾಕಾರರು ಬ್ಯಾರಿಕೇಡ್ ತೆರವುಗೊಳಿಸಿ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದಾಗ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ, ಬಳಿಕ ಬಿಡುಗಡೆಗೊಳಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು, ತೋಟೇಶ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಮೋಹನ್ ನಗು, ಜಿಲ್ಲಾ ಕಾಂಗ್ರೆಸ್‌ನ ಮಾಧ್ಯಮ ಕಾರ್ಯದರ್ಶಿ ರಾಜೇಶ್, ಮುಖಂಡರಾದ ಚೇತನ್ ದೊರೆ, ರಮೇಶ್, ನಂಜುಂಡಸ್ವಾಮಿ ಇತರರಿದ್ದರು.

ಬಿಜೆಪಿ ಕಚೇರಿಗೆ ಮುತ್ತಿಗೆ ಯತ್ನ ಖಂಡಿಸಿ ಪ್ರತಿಭಟನೆ

ಚಾಮರಾಜನಗರ, ಡಿ.18– ಕಾಂಗ್ರೆಸ್ ಕಾರ್ಯಕರ್ತರು ನಗರದ ಜಿಲ್ಲಾ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಘಟನೆ ಖಂಡಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ರಾಮಸಮುದ್ರದ ಕುಲುಮೆ ರಸ್ತೆಯಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಮುತ್ತಿಗೆ ಹಾಕಲು ಯತ್ನಿಸಿದ್ದನ್ನು ಬಿಜೆಪಿ ಪದಾಧಿಕಾರಿಗಳು ತೀವ್ರವಾಗಿ ಖಂಡಿಸಿ ಕಚೇರಿ ಮುಂಭಾಗ ಆಕ್ರೋಶ ವ್ಯಕ್ತಪಡಿಸಿದರು.


ಜಿಲ್ಲಾ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಘಟನೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.


ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮಾತನಾಡಿ, ರಾಜ್ಯದ ಮುಖ್ಯಮಂತ್ರಿಗಳು, ಸಚಿವರು ಪರ್ಸಂಟೇಜ್ ಆಧಾರದ ಮೇಲೆ ಸರ್ಕಾರ ನಡೆಸುತ್ತಿದ್ದಾರೆ. ಇದರ ವಿರುದ್ಧ ಕಾಂಗ್ರೆಸ್ಸಿಗರು ಹೋರಾಟ ಮಾಡಬೇಕೇ ಹೊರತು ಬಿಜೆಪಿ ವಿರುದ್ಧ ಅಲ್ಲ. ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇಲಾಖೆಗಳಲ್ಲಿ ಸಾರ್ವಜನಿಕರ ಕೆಲಸಗಳು ಆಗುತ್ತಿಲ್ಲ. ಹೀಗಾಗಿ ನೀವು ಮುತ್ತಿಗೆ ಹಾಕಬೇಕಾಗಿರುವುದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರ ವಿರುದ್ಧ ಎಂದರು.

ತಮ್ಮ ಸರ್ಕಾರದ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಕಾಂಗ್ರೆಸ್‌ನವರು ಬಿಜೆಪಿ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾರೆ. ನಿಮ್ಮ ಪಕ್ಷದ ಜನಪ್ರತಿನಿಧಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಇದಕ್ಕೆ ಜನಸಾಮಾನ್ಯರು ಬಲಿಯಾಗುತ್ತಿದ್ದಾರೆ. ಈ ಬಗ್ಗೆ ನಮ್ಮ ಪಕ್ಷದ ನಾಯಕರು ಸದನದೊಳಗೆ ಪ್ರಶ್ನೆ ಮಾಡಿದ್ದಾರೆ. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ 5 ಸಾವಿರ ಕೋಟಿ ಉಳಿತಾಯವಾಗಿದೆ. ಇಲ್ಲದಿದ್ದರೇ ಹಣ ದುರುಪಯೋಗವಾಗುತ್ತಿತ್ತು ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ನಟರಾಜು, ರೇವಣ್ಣ, ಬಸವಣ್ಣ, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಶಾಂತಮೂರ್ತಿ, ನಗರಸಭಾ ಮಾಜಿ ಉಪಾಧ್ಯಕ್ಷೆ ಮಮತ, ಶಿವಣ್ಣ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಅನಿಲ್, ಲೋಕೇಶ್ ಜತ್ತಿ, ಎಸ್‌ಪಿ ಮೋರ್ಚಾ ಅಧ್ಯಕ್ಷ ಚಂದ್ರಶೇಖರ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಮುತ್ತಿಗೆಮೂರ್ತಿ, ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಚಂದ್ರ, ಶಿವಣ್ಣ, ಕೂಸಣ್ಣ, ಮಹೇಶ್, ಬಂಗಾರನಾಯಕ ಇದ್ದರು.

ಅರಣ್ಯ ಇಲಾಖೆ ಮಿಂಚಿನ ಕಾರ್ಯಾಚರಣೆ: ಹುಲಿ ಸೆರೆ

ಕೂಂಬಿಂಗ್ ಸ್ಪೆಷಲಿಸ್ಟ್‌ಗಳಾದ ಮಾಸ್ತಿ, ಕಂಜನ್, ಪ್ರಶಾಂತ್ ಸಾಕಾನೆಗಳು ಭಾಗಿ


ಬೋನಿನಲ್ಲಿ ಹುಲಿ ಸೆರೆಯಾಗಿರುವುದು.

ಗುಂಡ್ಲುಪೇಟೆ: ಕಳೆದೊಂದು ವರ್ಷದಿಂದ ಉಪಟಳ ನೀಡುತ್ತಿದ್ದ ಹುಲಿ ಅರಣ್ಯ ಇಲಾಖೆ ಮಿಂಚಿನ ಕಾರ್ಯಾಚರಣೆಗೆ ಸೆರೆಯಾಗಿದೆ.

ತಾಲೂಕಿನ ಬೊಮ್ಮಲಾಪುರ ಸುತ್ತಮುತ್ತಲ ಗ್ರಾಮಗಳಲ್ಲಿ ಜನಜಾನುವಾರುಗಳ ಮೇಲೆ ದಾಳಿ ಮಾಡುತ್ತಿದ್ದ 4 ವರ್ಷದ ಗಂಡು ಹುಲಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿ ಸೆರೆ ಹಿಡಿದಿದ್ದು, ಇದರಿಂದಾಗಿ ಈ ಭಾಗದ ರೈತರು ಸಂತಸಗೊಂಡಿದ್ದಾರೆ.

ಕಳೆದೊಂದು ವರ್ಷದಿಂದ ಹುಲಿ ರೈತರ ಜಮೀನುಗಳಲ್ಲಿ ಮೇಯುತ್ತಿದ್ದ ಜಾನುವಾರುಗಳ ಮೇಲೆ ದಾಳಿ ನಡೆಸಿ ಬಲಿ ಪಡೆಯುತ್ತಿತ್ತು. ಹುಲಿ ಸೆರೆಗೆ ಅರಣ್ಯ ಇಲಾಖೆ ಬೋನು ಅಳವಡಿಸಿದ್ದರೂ ಚಾಲಾಕಿ ಹುಲಿ ಅತ್ತ ಸುಳಿಯದೆ ಚಳ್ಳೆ ಹಣ್ಣು ತಿನ್ನಿಸಿತ್ತು. ಇದರಿಂದ ಆಕ್ರೋಶಗೊಂಡ ಗ್ರಾಮಸ್ಥರು ಹುಲಿ ಸೆರೆಗೆ ಒತ್ತಾಯಿಸಿ ಅರಣ್ಯ ಸಿಬ್ಬಂದಿಯನ್ನು ಬೋನಿನೊಳಗೆ ಕೂಡಿ ಹಾಕಿದ್ದ ಘಟನೆ ರಾಜ್ಯಾದ್ಯಂತ ಸುದ್ದಿ ಮಾಡಿತ್ತು.

ಅರಣ್ಯ ಇಲಾಖೆ ಮತ್ತು ರೈತರ ಸಂಘರ್ಷಕ್ಕೆ ಕಾರಣವಾಗಿದ್ದ ಈ ಹುಲಿ ಹಲವು ಪೊದೆಗಳು ಮತ್ತು ಬೀಳು ಜಮೀನಿನಲ್ಲಿ ಅರಣ್ಯ ಇಲಾಖೆ ಅಳವಡಿಸಿದ್ದ ಯಾವ ಕ್ಯಾಮರಾಗಳಲ್ಲಿಯೂ ಅದರ ಚಲನ ವಲನ ದಾಖಲಾಗಿರಲಿಲ್ಲ. ಆದರೆ 3 ದಿನಗಳ ಹಿಂದೆ ಜಾನುವಾರು ಕಳೇಬರ ಎಳೆದೊಯ್ಯಲು ಬಂದಾಗ ಆ ದೃಶ್ಯಗಳು ಕ್ಯಾಮರಾದಲ್ಲಿ ಸೆರೆಯಾಗಿತ್ತು. ಇದನ್ನು ಗಮನಿಸಿದ ಅರಣ್ಯ ಇಲಾಖೆ ಸಿಬ್ಬಂದಿಗಳು ತಕ್ಷಣ ಕಾರ್ಯಾಚರಣೆ ನಡೆಸಿ ಹುಲಿ ಸೆರೆ ಹಿಡಿದಿದ್ದಾರೆ.

ಬುಧವಾರ ಸಂಜೆ ಡ್ರೋಣ್ ಕ್ಯಾಮರಾ ಮೂಲಕ ಗ್ರಾಮದ ಸಮಾಧಿ ಮಾಳದ ಬಳಿ ಪೊದೆಯಲ್ಲಿ ಅಡಗಿದ್ದ ಹುಲಿ ಇರುವಿಕೆಯನ್ನು ಪತ್ತೆಹಚ್ಚಿ ದುಬಾರೆ ಶಿಬಿರದಿಂದ ಕೂಂಬಿಂಗ್ ಸ್ಪೆಷಲಿಸ್ಟ್‌ಗಳಾದ ಮಾಸ್ತಿ, ಕಂಜನ್, ಪ್ರಶಾಂತ್ ಸಾಕಾನೆಗಳನ್ನು ತರಿಸಿ ರಾತ್ರಿ 11 ಗಂಟೆಗೆ ಕೂಂಬಿಂಗ್ ಆರಂಭಿಸಲಾಯಿತು. ವಾಹನಗಳು ಹಾಗೂ ಆನೆಗಳ ಚಲನೆಯಿಂದ ಎಚ್ಚೆತ್ತ ಹುಲಿ ಅತ್ತಿತ್ತ ಹೋಗದಂತೆ ಸಿಬ್ಬಂದಿ ಪಟಾಕಿ ಸಿಡಿಸಿ ಮೂರು ದಿಕ್ಕುಗಳಿಂದ ಆನೆಗಳಿಂದ ಸುತ್ತುವರೆಯಲಾಯಿತು. ಈ ವೇಳೆ ಪಶುವೈದ್ಯರಾದ ಡಾ.ರಮೇಶ್, ಡಾ.ಮಿರ್ಜಾ ವಾಸಿಂ ಅವರ ನಿರ್ದೇಶನದ ಮೇರೆಗೆ ಶಾರ್ಪ್ ಶೂಟರ್‌ಗಳು ಹಾರಿಸಿದ ಅರಿವಳಿಕೆಯಿಂದ ಪ್ರಜ್ಞೆ ತಪ್ಪಿದ ಹುಲಿಯನ್ನು ಸಿಬ್ಬಂದಿ ಬೋನಿಗೆ ಸ್ಥಳಾಂತರಿಸಿದರು.


ಕಾರ್ಯಾಚರಣೆಗೆ ಆಗಮಿಸಿದ ಸಾಕಾನೆಗಳು.

ಕಾರ್ಯಾಚರಣೆಗೆ ತೊಂದರೆಯಾಗದಂತೆ ಜಿಲ್ಲಾಧಿಕಾರಿಗಳು ಸೆಕ್ಷನ್ 144 ಜಾರಿಗೊಳಿಸಿದ್ದರು. ಪಟ್ಟಣದ ಠಾಣೆ ಸಿಪಿಐ ಎನ್.ಜಯಕುಮಾರ್ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ತಹಸೀಲ್ದಾರ್ ಎಂ.ಎಸ್.ತನ್ಮಯ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಎಸ್.ಪ್ರಭಾಕರನ್ ಮತ್ತು ಸಿಬ್ಬಂದಿ ಹಾಗೂ ಎಸ್‌ಟಿಪಿಎಫ್ ಸಿಬ್ಬಂದಿ ನೇತೃತ್ವದಲ್ಲಿ ಹೆಡಿಯಾಲ ಹಾಗೂ ಬಂಡೀಪುರ ಉಪವಿಭಾಗಗಳ ಅರಣ್ಯ ನೌಕರರು ಸೇರಿದಂತೆ ಸುಮಾರು 100ಕ್ಕೂ ಹೆಚ್ಚಿನ ಸಿಬ್ಬಂದಿ ಹಾಗೂ ಇತರರು ಭಾಗವಹಿಸಿದ್ದರು.

"2017ರಲ್ಲಿ ಬಂಡೀಪುರದ ಕುಂದಕೆರೆ ವಲಯಕ್ಕೆ ಬೆಂಕಿ ಬಿದ್ದ ವೇಳೆ ಅರಣ್ಯದಿಂದ ಹೊರಬಂದಿದ್ದ ಹುಲಿ ಬಫರ್ ವಲಯದಲ್ಲಿ ಬೀಡು ಬಿಟ್ಟು ತನ್ನ ಸಂತತಿಯನ್ನು 5ಕ್ಕೆ ಹೆಚ್ಚಿಸಿಕೊಂಡಿತ್ತು. ಇವು ಕಳೆದ ಮೂರ್‍ನಾಕು ವರ್ಷಗಳಿಂದ ತಮ್ಮ ಮರಿಗಳೊಂದಿಗೆ ತಾಲೂಕಿನ ಹುಂಡೀಪುರ, ಬೊಮ್ಮಲಾಪುರ, ಸೋಮನಪುರ, ತ್ರಿಯಂಬಕಪುರ, ಮಲ್ಲಮ್ಮನಹುಂಡಿ, ಕೆಲಸೂರು, ಪಡಗೂರು, ಕಲ್ಲಳ್ಳಿ ಸುತ್ತಮುತ್ತ ಸಂಚರಿಸಿ ನೂರಾರು ಜಾನುವಾರುಗಳನ್ನು ಬಲಿ ಪಡೆದು ರೈತರಲ್ಲಿ ಭೀತಿ ಹುಟ್ಟಿಸಿದ್ದವು. ನ.10ರಂದು ಪಡಗೂರು ಸಮೀಪ ಮೂರು ಮರಿಗಳೊಂದಿಗೆ ತಾಯಿ ಹುಲಿ ಸೆರೆ ಹಿಡಿಯಲಾಗಿತ್ತು. ಇದೀಗ ಮತ್ತೊಂದು ಹುಲಿಯನ್ನು ಸೆರೆ ಹಿಡಿಯಲಾಗಿದೆ. ಬೊಮ್ಮಲಾಪುರದಲ್ಲಿ ಸೆರೆ ಹಿಡಿಯಲಾದ ಹುಲಿ ಆರೋಗ್ಯ ಗಮನಿಸಲಾಗುತ್ತಿದ್ದು, ಪಶು ವೈದ್ಯರು ಹಾಗೂ ಅಧಿಕಾರಿಗಳ ಸಲಹೆ ಮೇರೆಗೆ ಕಾಡಿಗೆ ಬಿಡಲಾಗುವುದು.

– ಎಸ್.ಪ್ರಭಾಕರನ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ.

ಅಪ್ರೆಂಟಿಸ್ ತರಬೇತಿಗೆ ಪ.ಜಾತಿ, ಪ.ಪಂಗಡದ ಪತ್ರಿಕೋದ್ಯಮ ಪದವೀಧರರಿಂದ ಅರ್ಜಿ ಆಹ್ವಾನ

ಚಾಮರಾಜನಗರ, ಡಿ.18– ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ 2025–26ನೇ ಸಾಲಿಗೆ ಚಾಮರಾಜನಗರ ಜಿಲ್ಲಾ ಕಚೇರಿಯಲ್ಲಿ ಮಾಧ್ಯಮ ಹಾಗೂ ಕ್ಷೇತ್ರ ಪ್ರಚಾರ ಕುರಿತ ಒಂದು ವರ್ಷ ಅವಧಿಯ ಅಪ್ರೆಂಟಿಸ್ ತರಬೇತಿಗೆ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಪ.ಜಾತಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ 2026ರ ಜನವರಿಯಿಂದ ಡಿಸೆಂಬರ್‌ವರೆಗೆ ತರಬೇತಿ ನೀಡಲಿದ್ದು, ಚಾಮರಾಜನಗರ ವಾರ್ತಾ ಇಲಾಖೆ ಜಿಲ್ಲಾ ಕಚೇರಿಗೆ ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿದ ತಲಾ ಓರ್ವ ಸಿಬ್ಬಂದಿಯನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ತರಬೇತಿ ಅವಧಿಯಲ್ಲಿ ತಿಂಗಳಿಗೆ ಅಭ್ಯರ್ಥಿಗೆ 15 ಸಾವಿರ ರೂ. ಭತ್ಯೆ ನೀಡಲಾಗುತ್ತದೆ.

ಅಭ್ಯರ್ಥಿಗಳು 35 ವರ್ಷ ಮೀರಿರಬಾರದು. ಪದವಿ/ಸ್ನಾತಕೋತ್ತರ ಅಂತಿಮ ವರ್ಷದ ಪದವಿ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು. ಅಂಕಪಟ್ಟಿ ನಿರೀಕ್ಷಿಸಿ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಅರ್ಜಿ ಭರ್ತಿ ಮಾಡಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ ಜನ್ಮ ದಿನಾಂಕಕ್ಕೆ ಸಂಬಂಧಿಸಿದ ಪ್ರಮಾಣ ಪತ್ರ, ಪದವಿ/ಸ್ನಾತಕೋತ್ತರ ಪದವಿ ಅಂಕಪಟ್ಟಿ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ಪಾಸ್‌ಪೋರ್ಟ್ ಅಳತೆ ಇತ್ತೀಚಿನ ಭಾವಚಿತ್ರ, ಇನ್ನಿತರ ಪೂರಕ ದಾಖಲೆಗಳು, ಪ್ರಮಾಣ ಪತ್ರದ ನಕಲನ್ನು ದೃಢೀಕರಿಸಿ ಡಿ.24ರೊಳಗೆ ಹಿರಿಯ ಸಹಾಯಕ ನಿರ್ದೇಶಕರು, ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾಭವನ, ಜಿಲ್ಲಾ ಆಡಳಿತ ಭವನದ ಆವರಣ, ಬಿ.ರಾಚಯ್ಯ ಜೋಡಿರಸ್ತೆ, ಚಾ.ನಗರ–571313 ಇಲ್ಲಿಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಹದೇವಮ್ಮ ನಿಧನ



ಆಲೂರು, ಡಿ.18– ಚಾಮರಾಜನಗರ ತಾಲೂಕಿನ ಆಲೂರು ನಿವಾಸಿ ದಿ.ಎ.ಎಸ್.ಪುಟ್ಟಲಿಂಗಪ್ಪರವರ ಪತ್ನಿ ಮಹದೇವಮ್ಮ (80) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಟ್ರೈಲರ್ 25 ಮಿಲಿಯನ್ ವೀಕ್ಷಣೆ

ಇತ್ತೀಚೆಗಷ್ಟೇ ರಿಲೀಸಾದ ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಅಭಿನಯದ ಬಹುನಿರೀಕ್ಷಿತ 45 ಚಿತ್ರದ ಟ್ರೈಲರ್ 25 ಮಿಲಿಯನ್ ವೀಕ್ಷಣೆಯಾಗುವ ಮೂಲಕ ವೈರಲ್ ಆಗುತ್ತಿದೆ. ಅರ್ಜುನ್ ಜನ್ಯ ಅವರ ಪ್ರಥಮ ನಿರ್ದೇಶನದ ಈ ಚಿತ್ರದ ಟ್ರೈಲರ್‌ನಲ್ಲಿ ಸಾಕಷ್ಟು ಅಂಶಗಳಿದ್ದು ಕುತೂಹಲ ಕೆರಳಿಸಿದೆ

ಈ ಚಿತ್ರದಲ್ಲಿ ಶಿವಣ್ಣ ಅವರು ಎರಡು ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದು, ಅದರಲ್ಲೂ 'ಚೆಲುವೆಯ ನೋಟ ಚೆನ್ನ' ಸಾಂಗ್ ಪ್ಲೇ ಆಗುವಾಗ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ಆಭರಣ ಸುಂದರಿಯಾಗಿ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಳ್ಳುವ ಶಿವಣ್ಣ ಅವರ ಲುಕ್ ಬಗ್ಗೆಯೇ ಈಗ ಅತಿ ಹೆಚ್ಚು ಚರ್ಚೆಯಾಗುತ್ತಿದೆ. ಇನ್ನು ಉಪೇಂದ್ರ ಕೂಡ ತನ್ನ ಎಂದಿನ ಸ್ಟೈಲ್ ಮೂಲಕ ಗಮನ ಸೆಳೆಯುತ್ತಾರೆ.

'45' ಟ್ರೈಲರ್ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಟ್ರೆಂಡಿಂಗ್‌ನಲ್ಲಿದೆ. ಬೇರೆ ಭಾಷೆಗಳಲ್ಲೂ ಸಹ ಚಿತ್ರದ ಟ್ರೈಲರ್‌ಗೆ ದೊಡ್ಡಮಟ್ಟದ ಪ್ರತಿಕ್ರಿಯೆ ಸಿಗುತ್ತಿದೆ. ಈ ಚಿತ್ರವನ್ನು ಸೂರಜ್ ಪ್ರೊಡಕ್ಷನ್ಸ್ ಅಡಿಯಲ್ಲಿ ಶ್ರೀಮತಿ ಉಮಾ ರಮೇಶ್ ರೆಡ್ಡಿ ಅವರು ನಿರ್ಮಿಸಿದ್ದಾರೆ. 45 ಅಂದರೆ ಅದು ದಿನ, ನಿಮಿಷ ಏನಾದರೂ ಆಗಬಹುದು. ಈ ಚಿತ್ರಕ್ಕೆ ವೆಲ್‌ಕಮ್ ಟು ದ ವರ್ಲ್ಡ್ ಆಫ್ 45 ಎಂಬ ಅಡಿಬರಹವಿದೆ.

ಸಿನಿಮಾ ವೀಕ್ಷಿಸುವವರಿಗೆ ಒಂದು ಹೊಸ ವಿಸ್ಮಯ ಜಗತ್ತನ್ನು ನೋಡಿದ ಅನುಭವ ಆಗಲಿದೆ. ಕನ್ನಡ, ತಮಿಳು, ತೆಲುಗು ಹಾಗೂ ಮಲಯಾಳಂನಲ್ಲಿ ಡಿ.25 ರಂದು ಚಿತ್ರ ರಿಲೀಸಾಗಲಿದೆ. ಆದರೆ ಹಿಂದಿಯಲ್ಲಿ ಮಾತ್ರ ಒಂದು ವಾರದ ನಂತರ ಬಿಡುಗಡೆಯಾಗುತ್ತದೆ ಎಂದು ನಿರ್ದೇಶಕ ಅರ್ಜುನ್ ಜನ್ಯ ಅವರು ಹೇಳಿದ್ದಾರೆ.

ಇದೊಂದು ಫ್ಯಾಂಟಸಿ ಚಿತ್ರ ಅನ್ನಬಹುದು. ಆದರೆ ಸಂಪೂರ್ಣವಾಗಿ ಫ್ಯಾಂಟಸಿ ವಿಭಾಗಕ್ಕೆ ಸೇರಿಕೊಳ್ಳುವುದಿಲ್ಲ. ಫ್ಯಾಂಟಸಿ ಜೊತೆಗೆ ಲಾಜಿಕ್ ಕೂಡ ಚಿತ್ರದಲ್ಲಿದೆ. ಮೂವರು ನಾಯಕರ ಅಭಿಮಾನಿಗಳಿಗೆ ಎಲ್ಲೂ ಸಹ ಬೇಜಾರಾಗದಂತೆ ಅರ್ಜುನ್ ಜನ್ಯ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಗ್ರಾಫಿಕ್ಸ್‌ಗೆಂದೇ ಸಾಕಷ್ಟು ಖರ್ಚು ಮಾಡಿ 45 ಚಿತ್ರವನ್ನು ನಿರ್ಮಿಸಿದ್ದೇವೆ ಎನ್ನುತ್ತಾರೆ ನಿರ್ಮಾಪಕ ರಮೇಶ್ ರೆಡ್ಡಿ.



ಬಲರಾಮನ ದಿನಗಳು
ಆಡಿಯೋಗೆ ಬಂಪರ್ ಬೆಲೆ

ಆ ದಿನಗಳು ಖ್ಯಾತಿಯ ಕೆ.ಎಂ.ಚೈತನ್ಯ ಅವರ ನಿರ್ದೇಶನದ ಮತ್ತೊಂದು ಚಿತ್ರ ಬಲರಾಮನ ದಿನಗಳು. ವಿನೋದ್ ಪ್ರಭಾಕರ್, ಪ್ರಿಯಾ ಆನಂದ್ ನಟನೆಯ ಈ ಚಿತ್ರದ ಶುರು ಶುರು ಎಂಬ ಮೆಲೋಡಿ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಪದ್ಮಾವತಿ ಜಯರಾವ್ ಮತ್ತು ಶ್ರೇಯಸ್ ನಿರ್ಮಾಣದ ಈ ಚಿತ್ರಕ್ಕೆ ಸಂತೋಷ್ ನಾರಾಯಣನ್ ಸಂಗೀತ ಸಂಯೋಜಿಸಿದ್ದಾರೆ. ಸಂಚಿತ್ ಹೆಗ್ಡೆ ಹಾಗೂ ಪುಣ್ಯ ಧ್ವನಿ ನೀಡಿರುವ ಈ ಹಾಡಿಗೆ ಜಯಂತ್ ಕಾಯ್ಕಿಣಿ ಸಾಹಿತ್ಯ ರಚಿಸಿದ್ದಾರೆ.

ನಿರ್ದೇಶಕ ಕೆ.ಎಂ.ಚೈತನ್ಯ ಮಾತನಾಡುತ್ತಾ, ಇದು ಆ ದಿನಗಳು ಚಿತ್ರದ ಎರಡನೇ ಭಾಗವಲ್ಲ. ಅದರ ಮತ್ತೊಂದು ಅಧ್ಯಾಯ. ಇದೊಂದು ಕಲ್ಟ್ ಕ್ಲಾಸಿಕ್ ಚಿತ್ರವಾಗಿದ್ದು, 80ರ ದಶಕದ ಕಥೆಯನ್ನು ಇಲ್ಲಿ ಹೇಳುತ್ತಿದ್ದೇವೆ. ಚಿತ್ರವೀಗ ರಿಲೀಸಿಗೆ ಸಿದ್ದವಾಗಿದೆ. ಬಲರಾಮನ ದಿನಗಳು ಕಾಲ್ಪನಿಕ ಕಥೆ. ಒಮ್ಮೆ ಶ್ರೇಯಸ್ ಆ ದಿನಗಳು ಥರದ ಒಂದು ಕಥೆಯನ್ನು ವಿನೋದ್ ಪ್ರಭಾಕರ್ ಅವರಿಗೆ ಮಾಡಿ ಎಂದರು. ಜಿಗರ್‌ಥಂಡಾದಲ್ಲಿ ಸಂತೋಷ್ ನಾರಾಯಣನ್ ಅವರ ಸಂಗೀತ ನನ್ನ ಗಮನ ಸೆಳೆದಿತ್ತು. ಅವರ ಹೆಸರನ್ನು ಹೇಳಿದಾಗ ವಿನೋದ್, ಶ್ರೇಯಸ್ ಇಬ್ಬರೂ ಒಪ್ಪಿದರು. ಛಾಯಾಗ್ರಾಹಕ ಎಚ್.ಸಿ.ವೇಣು ಅದ್ಭುತವಾಗಿ ಸನ್ನಿವೇಶಗಳನ್ನು ಸೆರೆ ಹಿಡಿದಿದ್ದಾರೆ ಎಂದರು.

ನಟ ವಿನೋದ್ ಪ್ರಭಾಕರ್ ಮಾತನಾಡಿ, ಬಲರಾಮನ ದಿನಗಳು ಚಿತ್ರಕ್ಕೆ ಟಿಸೀರೀಸ್ ಆಡಿಯೋ ಕಂಪನಿ ಗರಿಷ್ಠ ಮೊತ್ತ ನೀಡಿದೆ. ನನ್ನ 25 ಚಿತ್ರಗಳಲ್ಲಿ ಅತಿ ಹೆಚ್ಚು ಮೊತ್ತಕ್ಕೆ ಆಡಿಯೋ ಸೇಲಾದ ಮೊದಲ ಚಿತ್ರ ಎಂದರು. ನಾಯಕಿ ಪ್ರಿಯಾ ಆನಂದ್ ಮಾತನಾಡಿ, ನಾನು ಕನ್ನಡ ಕಲಿಯಲು ಪುನೀತ್ ರಾಜ್‌ಕುಮಾರ್ ಕಾರಣ. ಭಾಷೆ ಗೊತ್ತಿದ್ದರೆ ಸನ್ನಿವೇಶಗಳಲ್ಲಿ ಸುಲಭವಾಗಿ ನಟಿಸಲು ಸಾಧ್ಯವಾಗುತ್ತದೆ ಎಂದಿದ್ದರು. ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂದರು. ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಮಾತನಾಡಿ, ನಾನು ಸುಮಾರು ಚಿತ್ರಗಳಿಗೆ ಸಂಗೀತ ಮಾಡಿದ್ದೇನೆ. ಆದರೆ ಇದು ನನ್ನ 10 ಪ್ರಮುಖ ಹಾಡುಗಳಲ್ಲಿ ಒಂದಾಗಲಿದೆ ಎಂದರು.

ತಾಯಿ ಬರೆದ ಪ್ರೇಮಕಥೆಗೆ ಮಗನೇ ನಾಯಕ!

ವಿಭಿನ್ನವಾದ ಪ್ರೇಮಕಥೆಯನ್ನು ಮನರಂಜನಾತ್ಮಕವಾಗಿ ನಿರೂಪಿಸಿರುವ ಚಿತ್ರ ಪ್ರೇಮಿ. ಪ್ರದೀಪ್ ವರ್ಮ ಅವರ ನಿರ್ದೇಶನವಿರುವ ಈ ಚಿತ್ರದ 'ಮನಸ್ಸು ಏನೋ ಕಾಡಿದೆ' ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ನಡೆಯಿತು. ನಿಖಿಲ್‌ರಾಜ್ ಶೆಟ್ಟಿ ರಚನೆಯ ಈ ಹಾಡಿಗೆ ಪ್ರದೀಪ್ ವರ್ಮ ಅವರೇ ಸಂಗೀತ ಸಂಯೋಜನೆ ಮಾಡಿದ್ದಾರೆ.

ನಿರ್ಮಾಪಕ ಸಿದ್ದಲಿಂಗಯ್ಯ ಅವರ ಪುತ್ರ ಅದ್ವಿಕ್ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಅದ್ವಿಕ್ ತಾಯಿ ಅಕ್ಕ ಮಹಾದೇವಿ ಚಿತ್ರದ ಕಥೆ ಬರೆದಿದ್ದಾರೆ. ಮಗನ ಕನಸಿಗೆ ತಂದೆ, ತಾಯಿ ಇಬ್ಬರೂ ಬೆನ್ನೆಲುಬಾಗಿ ನಿಂತಿದ್ದಾರೆ. ಅಕ್ಕ ಮಹಾದೇವಿ ಲೇಖಕಿ ಟಿ.ಗಿರಿಜಾ ಅವರ ಸಹೋದರಿ.

ಪ್ರದೀಪ್ ವರ್ಮ ಮಾತನಾಡುತ್ತಾ, ನೈಜ ಪ್ರೇಮ ಕಥೆಯನ್ನಾಧರಿಸಿ ಈ ಚಿತ್ರಕಥೆ ಮಾಡಿದ್ದೇನೆ. ಇದರಲ್ಲಿ ಪ್ರೇಮ ಕಥೆಯೇ ಪ್ರಧಾನವಾದರೂ, ಜ್ಯೋತಿಷ್ಯದ ಕಂಟೆಂಟ್ ಜತೆಗೆ ನೋಡುಗರಿಗೆ ಬೇಕಾದ ಎಲ್ಲಾ ಮನರಂಜನಾತ್ಮಕ ಅಂಶಗಳೂ ಇವೆ. ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಮೊದಲ ಹಾಡು ಬಿಡುಗಡೆಯಾಗಿದೆ. ನಿರ್ದೇಶನದ ಜೊತೆಗೆ ಖಳನಾಯಕನಾಗೂ ಅಭಿನಯಿಸಿದ್ದೇನೆ ಎಂದರು.


ನಾಯಕ ಅದ್ವಿಕ್ ಮಾತನಾಡುತ್ತಾ, ಬಾಲ್ಯದಿಂದಲೂ ನಟನಾಗಬೇಕೆಂಬ ಕನಸನ್ನು ನನ್ನ ತಂದೆ, ತಾಯಿ ಈಡೇರಿಸಿದ್ದಾರೆ. ಒಂದೊಳ್ಳೆ ಚಿತ್ರವಾಗಿ 'ಪ್ರೇಮಿ' ಮೂಡಿಬಂದಿದೆ. ಸದ್ಯದಲ್ಲೇ ಟ್ರೇಲರ್ ರಿಲೀಸ್ ಮಾಡಲಿದ್ದೇವೆ ಎಂದರು.

ನಾಯಕನ ತಾಯಿ ಹಾಗೂ ಕಥೆಗಾರ್ತಿ ಅಕ್ಕ ಮಹಾದೇವಿ ಮಾತನಾಡುತ್ತಾ, ನಾನು ವೃತ್ತಿಯಲ್ಲಿ ಶಿಕ್ಷಕಿ. ನಾನು ಬರೆದ ಕಥೆಗಳಲ್ಲಿ ಪ್ರೇಮಕಥೆಗಳೆ ಹೆಚ್ಚು. ಇದು ನೈಜ ಘಟನೆಯನ್ನಾಧರಿಸಿ ಬರೆದ ಕಥೆ. ಅದೀಗ ಸಿನಿಮಾ ಆಗುತ್ತಿರುವುದು, ಅದರಲ್ಲಿ ನನ್ನ ಮಗನೇ ನಾಯಕನಾಗಿರುವುದು ಖುಷಿಯಾಗಿದೆ ಎಂದರು.

ನಾನು ಹೋಟೆಲ್ ಉದ್ಯಮಿ. ಸಿನಿಮಾ ರಂಗ ಹೊಸತು. ಮಗನಿಗಾಗಿ ಈ ಸಿನಿಮಾ ಮಾಡಿರುವುದಾಗಿ ನಿರ್ಮಾಪಕ ಸಿದ್ದಲಿಂಗಯ್ಯ ಹೇಳಿದರು. ನಾಯಕಿಯ ಪಾತ್ರ ನಿರ್ವಹಿಸಿರುವ ನಟಿ ಸಾತ್ವಿಕ ಮಾತನಾಡುತ್ತಾ, ಈ ಚಿತ್ರದಲ್ಲಿ ನಾನೊಬ್ಬ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ ಎಂದರು. ಈ ಚಿತ್ರದ ಮತ್ತೊಬ್ಬ ನಾಯಕಿಯಾಗಿ ಶೋಭಿತ ನಟಿಸಿದ್ದಾರೆ.



ಸಿನಿಪದಬಂಧ-607



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ರವಿಚಂದ್ರನ್ ಚಿತ್ರ ಬಿಡಿಸಲು ಕುಂಚ ಹಿಡಿದಿದ್ದಾನೆ 4
3. ರವಿಚಂದ್ರನ್ – ಸುಧಾರಾಣಿ ಅಭಿನಯದ ಚಿತ್ರ 4
6. _ _ ಸಾಗರ 2
7. ಅಜೇಯ ಚಿತ್ರದ ನಾಯಕ ಇಲ್ಲಿ ಅಸ್ತವ್ಯಸ್ತ 3
8. ಕಣ್ಣಿಗೆ ಹೀಗೊಂದು ಪದ 3
9. ಆಪ್ತರಕ್ಷಕ ಚಿತ್ರದ ಹಾಡಿನಲ್ಲಿ ಧರಣಿ ಹೀಗೆ ತಿರುಗಿದೆ 8
10. ಸಂಚು ಚಿತ್ರದ ನಾಯಕಿ 4
16. ಮರದ ನಡುವೆ ಗಂಡು ನವಿಲಿದೆ 3
17. ಗೋಲ್ಡನ್ ಸ್ಟಾರ್ ಚಾಟಿ ಬಳಸಿ ಆಡಿದ ಆಟದಲ್ಲಿ ಗಿರಗಿರನೆ ತಿರುಗಿದೆ 3
18. ಅಜಯ್ ರಾವ್ – ಪೂಜಾಗಾಂಧಿ ಅಭಿನಯದ ಭವ್ಯ ಸ್ಮಾರಕ 5
19. ರಾಘವೇಂದ್ರ ರಾಜಕುಮಾರ್–ನಿವೇದಿತಾ ಜೈನ್ ಅಭಿನಯಕ್ಕೆ ಎಂ.ಎಸ್.ರಾಜಶೇಖರ್ ನಿರ್ದೇಶಕ 4

ಮೇಲಿನಿಂದ ಕೆಳಕ್ಕೆ

1. ಮಾಲಾಶ್ರೀ 'ಸ್ವಪ್ನದರಸಿ' 6
2. 'ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು.... ', ಗೀತೆಯ ಚಿತ್ರ 11
3. ಟಿ.ಪಿ.ವೇಣುಗೋಪಾಲ್ ನಿರ್ದೇಶನದ ಸಿಹಿ ಮಿಲನ 6
4. ಶಿವರಾಜ್‌ಕುಮಾರ್ ದೈವ ಪುತ್ರ 5
5. ಇಲ್ಲಿ ತಲೆ ಕೆಳಗಾಗಿರುವ ಮಗಳ ಗಂಡ ಹೆಂಡತಿಯ ತವರಲ್ಲೇ ಠಿಕಾಣಿ ಹೂಡಿದ್ದಾನೆ 5
11. ವಿಷ್ಣುವಿನ ಹತ್ತು ವೇಷ 5
12. ಮಹಾಚತುರ ಚಿತ್ರದ ನಾಯಕ 5
13. ನಾಗರಹಾವು ಚಿತ್ರದ ಅಂಬಿ ಡೈಲಾಗ್‌ನಲ್ಲಿ ದರ್ಶನ್ ಚಿತ್ರವಿದೆ 4
14. ಸರದ ನಡುವೆ ನಡೆದ ಯುದ್ಧ 3
15. ಕಟ್ಟೆ ರಾಮಚಂದ್ರ ಅವರಿಗಿರುವ ತಿಳುವಳಿಕೆ 3

ಸಿನಿ ಪದಬಂಧ 606ರ ಉತ್ತರ

ಕಾ	ಲ	ಚ	ಕ್ರ		ಮೂ	ರು	ಜ	ನ್ಮ		
ಡಿ		ಳಿ			ಗೂ		ನು		ಪ್ರ	
ನ		ಚ		ತೇ	ರು		ಮ	ರು	ಳ	
ರ	ವ	ಳಿ			ಮ		ದಾ		ಯ	
ಹ		ತಾ	ಯಿ	ಇ	ಲ್ಲ	ದ	ತ	ವ	ರು	
ಸ್ಯ		ಳೆ			ಪ್ಪ				ದ್ರ	
	ಅ	ನು	ಭ	ವ		ಸ		ಆ		
ಸಂ		ಈ		ಸಿ		ತ್ಯ		ಲೆ		ಸು
ಕ	ವ	ಚ		ಷ್ಣ		ಸಂ		ಮ	ತ್ತ	ರ
ಲ್ಪ		ಳಿ		ಸಿಂ	ಹ	ಘ	ರ್ಜ	ನೆ		ಭಿ
	ಜ	ಯ	ಸಿಂ	ಹ		ರ್ಷ				

ವಿಜೇತರು: ಮೈತ್ರಿ ಸುಹಾಸ್, ನಂ.6, 3ನೇ ಕ್ರಾಸ್, ಸಮುದಾಯ ಭವನದ ಹತ್ತಿರ, ಆಲ್ ಬ್ಯಾಂಕರ್ಸ್ ಕಾಲೋನಿ, ಬೋಗಾದಿ, ಮೈಸೂರು-08

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ರಾಯರ ದರ್ಶನ ಭಕ್ತಿಗೀತೆಯ ಆಲ್ಬಂ ಬಿಡುಗಡೆ



ನನಗೆ ರಾಯರ ಮೇಲೆ ಅಪಾರ ಭಕ್ತಿಭಾವ ಮೂಡಲು ನಮ್ಮ ತಾಯಿಯೇ ಕಾರಣ ಎಂದು ನಟ ಜಗ್ಗೇಶ್ ಭಾವುಕರಾಗಿ ಹೇಳಿದರು. ನಟ ರಘುಭಟ್ ಹಾಗೂ ಸುಗುಣಾಭಟ್ ನಿರ್ಮಾಣದ ರಾಯರ ದರ್ಶನ ಭಕ್ತಿಗೀತೆಯ ಆಲ್ಬಂ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಜಗ್ಗೇಶ್, ನಾನು ದೆಹಲಿಯಲ್ಲಿದ್ದಾಗ ಶ್ರೀಗಳು ಕಾಲ್ ಮಾಡಿ ಈ ಕಾರ್ಯಕ್ರಮಕ್ಕೆ ಹೋಗಲು ಆದೇಶಿಸಿದರು. ರಾಯರ ಕೆಲಸ ಅಂದ ಮೇಲೆ ಆಗಲ್ಲ ಎನ್ನುವ ಮಾತೇ ಇಲ್ಲ. ಏಕೆಂದರೆ ನನ್ನ ಉಸಿರೇ ರಾಯರು ಎಂದು ಭಾವುಕರಾಗಿ ಮಾತನಾಡಿದ ಜಗ್ಗೇಶ್, ನಮ್ಮಮ್ಮ ನನಗೆ 500 ರೂ. ಕೊಟ್ಟು ಮೊದಲ ಬಾರಿಗೆ ಮಂತ್ರಾಲಯಕ್ಕೆ ಕಳುಹಿಸಿದ್ದರು. ರಾಯರಿದ್ದಾರೆ ಎಂದು ಮನದಲ್ಲಿ ಬಿತ್ತಿದ್ದರು. ಆನಂತರ ತಮ್ಮ ಜೀವನದಲ್ಲಿ ರಾಯರ ಕರುಣೆಯಿಂದ ಆಗಿರುವ ಬದಲಾವಣೆಯನ್ನು ಮನದಾಳದ ಮಾತುಗಳ ಮೂಲಕ ತೆರೆದಿಟ್ಟ ಜಗ್ಗೇಶ್, ರಾಯರ ದರ್ಶನ ಆಲ್ಬಂ ಸಾಂಗ್‌ಗೆ ಶುಭ ಕೋರಿದರು.

ಈವರೆಗೂ ಯಾರೂ ಹೇಳದ ರಾಯರ ಬಗೆಗಿನ ಕೆಲವು ವಿಷಯಗಳನ್ನು ಈ ಆಲ್ಬಂನಲ್ಲಿ ತೋರಿಸಲಾಗುತ್ತಿದೆ. ಈಗಾಗಲೇ ಅನೇಕ ಸಮಾಜಮುಖಿ ಕಾರ್ಯಗಳಿಂದ ಗುರುತಿಸಿಕೊಂಡಿರುವ ರಘು ಭಟ್ ಇದರ ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಮಂತ್ರಾಲಯದ ಶ್ರೀನಿಧಿ ಕರಣಂ, ರಘು ಭಟ್, ಸುಗುಣ ಭಟ್ ಹಾಗು ಗೀತರಚನೆಕಾರ ನಾಗಾರ್ಜುನ ಶರ್ಮ ಕೂಡ ಉಪಸ್ಥಿತರಿದ್ದರು.

ರಘು ಭಟ್ ಮಾತನಾಡುತ್ತಾ, ಮಂತ್ರಾಲಯದ ಶ್ರೀಸುಬುಧೇಂದ್ರ ತೀರ್ಥರ ಆಶೀರ್ವಾದದೊಂದಿಗೆ ಶ್ರೀಗುರು ರಾಘವೇಂದ್ರ ಸ್ವಾಮಿಗಳ ದಿವ್ಯಚರಿತ್ರೆಯನ್ನು ವಿಶ್ವದಾದ್ಯಂತ ಪಸರಿಸುವ ಧ್ಯೇಯದೊಂದಿಗೆ ರಾಯರ ದರ್ಶನ ಆಲ್ಬಂ ಸಾಂಗ್ ನಿರ್ಮಾಣವಾಗುತ್ತಿದೆ. ಇದೇ ತಿಂಗಳ 23ರಿಂದ ಏಳು ದಿನಗಳ ಕಾಲ ಮಂತ್ರಾಲಯದಲ್ಲಿ ಶ್ರೀಗಳು ಚಿತ್ರೀಕರಣಕ್ಕಾಗಿ ಅವಕಾಶ ನೀಡಿದ್ದಾರೆ. ಅನೇಕ ಸೆಲೆಬ್ರಿಟಿ ಕಲಾವಿದರು ಈ ಹಾಡಿನಲ್ಲಿ ಅಭಿನಯಿಸಲಿದ್ದಾರೆ. ಸಿ.ಆರ್. ಬಾಬಿ ಹಾಗೂ ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಲಿದ್ದಾರೆ. ಫೆಬ್ರವರಿಯಲ್ಲಿ ಮಂತ್ರಾಲಯ ಕ್ಷೇತ್ರದಲ್ಲೇ ರಾಯರ ದರ್ಶನ ಆಲ್ಬಂ ಸಾಂಗ್ ಬಿಡುಗಡೆಯಾಗಲಿದೆ ಎಂದರು.

'ಕುಡುಕ ನನ್ಮಕ್ಳು' ಕುಡುಕರ ಕಥೆ ಹೇಳುವ ಚಿತ್ರ

ಆಸ್ಕರ್ ಕೃಷ್ಣ ನಿರ್ದೇಶನದ ಎಂಟನೇ ಚಿತ್ರ 'ಕುಡುಕ ನನ್ಮಕ್ಳು'. ನಾಗರಭಾವಿಯ ಶ್ರೀವಿದ್ಯಾ ಗಣಪತಿ ದೇವಸ್ಥಾನದಲ್ಲಿ ಈ ಚಿತ್ರದ ಮುಹೂರ್ತ ನೆರವೇರಿತು. ಅರುಣ ಶೆಟ್ಟಿ, ವೈಶಾಲಿ ಮುರಳಿಧರ್ ಕೊಟ್ಟೂರು, ಪಲ್ಲವಿ ಅರುಣ್ ಅಗ್ನಿಹೋತ್ರಿ, ಎಸ್.ಹೆಚ್.ಬಾಬು, ನಿಂಗರಾಜು.ಬಿ, ಲೋಕೇಶ್.ಎಸ್, ಸಿದ್ದಲಿಂಗಯ್ಯ ಮತ್ತು ರವೀಂದ್ರ ನಾಯಕ್ ಇವರೆಲ್ಲರೂ ಸ್ನೇಹಿತ ಆಸ್ಕರ್‌ಕೃಷ್ಣ ಮೇಲಿನ ವಿಶ್ವಾಸದಿಂದ ಚಿತ್ರಕ್ಕೆ ಬಂಡವಾಳ ಹಾಕುತ್ತಿದ್ದಾರೆ.



ಈ ಚಿತ್ರದಲ್ಲಿ ಕಾಮಿಡಿ ಕಿಲಾಡಿಗಳು ಖ್ಯಾತಿಯ ಚಂದ್ರಪ್ರಭ, ವಿನೋದ್ ಗೊಬ್ಬರಗಾಲ, ಮಿಮಿಕ್ರಿ ಗೋಪಿ ಮತ್ತು ಸಚಿನ್ ಪುರೋಹಿತ್ ಇವರುಗಳು ಕುಡುಕರೆಲ್ಲರ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಭಿನ್ನ ಪಾತ್ರದಲ್ಲಿ ನಟಿ ಚೈತ್ರಾ ಕೊಟ್ಟೂರು ನಟಿಸುತ್ತಿದ್ದಾರೆ. ಉಳಿದಂತೆ ಲಯ ಕೋಕಿಲ, ಧರಣಿ, ನಿಸರ್ಗ ಮಂಜುನಾಥ್, ಪ್ರಿಯಾಂಕ, ಮಮತಾ ಚಿತ್ರದಲ್ಲಿದ್ದಾರೆ. ಮಂಜು ಕವಿ ಅವರ ಸಂಗೀತ, ವಿನಯ್ ಗೌಡ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ. ರಿಯಾಲಿಟಿ ಷೋಗಳಿಗೆ ಕಾಮಿಡಿ ಡೈಲಾಗ್ ಬರೆಯುತ್ತಿರುವ ವೆಂಕಟ್ ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಹೆಣೆಯುತ್ತಿದ್ದಾರೆ.

ನಿರ್ದೇಶಕ ಆಸ್ಕರ್ ಕೃಷ್ಣ ಮಾತನಾಡುತ್ತಾ, ನನ್ನ ಹಲವು ವರ್ಷಗಳ ಸ್ನೇಹಿತರೆಲ್ಲ ಸೇರಿ ಈ ಚಿತ್ರ ಮಾಡುತ್ತಿದ್ದಾರೆ. ಒಮ್ಮೆ ಪಾರ್ಟಿ ಮಾಡುವಾಗ ಹುಟ್ಟಿಕೊಂಡ ಕಥೆಯಿದು. ನಾವಿಲ್ಲಿ ಕುಡುಕರನ್ನು ಬಯ್ಯುವುದಿಲ್ಲ. ಡಿಗ್ರೇಡ್ ಮಾಡುವ ಉದ್ದೇಶವೂ ನಮಗಿಲ್ಲ, ಕುಡಿತವನ್ನಿಟ್ಟುಕೊಂಡು ಸಮಾಜಕ್ಕೆ ಸಂದೇಶ ಹೇಳುತ್ತಿದ್ದೇವೆ. ಎಲ್ಲಾ ವಯಸ್ಸಿನ ಕುಡುಕರ ಪ್ರತಿನಿಧಿಗಳಾಗಿ 25, 30, 40 ಹಾಗೂ 45 ವರ್ಷದ ನಾಲ್ಕು ಪಾತ್ರಗಳ ಮೂಲಕ ಈ ಕಥೆ ಹೇಳಿದ್ದೇನೆ. ಇವರೆಲ್ಲ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದರೂ ಸಂಜೆ ವೇಳೆ ಒಟ್ಟಿಗೇ ಸೇರೋದು ಬಾರಲ್ಲಿ. ಆಯಾ ವಯಸ್ಸಿನಲ್ಲಿ ಅವರವರ ಚಿಂತನೆಗಳು, ಅಭಿಪ್ರಾಯಗಳು, ನಡವಳಿಕೆ ಹೇಗಿರುತ್ತೆ? ಕುಡಿತದಿಂದ ಮಾನಸಿಕವಾಗಿ, ದೈಹಿಕವಾಗಿ, ಸಾಮಾಜಿಕವಾಗಿ ಯಾವ ರೀತಿ ಸಮಸ್ಯೆಗಳು ಎದುರಾಗುತ್ತವೆ ಎಂದು ಅರ್ಥಪೂರ್ಣ ಸಂದೇಶದ ಜೊತೆಗೆ ಹೇಳುತ್ತಿದ್ದೇವೆ, ಮಂಡ್ಯ ನೇಟಿವಿಟಿಯಲ್ಲಿ ಕಥೆ ನಡೆಯುತ್ತದೆ. ಜ.2ರಿಂದ ಬೆಂಗಳೂರು, ಮೈಸೂರು ಹಾಗೂ ಮಂಡ್ಯ ಸುತ್ತಮುತ್ತ ಚಿತ್ರೀಕರಣ ನಡೆಸುತ್ತಿದ್ದೇವೆ ಎಂದು ಹೇಳಿದರು, ಉಳಿದಂತೆ ಚಂದ್ರಪ್ರಭ, ವಿನೋದ್ ಗೊಬ್ರಗಾಲ, ಚೈತ್ರಾ ಕೋಟ್ಟೂರು ಹಾಗೂ ಧರಣಿ ತಮ್ಮತಮ್ಮ ಪಾತ್ರಗಳ ಬಗ್ಗೆ ಹೇಳಿಕೊಂಡರು.

ಸಚಿವ ಮಹದೇವಪ್ಪನವರ ಕ್ಷೇತ್ರದ ನರೇಗಾ ಯೋಜನೆಯಲ್ಲಿ ಭಾರೀ ಅಕ್ರಮ

ನೈಜ ಫಲಾನುಭವಿಗಳಿಗೆ ಸೇರಬೇಕಾದ ಕೂಲಿ ಹಣ ನಕಲಿ ಜಾಬ್ ಕಾರ್ಡ್ ಮೂಲಕ ಗಾರ್ಮೆಂಟ್ಸ್, ಪೆಟ್ರೋಲ್ ಬಂಕ್, ಖಾಸಗಿ ಕಂಪನಿಗಳ ಉದ್ಯೋಗಿಗಳು, ಅತಿಥಿ ಶಿಕ್ಷಕರ ಖಾತೆಗಳಿಗೆ ಜಮಾ ಆರೋಪ


ಕೆ.ಟಿ.ಮಧು

ತಿ.ನರಸೀಪುರ, ಡಿ.18– ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರ ಸ್ವ ಕ್ಷೇತ್ರದಲ್ಲಿ ನರೇಗಾ ಯೋಜನೆಯಲ್ಲಿ ಭಾರೀ ಅಕ್ರಮ ನಡೆದಿದ್ದು ನೈಜ ಫಲಾನುಭವಿಗಳಿಗೆ ಸೇರಬೇಕಾದ ಕೂಲಿ ಹಣವನ್ನು ನಕಲಿ ಜಾಬ್ ಕಾರ್ಡ್ ಸೃಷ್ಟಿಸಿ ಉದ್ಯೋಗಸ್ಥರು ಹಾಗೂ ಉಳ್ಳವರ ಖಾತೆಗೆ ಜಮಾ ಮಾಡಲಾಗಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ.

ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸ್ವಕ್ಷೇತ್ರ ತಿ.ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮುತ್ತಲವಾಡಿ ಗ್ರಾಮ ಪಂಚಾಯ್ತಿಯಲ್ಲಿ ನರೇಗಾ ಯೋಜನೆಯಡಿ ಬಡ ಕೂಲಿ ಕಾರ್ಮಿಕರಿಗೆ ಸೇರಬೇಕಾದ ಕೂಲಿ ಹಣ ಪಂಚಾಯ್ತಿ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ದುರುದ್ದೇಶಪೂರಕ ನಡೆಯಿಂದ ಗಾರ್ಮೆಂಟ್ಸ್ ಉದ್ಯೋಗಿಗಳು, ಪೆಟ್ರೋಲ್ ಬಂಕ್, ಖಾಸಗಿ ಕಂಪನಿ ನೌಕರರು, ಸಿಲ್ಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳು,ಅತಿಥಿ ಶಿಕ್ಷಕರ ಖಾತೆಗೆ ಹಣ ಜಮೆ ಮಾಡಲಾಗಿರುವ ಅಕ್ರಮವನ್ನು ಡಾ.ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಕ್ರೀಡಾ–ಕಲಾ ಸಂಘದ ಅಧ್ಯಕ್ಷ ಕೈಯಂಬಳ್ಳಿ ಕೆ.ಟಿ. ಮಧು ಬಹಿರಂಗಪಡಿಸಿದ್ದಾರೆ.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅಕ್ರಮ ಅವ್ಯವಹಾರಗಳನ್ನು ದಾಖಲೆ ಸಮೇತ ಎಳೆ ಎಳೆಯಾಗಿ ಬಿಡಿಸಿಟ್ಟ ಅವರು ನರೇಗಾ ಯೋಜನೆಯಡಿ ಬಡ ಕೂಲಿ ಕಾರ್ಮಿಕರಿಗೆ ನ್ಯಾಯಯುತವಾಗಿ ಸಿಗಬೇಕಾದ ಕೂಲಿ ಹಣವನ್ನು ನಕಲಿ ಜಾಬ್ ಕಾರ್ಡ್ ಸೃಷ್ಟಿ ಮಾಡುವ ಮೂಲಕ ಪಂಚಾಯ್ತಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಳೆದ 3 ತಿಂಗಳಲ್ಲಿ 9 ಲಕ್ಷ ರೂ.ಗಳನ್ನು ನಕಲೀ ಫಲಾನುಭವಿಗಳ ಖಾತೆಗೆ ಜಮಾ ಮಾಡಿ ನೈಜ ಪಲಾನುಭವಿಗಳನ್ನು ವಂಚಿಸಿದ್ದಾರೆ ಎಂದು ಆರೋಪಿಸಿದರು.

ಮುತ್ತಲವಾಡಿ ಗ್ರಾಮ ಪಂಚಾಯ್ತಿಯಲ್ಲಿ ಕಳೆದ ಮೂರು ನಾಲ್ಕು ವರ್ಷದಿಂದಲೂ ಹಲವಾರು ಅಕ್ರಮಗಳು ನಡೆಯುತ್ತಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವುದು ಇವರ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ನರೇಗಾ ಯೋಜನೆಯಡಿ ನಡೆದಿರುವ ಅಕ್ರಮಗಳ ಬಗ್ಗೆ ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾರೂ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಮೇಲಧಿಕಾರಿಗಳೇ ಪಂಚಾಯ್ತಿ ಅಧಿಕಾರಿಗಳಿಗೆ ಅಕ್ರಮವೆಸಗಲು ಕುಮ್ಮಕ್ಕು ನೀಡುತ್ತಿದ್ದಾರೆಯೇ ಎಂಬ ಅನುಮಾನ ಮೂಡಿದೆ ಎಂದು ಸಂಶಯ ವ್ಯಕ್ತಪಡಿಸಿದರು.

ನರೇಗಾ ಯೋಜನೆಯಡಿ ಫಲಾನುಭವಿ ಪಟ್ಟಿಯಲ್ಲಿ ಪಂಚಾಯ್ತಿ ಅಧ್ಯಕ್ಷೆ ನಾಗಮಣಿಯವರ ಮಗ ಕಿರಣ್ ಇಲ್ಲದಿದ್ದರೂ ನರೇಗಾ ಕೆಲಸಕ್ಕೆ ಹಾಜರಾದಂತೆ ಫೋಟೋ ಅಪ್‌ಲೋಡ್ ಮಾಡಿರುವ ದಾಖಲೆಗಳಿವೆ. ಅಪ್‌ಲೋಡ್ ಮಾಡಿರುವ ಪ್ರತಿಯೊಂದು ಫೋಟೊದಲ್ಲೂ ಈತ ಇದ್ದಾನೆಂದರೆ ಪಂಚಾಯ್ತಿಯವರ ಅಕ್ರಮ ಎಷ್ಟರ ಮಟ್ಟಿಗಿದೆ ಎಂಬುದನ್ನು ತಿಳಿಯಬಹುದಾಗಿದೆ ಎಂದರು.

ಒಂದೇ ಮಳಿಗೆಗೆ ಎರಡೆರಡು ಲೈಸೆನ್ಸ್

ತಾಲೂಕು ಪಂಚಾಯ್ತಿಯಲ್ಲಿ ಡೆಪ್ಯುಟೇಷನ್ ಮೇಲೆ ಕೆಲಸ ಮಾಡುತ್ತಿರುವ ಹಿಂದೆ ಪಂಚಾಯ್ತಿ ಪಿಡಿಓ ಆಗಿದ್ದ ನಿರ್ಮಲಾ ಒಂದೇ ಮಳಿಗೆಗೆ ಎರಡೆರಡು ಲೈಸೆನ್ಸ್ ಕೊಡುವ ಮೂಲಕ ಅಲ್ಲೂ ಅಕ್ರಮವೆಸಗಿದ್ದಾರೆ.ಮಳಿಗೆಯನ್ನು ವರ್ಷಕ್ಕೆ ಒಮ್ಮೆಯೇ ನವೀಕರಣ ಮಾಡಲು ಅವಕಾಶವಿದ್ದು ಒಂದೇ ಮಳಿಗೆಗೆ ಎರಡು ಲೈಸೆನ್ಸ್ ಕೊಡಲು ಸಾಧ್ಯವಾದರೂ ಹೇಗೆ ಎಂದು ಪ್ರಶ್ನಿಸಿದ ಮಧು ಪಂಚಾಯ್ತಿಯಲ್ಲಿ ಅಕ್ರಮ ನಡೆಸಿ ಲಕ್ಷಾಂತರ ರೂ.ಗಳ ದುರುಪಯೋಗ ಮಾಡಿರುವ ನಿರ್ಮಲಾ ಹಾಗು ಹಾಲಿ ಪಿಡಿಓ ನಿಂಗರಾಜು ರವರ ಆಸ್ತಿ ಬಗ್ಗೆಯೂ ಅಧಿಕಾರಿಗಳು ತನಿಖೆ ಮಾಡಬೇಕು ಎಂದು ಒತ್ತಾಯಿಸಿದರು.



ತನಿಖೆ ಮಾಡಿ ಕ್ರಮ ಕೈಗೊಳ್ಳದಿದ್ದರೆ ಹೈಕೋರ್ಟ್‌ಗೆ ಪಿಟಿಷನ್

ಪಂಚಾಯಿತಿಯಲ್ಲಿ ನಡೆದಿರುವ ನರೇಗಾ ಅಕ್ರಮಗಳ ಬಗ್ಗೆ ಈಗಾಗಲೇ ಸಿಇಒ ಅವರಿಗೆ ದೂರು ನೀಡಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮೌಖಿಕವಾಗಿಯೂ ತಿಳಿಸಿದ್ದೇವೆ. ಮೇಲ್ಮಟ್ಟದ ಅಧಿಕಾರಿಗಳು ಪ್ರಕರಣ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಿದಲ್ಲಿ ಮತ್ತಷ್ಟು ಯೋಜನೆಯಲ್ಲಿ ನಡೆದಿರಬಹುದಾದ ಹಗರಣಗಳು ಹೊರಬರಲಿವೆ. ಮೂರು ತಿಂಗಳ ಅವಧಿಯಲ್ಲಿಯೇ 9 ಲಕ್ಷ ಅಕ್ರಮ ನಡೆಸಿರುವ ಪಂಚಾಯ್ತಿಯವರು 5 ವರ್ಷಗಳಲ್ಲಿ ಇನ್ನೆಷ್ಟು ಅಕ್ರಮ ನಡೆಸಿದ್ದಾರೆ ಎಂಬ ಬಗ್ಗೆ ಸಮಗ್ರ ತನಿಖೆಯಾಗಬೇಕಿದೆ. ಅಧಿಕಾರಿಗಳು ಕೂಡಲೇ ಈ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕೈಗೊಳ್ಳದಿದ್ದರೆ ನಾನು ಹೈಕೋರ್ಟ್‌ಗೆ ಪಿಟಿಷನ್ ಹಾಕಿ ಅಕ್ರಮ ಬಯಲು ಮಾಡಲು ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಆರೋಪಿಗಳ ಹೆಸರಲ್ಲೂ ಜಾಬ್ ಕಾರ್ಡ್ ಸೃಷ್ಟಿ: ಅಕ್ರಮ: ಪಂಚಾಯಿತಿಯಲ್ಲಿ ಕೆಲಸ ಮಾಡುವವರು, ಅತಿಥಿ ಶಿಕ್ಷಕರು ಹಾಗೂ ನ್ಯಾಯಾಲಯದಲ್ಲಿ ಕೇಸ್‌ಗಳಿರುವವರ ಹೆಸರಲ್ಲಿ ನರೇಗಾ ಜಾಬ್ ಕಾರ್ಡ್ ಸೃಷ್ಟಿಸಿ ಕೂಲಿ ಹಣವನ್ನು ಅವರ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಆರೋಪಿಸಿದ ಮಧು ಹಿಂದಿನ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಪುಷ್ಪ ಅವರ ಪತಿ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಆಗಿದ್ದು ಇವರ ಮಗನ ಹೆಸರಿಗೆ ಬಿಲ್ ಮಾಡಲಾಗಿದೆ. ಜಾಬ್ ಕಾರ್ಡ್ ಮಾಡಲು ಅಧಿಕಾರಿಗಳ ಕುಮ್ಮಕ್ಕಿದ್ದು ಕೂಡಲೇ ನರೇಗಾ ಯೋಜನೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಅವರು ಒತ್ತಾಯಿಸಿದರು.

ಮಹಿಳಾ ಸದಸ್ಯರ ಅಧಿಕಾರ ಕುಹ: ಮುತ್ತಲವಾಡಿ ಗ್ರಾಮ ಪಂಚಾಯ್ತಿಯಲ್ಲಿ ಮಹಿಳಾ ಸದಸ್ಯರ ಅಧಿಕಾರವನ್ನು ಅವರ ಪತಿಯಂದಿರು ನಡೆಸುವ ಮೂಲಕ ಮಹಿಳೆಯರ ಅಧಿಕಾರವನ್ನು ಕಸಿದು ದುರುಪಯೋಗಪಡಿಸಿಕೊಂಡಿರುವುದು ಕಾನೂನು ಉಲ್ಲಂಘನೆ. ಸಭೆಗಳಲ್ಲಿ ಈ ದುರುಪಯೋಗ ನಡೆಯುತ್ತಿದ್ದರೂ, ಒಬ್ಬ ಮಹಿಳಾ ಅಧಿಕಾರಿಯೇ ಮೌನ ವಹಿಸಿರುವುದು ಅಪರಾಧವಾಗಿದೆ. ಹಾಲಿ ಅಧ್ಯಕ್ಷೆ ನಾಗಮಣಿ ಪಂಚಾಯ್ತಿಗೆ ಬರುತ್ತಿಲ್ಲ, ಅವರ ಅಧಿಕಾರವನ್ನು ಅವರ ಪತಿ ನಡೆಸುತ್ತಿದ್ದಾರೆ. ಪಂಚಾಯ್ತಿಯಲ್ಲಿ ನಡೆವ ಸಭೆಗೂ ಕೂಡ ಇವರೇ ಹಾಜರಾಗುತ್ತಿದ್ದರೂ ಯಾರೂ ಪ್ರಶ್ನೆ ಮಾಡುತ್ತಿಲ್ಲ ಎಂದು ಆರೋಪಿಸಿದರು.

ರಸ್ತೆ ಕಾಮಗಾರಿ ಕಳಪೆ: ಸಾ.ರಾ.ಮಹೇಶ್ ಸ್ಥಳ ಪರಿಶೀಲನೆ

ಇಂಜಿನಿಯರ್, ಗುತ್ತಿಗೆದಾರನಿಗೆ ತರಾಟೆ, ಗುಣಮಟ್ಟದ ಕಾಮಗಾರಿ ಮಾಡದಿದ್ದರೆ ಹೋರಾಟ

ಕೆ.ಆರ್.ನಗರ: ತಾಲೂಕಿನ ಹಂಪಾಪುರದ ರೈಲ್ವೇ ಗೇಟ್ ಬಳಿಯಿಂದ ಸನ್ಯಾಸಿಪುರ ಮಾರ್ಗವಾಗಿ ಹಳೇ ಕಾವೇರಿ ಸೇತುವೆ ಮೂಲಕ ಹಾಸನ–ಮೈಸೂರು ಸಂಪರ್ಕದ ರಸ್ತೆ ಐದು ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದ್ದು, ಸಂಪೂರ್ಣವಾಗಿ ಕಳಪೆಯಾಗಿದೆ ಎಂದು ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಗುರುವಾರ ಮಾಜಿ ಸಚಿವ ಸಾ.ರಾ.ಮಹೇಶ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಇಂಜಿನಿಯರ್ ಮತ್ತು ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡರು.


ಹಂಪಾಪುರದ ರೈಲ್ವೇಗೇಟ್ ಬಳಿ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು ಕಳೆದ ಹದಿನೈದು ವರ್ಷಗಳ ನನ್ನ ಶಾಸಕತ್ವದ ಅವಧಿಯಲ್ಲಿ ಕಳಪೆ ಮಟ್ಟದ ರಸ್ತೆ ನಿರ್ಮಿಸಿಲ್ಲ ಎಂದು ಸ್ಪಷ್ಟ ಪಡಿಸಿದರು. ಅಂದಾಜು ಪಟ್ಟಿಯಲ್ಲಿ ಏನೂ ಅನುಮೋದನೆ ಆಗಿದೆ ಆ ರೀತಿಯಲ್ಲಿ ಕಾಮಗಾರಿ ಮಾಡಿ. ಇಲ್ಲದಿದ್ದರೆ ಒಂದೇ ಒಂದು ನಯಾಪೈಸಾ ಹಣ ಬಿಡುಗಡೆ ಮಾಡದಂತೆ ಹೋರಾಟ ಮಾಡಲಾಗುತ್ತದೆ ಎಂದು ಗುತ್ತಿಗೆದಾರರಿಗೆ ಹಾಗೂ ಇಂಜಿನಿಯರ್‌ಗೆ ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಪಕ್ಷದವರು ಹಿಂದಿನ ಸರ್ಕಾರವನ್ನು ನಲವತ್ತು ಪರ್ಸೆಂಟ್ ಪಡೆದು ಗುತ್ತಿಗೆ ನೀಡುತ್ತಿದ್ದಾರೆ ಎಂದು ಬೊಬ್ಬೆ ಹೊಡೆದು ಅಧಿಕಾರಕ್ಕೆ ಬಂದ ಇವರು ಕಾಮಗಾರಿ ಗುತ್ತಿಗೆ ನೀಡಲು ಆರವತ್ತು ಪರ್ಸೆಂಟ್ ಪಡೆಯುತ್ತಿದ್ದಾರೆ ಎಂದು ಆರೋಪ ಮಾಡಿದರು.

ಇದಕ್ಕೂ ಮೊದಲು ಮಾಜಿ ಸಚಿವ ಸಾ.ರಾ. ಮಹೇಶ್ ಅವರು ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಸಮ್ಮುಖದಲ್ಲಿ ಈಗಾಗಲೇ ಅರ್ಧದಷ್ಟು ರಸ್ತೆ ಕಾಮಗಾರಿ ಕೆಲಸ ಮಾಡಿದ್ದನ್ನು ಸ್ಥಳೀಯ ಗ್ರಾಮದವರಿಂದ ಹಾರೆ ಗುದ್ದಲಿ ಮೂಲಕ ಅಗೆದು ಪರಿಶೀಲಿಸಿ ನೋಡಿ ಸಂಪೂರ್ಣವಾಗಿ ಕಳಪೆಯಾಗಿಲ್ಲವೇ ಎಂದು ಹರಿಹಾಯ್ದರು.

ಕೇಂದ್ರ ಸರ್ಕಾರದ ದಿಶಾ ಸಮಿತಿ ಸದಸ್ಯ ಹಾಗೂ ತಾಲೂಕು ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್, ಜಿಲ್ಲಾ ಗ್ರಾಮಾಂತರ ಯುವ ಜೆಡಿಎಸ್ ಉಪಾಧ್ಯಕ್ಷ ಕಗ್ಗರೆ ಕುಚೇಲ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ತಾಲೂಕು ಯುವ ಜೆಡಿಎಸ್ ಎಸ್.ಸಿ. ಘಟಕದ ಅಧ್ಯಕ್ಷ ಹಂಪಾಪುರ ಸೂರಿ, ಜೆಡಿಎಸ್ ನಗರ ಕಾರ್ಯದರ್ಶಿ ರುದ್ರೇಶ್(ಅಯ್ತು), ಜೆಡಿಎಸ್ ನಗರ ಮಹಿಳಾ ಘಟಕದ ಕಾರ್ಯದರ್ಶಿ ಭಾಗ್ಯಲಕ್ಷ್ಮಿ, ಜೆಡಿಎಸ್ ಮುಖಂಡರಾದ ಹಂಪಾಪುರ ರಮೇಶ್, ಧನಪಾಲ್, ಶಂಭು, ರಾಜೇಶ್, ಗುರು ಪ್ರಸಾದ್, ಹೆಚ್.ಜಿ. ಮಂಜು, ಸನ್ಯಾಸೀಪುರ ಗ್ರಾಮದ ಮೋಹನ್ ರಾಜ್, ಸಂತೋಷ್, ಶಿವಲಿಂಗ, ಉಮೇಶ್, ಚಿಕ್ಕಂಯ್ಯ, ಮೊದಲಾದವರು ಇದ್ದರು.

ಹನಗೋಡು ಬಳಿ ಹುಲಿ ದಾಳಿ: ಹಸು ಬಲಿ




ಹನಗೋಡು, ಡಿ.18– ಹನಗೋಡು ಭಾಗದಲ್ಲಿ ನಿತ್ಯ ಒಂದಿಲ್ಲೊಂದು ಕಡೆ ಹುಲಿ ದಾಳಿ ಮುಂದುವರೆದಿದ್ದು, ಸಮೀಪದ ಹೆಮ್ಮಿಗೆ ಗ್ರಾಮದ ಬಳಿಯೇ ಹಗಲು ವೇಳೆಯೇ ಹುಲಿ ದಾಳಿ ನಡೆಸಿ ಹಸುವನ್ನು ಕೊಂದು ಹಾಕಿದೆ.

ಹೆಮ್ಮಿಗೆಯ ಚೆಲುವೇಗೌಡರ ಪುತ್ರ ಮಹೇಶ್‌ರಿಗೆ ಸೇರಿದ ಹಸುವನ್ನು ಹೊಲದಲ್ಲಿ ಮೇಯಲು ಬಿಟ್ಟಿದ್ದ ವೇಳೆ ಹುಲಿ ದಾಳಿ ನಡೆಸಿ ಕೊಂದು ಕೆಲ ಬಾಗ ತಿಂದು ಹಾಕಿದೆ. ಮಾಹಿತಿ ಮೇರೆಗೆ ಹುಣಸೂರು ವನ್ಯಜೀವಿ ವಲಯದ ಆರ್‌ಎಫ್‌ಓ ಸುಬ್ರಮಣ್ಯ ಹಾಗೂ ಸಿಬ್ಬಂದಿಗಳು ಭೇಟಿ ಇತ್ತು ಪರಿಶೀಲಿಸಿದ್ದಾರೆ.

ಜನರಿಗೆ ದರ್ಶನ ನೀಡುತ್ತಿರುವ ಹುಲಿ: ಹೆಮ್ಮಿಗೆ ಸುತ್ತಮುತ್ತ ಹುಲಿ ಓಡಾಡುತ್ತಿದ್ದು, ಅನೇಕರಿಗೆ ಕಾಣಿಸಿಕೊಂಡಿದೆ. ಅರಣ್ಯ ಇಲಾಖೆ ಕೂಂಬಿಂಗ್ ನಡೆಸುತ್ತಲೇ ಇದ್ದರೂ ಹುಲಿ ಪತ್ತೆಯಾಗುತ್ತಿಲ್ಲಾ, ಇನ್ನಾದರೂ ವೈಜ್ಞಾನಿಕವಾಗಿ ಕಾರ್ಯಾಚರಣೆ ಕೈಗೊಂಡು ಹುಲಿ ಸೆರೆ ಹಿಡಿಯುವಂತೆ ಗ್ರಾ.ಪಂ. ಅಧ್ಯಕ್ಷ ಹೆಮ್ಮಿಗೆ ಪಾಪಣ್ಣ ಒತ್ತಾಯಿಸಿದ್ದಾರೆ.

20 ದಿನಗಳ ಅಂತರದಲ್ಲಿ ಎರಡನೇ ಚಿರತೆ ಸೆರೆ



ಹನಗೋಡು, ಡಿ.18– ಹನಗೋಡಿಗೆ ಸಮೀಪದ ವಡ್ಡಂಬಾಳಿನಲ್ಲಿ 20 ದಿನಗಳ ಅಂತರದಲ್ಲಿ ಎರಡನೇ ಚಿರತೆ ಸೆರೆಯಾಗಿದೆ.

ಗ್ರಾಮದ ಹೊರವಲಯದ ಜಮೀನಿನಲ್ಲಿ ಮನೆ ನಿರ್ಮಿಸಿಕೊಂಡಿರುವ ಸಿದ್ದರಾಜು ಅವರ ಜಮೀನಿನ ಬಳಿಯ ಕಲ್ಲು ಗುಡ್ಡದಲ್ಲಿ ಈ ಹಿಂದೆ ಸೆರೆಯಾಗಿದ್ದ ಸ್ಥಳದಲ್ಲೇ ಇದ್ದ ಚಿರತೆಯು ಆಗಾಗ್ಗೆ ದರ್ಶನ ನೀಡುತ್ತಾ ರೈತರಲ್ಲಿ ಆತಂಕ ಹುಟ್ಟಿಸುತ್ತಿತ್ತು. ಅನೇಕ ಬಾರಿ ಸಿದ್ದರಾಜು ಮನೆ ಬಳಿಯೇ ಕಾಣಿಸಿಕೊಂಡಿದ್ದರಿಂದ ಅರಣ್ಯ ಇಲಾಖೆಗೆ ದೂರು ನೀಡಿದ್ದರ ಮೇರೆಗೆ ಬೋನ್ ಇರಿಸಲಾಗಿತ್ತು.

ಗುರುವಾರ ಸುಮಾರು ಎರಡೂವರೆ ವರ್ಷದ ಹೆಣ್ಣು ಚಿರತೆಯು ಬೋನಿನಲ್ಲಿ ಸೆರೆಯಾಗಿದೆ ಎಂದು ಆರ್‌ಎಫ್‌ಓ ನಂದಕುಮಾರ್ ತಿಳಿಸಿದ್ದಾರೆ. ಚಿರತೆಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪಶುವೈದ್ಯ ಡಾ.ಆದರ್ಶ ಚಿಕಿತ್ಸೆ ನೀಡುತ್ತಿದ್ದು, ನಂತರ ಬಂಧಮುಕ್ತಗೊಳಿಸಲಾಗುವುದೆಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿ.23, ಇಲವಾಲದಲ್ಲಿ ರೈತರ ಸಮಾವೇಶ

ಕೆ.ಎಸ್.ಪುಟ್ಟಣ್ಣಯ್ಯ ಜನ್ಮದಿನ ಆಚರಣೆ, ಪ್ರತಿಮೆ ಅನಾವರಣ

ಹುಣಸೂರು: ಮೈಸೂರು ತಾಲೂಕು ಇಲವಾಲದಲ್ಲಿ ಡಿ.23ರಂದು ರೈತ ಸಂಘದ ವತಿಯಿಂದ ಬೃಹತ್ ರೈತ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ರೈತನಾಯಕ್ ಕೆ.ಎಸ್. ಪುಟ್ಟಣ್ಣಯ್ಯನವರ ಜನ್ಮ ದಿನಾಚರಣೆ, ಪ್ರತಿಮೆ ಅನಾವರಣ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಹುಣಸೂರಿನ ಹರಾಜು ಮಾರುಕಟ್ಟೆಯ ಸಭಾಂಗಣದಲ್ಲಿ ಗುರುವಾರ ನಡೆದ ತಾಲೂಕು ರೈತ ಸಂಘದ ಗ್ರಾಮ ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು.

ರೈತ ಸಂಘದ ತಾಲೂಕು ಅಧ್ಯಕ್ಷ ಬೆಂಕಿಪುರ ಚಿಕ್ಕಣ್ಣ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರೈತರ ಕಣ್ಮಣಿ ನಾಯಕ ಕೆ.ಎಸ್.ಪುಟ್ಟಣ್ಣಯ್ಯರವರ ಪ್ರತಿಮೆ ಅನಾವರಣ, 76ನೇ ಜನ್ಮ ದಿನಾಚರಣೆ, ರೈತ ದಿನಾಚರಣೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಖಂಡಿಸಿ ರೈತ ಪರ ಯೋಜನೆಗಳನ್ನು ರೂಪಿಸಲು ಆಗ್ರಹಿಸಿ ಬೃಹತ್ ಜಿಲ್ಲಾ ರೈತ ಸಮಾವೇಶವನ್ನು ಇಲವಾಲದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 11 ಗಂಟೆಗೆ ಪ್ರತಿಮೆ ಅನಾವರಣ ಮಾಡಲಾಗುವುದು.

ಮಧ್ಯಾಹ್ನ 12 ಗಂಟೆಗೆ ಸಮಾವೇಶ ಕಾರ್ಯಕ್ರಮ ನಡೆಯಲಿದೆ ಎಂದು ಸಭೆಯಲ್ಲಿ ಮಾಹಿತಿ ನೀಡಲಾಯಿತು.

ಹುಣಸೂರು ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಸುಮಾರು 200 ಮೋಟಾರ್ ಬೈಕ್‌ನಲ್ಲಿ ರ್‍ಯಾಲಿಯನ್ನು ಏರ್ಪಡಿಸಲಾಗಿದೆ. ಬೆಳಗ್ಗೆ 9 ಗಂಟೆಗೆ ಹುಣಸೂರಿನ ಟೌನ್‌ಹಾಲ್‌ನಿಂದ ರ್‍ಯಾಲಿ ಹೊರಟು ಹುಲ್ಲೇನಹಳ್ಳಿ ಬಸವೇಶ್ವರ ದೇವಸ್ಥಾನದಿಂದ ಕೆ.ಆರ್.ನಗರ, ಪಿರಿಯಾಪಟ್ಟಣ ತಾಲೂಕಿನವರು ಸೇರಿ ಎಲ್ಲರೂ ಒಟ್ಟಾಗಿ ರ್‍ಯಾಲಿಯಲ್ಲಿ ತೆರಳುವರು ಎಂದು ಜಿಲ್ಲಾಧ್ಯಕ್ಷರಾದ ಹೊಸೂರ್ ಕುಮಾರ್ ತಿಳಿಸಿದರು. ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಇರುವ ರೈತರು ಈ ಬೃಹತ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಇದೇ ವೇಳೆ ಮನವಿ ಮಾಡಲಾಯಿತು.


ಹುಣಸೂರು ತಂಬಾಕು ಹರಾಜು ಮಾರುಕಟ್ಟೆಯ ಸಭಾಂಗಣದಲ್ಲಿ ಗುರುವಾರ ತಾಲೂಕು ರೈತ ಸಂಘದ ಗ್ರಾಮ ಸಭೆ ನಡೆಸಲಾಯಿತು.

ಈ ಪೂರ್ವಭಾವಿ ಸಭೆಯಲ್ಲಿ ತಾಲೂಕು ಕಾರ್ಯದರ್ಶಿ ಅಗ್ರಹಾರ ರಾಮೇಗೌಡ, ಜಿಲ್ಲಾ ಖಜಾಂಚಿ ಈಶ್ವರ್ ತಾಲೋಕು ಉಪಾಧ್ಯಕ್ಷರಾದ ವಿಷಕಂಠಪ್ಪ, ವಿ.ಟಿ.ಮಣಿ, ರಾಮಪಟ್ಟಣ ಈಶ್ವರೇಗೌಡ, ರಾಮಪಟ್ಟಣ ಗ್ರಾಮ ಘಟಕದ ಅಧ್ಯಕ್ಷರಾದ ರವಿಗೌಡ, ಸತೀಶ್, ರವಿ, ಧನಂಜಯ ಮಹದೇವು ಇನ್ನಿತರರು ಉಪಸ್ಥಿತರಿದ್ದರು.

ಭಾನುವಾರ ನಂ.ಗೂಡಲ್ಲಿ ಕಪಿಲ ಆರತಿ

ನಂಜನಗೂಡು: ಭಾನುವಾರ (ಡಿ.21) ಸಂಜೆ 6 ಗಂಟೆಗೆ ಕಪಿಲಾ ನದಿಯ ಸ್ನಾನ ಘಟ್ಟದಲ್ಲಿ ಯುವ ಬ್ರಿಗೇಡ್ ವತಿಯಿಂದ ಕಪಿಲ ಆರತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಯುವ ಬ್ರಿಗೇಡ್ ಸಂಚಾಲಕ ನಿತಿನ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಬ್ರಿಗೇಡ್ ಕಳೆದ ಹಲವಾರು ವರ್ಷಗಳಿಂದ ದೇವಾಲಯಗಳ ಜೀರ್ಣೋದ್ಧಾರ, ನದಿಗಳ ಸ್ವಚ್ಛತೆಗೆ ಆದ್ಯತೆ ನೀಡಿ ಕೆಲಸ ನಿರ್ವಹಿಸುತ್ತಾ ಬಂದಿದೆ, ನಂಜನಗೂಡಿನಲ್ಲಿ ಕಳೆದ 9 ವರ್ಷಗಳಿಂದ ಗಂಗಾ ಆರತಿಯ ಮಾದರಿಯಲ್ಲಿ ಕಪಿಲಾ ಆರತಿ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದೆ, ಡಿ.21ರ ಭಾನುವಾರದಂದು ಉತ್ತರಕಾಶಿಯ ಗಂಗಾ ಆರತಿಯ ಮಾದರಿಯಲ್ಲಿ ಕಪಿಲ ಆರತಿಯನ್ನು ನಡೆಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಜೀ, ಅಯೋಧ್ಯೆ ರಾಮ ಮಂದಿರ ನಿರ್ಮಾಣದ ನೇತೃತ್ವ ವಹಿಸಿದ್ದ ವಿಶ್ವ ಹಿಂದೂ ಪರಿಷತ್ ರಾಷ್ಟ್ರೀಯ ಸಹ ಕಾರ್ಯದರ್ಶಿ ಗೋಪಾಲ್ ಜೀ, ಹಾಗೂ ಯುವ ಬ್ರಿಗೇಡ್ ಸಂಸ್ಥಾಪಕರಾದ ಚಕ್ರವರ್ತಿ ಸೂಲಿಬೆಲೆ ನೇತೃತ್ವದಲ್ಲಿ ಸಂಜೆ 6 ಗಂಟೆಗೆ ಕೃಷ್ಣ ಜೋಯಿಸ್ ನೇತೃತ್ವದ ಋತ್ವಿಕರ ತಂಡ ಕಪಿಲೆಗೆ ಆರತಿ ಸಲ್ಲಿಸಲಿದ್ದಾರೆ, ಕಪಿಲಾ ನದಿಯ ದಡದಲ್ಲಿ ಲಕ್ಷ ದೀಪೋತ್ಸವ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು ಸಾರ್ವಜನಿಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕೃಷ್ಣ ಜೋಯಿಸ್ ಮಾತನಾಡಿ ಕಪಿಲಾ ಆರತಿಯ ಅಂಗವಾಗಿ ಹದಿನಾರು ಕಾಲು ಮಂಟಪದಲ್ಲಿ ಶಿವಲಿಂಗ ಸ್ಥಾಪಿಸಿ ಎಲ್ಲರಿಗೂ ಶಿವಲಿಂಗಕ್ಕೆ ಅಷ್ಟ ತೀರ್ಥ ಅಭಿಷೇಕ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದರು.

ಡಿ.29, ರಾಷ್ಟ್ರಕವಿ ಕುವೆಂಪು ಜನ್ಮದಿನ ಆಚರಣೆ



ಹೆಚ್.ಡಿ.ಕೋಟೆ: ಡಿ.29ರಂದು ವಿಶ್ವ ಮಾನವ ರಾಷ್ಟ್ರಕವಿ ಕುವೆಂಪು ಅವರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುತ್ತಿದ್ದು ಸಾರ್ವಜನಿಕರು ಸಹಕಾರ ನೀಡಬೇಕು ಎಂದು ತಹಸೀಲ್ದಾರ್ ಶ್ರೀನಿವಾಸ್ ಮನವಿ ಮಾಡಿದ್ದಾರೆ. ಪಟ್ಟಣದ ತಾಲೂಕು ಆಡಳಿತ ಸೌಧದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರ ಅಧ್ಯಕ್ಷತೆಯಲ್ಲಿ ಡಿ.29 ರಂದು ರಾಷ್ಟ್ರಕವಿ ಕುವೆಂಪು ಜಯಂತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಸಮುದಾಯದ ಮುಖಂಡರನ್ನು ಆಹ್ವಾನಿಸಿ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಾಧಕರಿಗೆ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಸಭೆಗೆ ಗೈರು ಹಾಜರಿಯಾಗುವ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಮತ್ತೊಮ್ಮೆ ಸಭೆಗೆ ಗೈರಾದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಸಭೆಯಲ್ಲಿ ತಾಲೂಕು ಒಕ್ಕಲಿಗ ಸಮಾಜದ ಅಧ್ಯಕ್ಷ ಹರೀಶ್ ಗೌಡ, ಉಪ ತಹಶಿಲ್ದಾರ್ ಮಹೇಶ್, ವೇದಕುಮಾರ್, ಸಿದ್ದರಾಜು, ಶಶಿಕಲಾ, ನೇತ್ರಾವತಿ ಇದ್ದರು.

ಹೆಡಿಯಾಲ ಪಿಹೆಚ್‌ಸಿಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಮನವಿ

ನಂಜನಗೂಡು: ಕಾಡಂಚಿನ ಗ್ರಾಮವಾದ ಹೆಡಿಯಾಲ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಿ ಜನರಿಗೆ ಅನುಕೂಲ ಮಾಡಿಕೊಡಲು ಕ್ರಮವಹಿಸಬೇಕು ಎಂದು ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹೆಡಿಯಾಲ ಹಾಗೂ ಸುತ್ತಮುತ್ತಲಿನ ಗ್ರಾಮ ಪಂಚಾಯತಿಗಳು ಕಾಡಂಚಿನ ಪ್ರದೇಶವಾಗಿದ್ದು, ಇಲ್ಲಿ ಮಾನವ–ಪ್ರಾಣಿ ಸಂಘರ್ಷ, ರೈತರ ಸಮಸ್ಯೆಗಳು ಸೇರಿದಂತೆ ಹಲವು ಗಂಭೀರ ಸವಾಲುಗಳು ನಿರಂತರವಾಗಿ ಎದುರಾಗುತ್ತಿವೆ, ಜೊತೆಗೆ ತುರ್ತು ಸಂದರ್ಭದಲ್ಲಿ ಹೆಡಿಯಾಲದ ಆರೋಗ್ಯ ಕೇಂದ್ರದಲ್ಲಿ ಸಮರ್ಪಕ ಚಿಕಿತ್ಸೆ ಸಿಗದೇ ಸ್ಥಳೀಯ ನಿವಾಸಿಗಳು ತೊಂದರೆ ಅನುಭವಿಸುತ್ತಿದ್ದಾರೆ. ತುರ್ತು ಆರೋಗ್ಯ ಸೇವೆಗಳ ಅವಶ್ಯಕತೆ ಹೆಚ್ಚಾಗಿರುವ ಈ ಪ್ರದೇಶದ ಜನರು ಚಿಕಿತ್ಸೆಗಾಗಿ ನಂಜನಗೂಡು ಪಟ್ಟಣಕ್ಕೆ ದೂರ ಪ್ರಯಾಣ ಮಾಡಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ, ತಾಲೂಕಿನಲ್ಲಿ ಈಗಾಗಲೇ ವರುಣ ವಿಧಾನಸಭಾ ಕ್ಷೇತ್ರದ ತಗಡೂರು ಮತ್ತು ನಂಜನಗೂಡು ವಿಧಾನಸಭಾ ಕ್ಷೇತ್ರದ ಹುಲ್ಲಹಳ್ಳಿ ಗ್ರಾಮದಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನು ತೆರೆಯಲಾಗಿದೆ, ಒಂದು ವಿಧಾನಸಭಾ ಕ್ಷೇತ್ರದಲ್ಲಿ ಎರಡು ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವ ಅವಕಾಶವಿದೆ ಎಂದರು.

ಈ ಹಿನ್ನೆಲೆಯಲ್ಲಿ ಹೆಡಿಯಾಲ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸಿ ಕಾಡಂಚಿನ ಪ್ರದೇಶದ ಜನರು ಹಾಗೂ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಲ್ಲಿ ಮನವಿ ಮಾಡಲಾಗಿದೆ, ಈ ಸಂದರ್ಭದಲ್ಲಿ ಆರೋಗ್ಯ ಸಚಿವರ ಪರವಾಗಿ ಮಾನ್ಯ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಅವರು, ಮನವಿಗೆ ಸಾಕಾರಾತ್ಮಕವಾಗಿ ಸ್ಪಂದಿಸಿ, ಮುಂದಿನ ವರ್ಷದ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ ಉನ್ನತೀಕರಣಗೊಳಿಸಲು ಕ್ರಮ ವಹಿಸುವುದಾಗಿ ಸರ್ಕಾರದ ವತಿಯಿಂದ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ವನ್ಯ ಜೀವಿ ದಾಳಿಯಿಂದ ಜಾನುವಾರು ಕಳೆದುಕೊಂಡವರಿಗೆ ನೆರವು

ಕ್ಷೇತ್ರದ ಮನೆ ಮಗನಾಗಿ ನೊಂದವರಿಗೆ ನೆರವು ನೀಡಿದ ತೃಪ್ತಿ ನನಗಿದೆ: ಹೆಚ್.ಪಿ.ಮಂಜುನಾಥ್

ಹನಗೋಡು: ಹನಗೋಡು ಹೋಬಳಿಯ ಗ್ರಾಮಗಳಲ್ಲಿ ಕಳೆದ ಆರು ತಿಂಗಳಿನಿಂದ ನಡೆದ ವನ್ಯಜೀವಿ ದಾಳಿಯಿಂದ ಜಾನುವಾರು ಸೇರಿದಂತೆ ಸಾಕುಪ್ರಾಣಿಗಳನ್ನು ಕಳೆದುಕೊಂಡು ಸಂಕಷ್ಟಕ್ಕೀಡಾಗಿದ್ದ 68 ಮಂದಿ ರೈತರಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮುಖಂಡರೊಡಗೂಡಿ 6.60 ಲಕ್ಷ ರೂ. ನೆರವು ನೀಡಿದರು.

ಹನಗೋಡು ಗ್ರಾಮ ಪಂಚಾಯ್ತಿ ಎದುರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾನುವಾರುಗಳನ್ನು ಕಳೆದುಕೊಂಡ ರೈತರಿಗೆ ಧನ ಸಹಾಯ ವಿತರಿಸಿದ ಮಾಜಿಶಾಸಕ ಮಂಜುನಾಥ್ ಮಾತನಾಡಿ ಕಾಡಂಚಿನ ಗ್ರಾಮಗಳಲ್ಲಿ ಕಳೆದ ಆರುತಿಂಗಳಿಂದ ಹುಲಿ, ಚಿರತೆ ದಾಳಿಯಿಂದ 56 ಜಾನುವಾರುಗಳು ಮೃತಪಟ್ಟಿವೆ. ಯಾವುದೇ ಸರಕಾರ ಇರಲಿ ಸಂಪೂರ್ಣ ನಷ್ಟ ಭರಿಸುವುದಿಲ್ಲಾ, ಪರಿಹಾರ ನೀಡುತ್ತದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಯಾದವರು ಸರಕಾರದ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿಲ್ಲ.


ವನ್ಯಜೀವಿಗಳಿಂದ ಸಂಕಷ್ಟಕ್ಕೊಳಗಾದ ರೈತರಿಗೆ ಮಾಜಿ ಶಾಸಕ ಮಂಜುನಾಥ್ ನೆರವು ನೀಡಿದರು.

ನೊಂದ ರೈತರಿಗೆ ಕನಿಷ್ಟ ಸಾಂತ್ವಾನ ಹೇಳಲು ಸಮಯವೂ ಇಲ್ಲ. ತಾಲೂಕಿನ ಮನೆ ಮಗನಾಗಿ ಉದ್ಯಮಿಗಳಾದ ರಾಜುಶಿವರಾಜೇಗೌಡ, ಟಿ.ಕೃಷ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡರ ಸಹಕಾರದಿಂದ ಜಾನುವಾರುಗಳಿಗೆ ತಲಾ 15 ಸಾವಿರ, ಕರುಗಳಿಗೆ 10 ಸಾವಿರ ಹಾಗೂ ಆಡು, ಕುರಿಗಳಿಗೆ ತಲಾ 5 ಸಾವಿರ ರೂ ನಂತೆ ವೈಯಕ್ತಿಕ ನೆರವು ಕಲ್ಪಿಸಿದ್ದೇನೆಂಬ ತೃಪ್ತಿ ಇದೆ. ನೆರವು ಪಡೆದ ರೈತರು ಮತ್ತೆ ಜಾನುವಾರುಗಳನ್ನು ಖರೀದಿಸುವಂತೆ ಸಲಹೆ ನೀಡಿದರು.

ವನ್ಯಜೀವಿ ಹಾವಳಿ ತಪ್ಪಿಸುವ ಸಲುವಾಗಿ ವೈಜ್ಞಾನಿಕವಾದ ಕ್ರಮಗಳನ್ನು ಅನುಸರಿಸಲು ಅರಣ್ಯ ಇಲಾಖೆ ಮುಂದಾಗಬೇಕಿದೆ. ಈ ಬಗ್ಗೆ ಅರಣ್ಯ ಸಚಿವರೊಂದಿಗೆ ಚರ್ಚಿಸಿದ್ದೇನೆ. ತಡೆಗೋಡೆಗೆ ಸೆನ್ಸಾರ್ ಅಳವಡಿಸುವ ಮೂಲಕ ವನ್ಯಪ್ರಾಣಿಗಳು ಅರಣ್ಯದಿಂದ ಹೊರಬರುವ ಬಗ್ಗೆ ಮಾಹಿತಿ ಪಡೆಯುವ ಪದ್ಧತಿಯನ್ನು ಅನುಸರಿಸಿದಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ಕಡಿಮೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಗ್ರಾಮದ ಮುಖಂಡ ಕಾರ್ತಿಕ್, ಮುಖಂಡ ಅನ್ಸರ್ ಮಾತನಾಡಿದರು. ಗ್ರಾಪಂ ಅಧ್ಯಕ್ಷೆ ಸಂಗೀತಾ, ಹರೀಶ್, ಮಾಜಿ ಅಧ್ಯಕ್ಷರಾದ ಕುಮಾರ್,ಪ್ರಸನ್ನ, ಪ್ರಶಾಂತ್, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ನೇರಳಕುಪ್ಪೆಮಹದೇವ್, ಕಾಂಗ್ರೆಸ್ ಅಧ್ಯಕ್ಷರಾದ ಬಾಲಸುಂದರ್, ಪ್ರೇಮಕುಮಾರ್, ದರ್ಶನ್, ಫೈಸಲ್, ರವಿಗೌಡ, ಮುಖಂಡರಾದ ರಾಜುಶಿವರಾಜೇಗೌಡ, ಕೃಷ್ಣ, ಹೃತ್ವಿಕ್ ಸದಾನಂದ್, ಬಸವರಾಜು, ಗಿರಿಧರ್, ಲೋಕೇಶ್, ಪ್ರವೀಣ್, ನಾಗೇಶ್, ರಾಘು, ಕುಮಾರ್, ನೇತ್ರಾವತಿ ಗ್ರಾ.ಪಂ. ಸದಸ್ಯರಾದ ಬೋರೇಗೌಡ, ಈಶ್ವರ್, ಛಾಯಾ, ಶಿವಣ್ಣ ಸಂತೋಷ ಸೇರಿದಂತೆ ಅನೇಕರಿದ್ದರು.

ಸರಗೂರಲ್ಲಿ ಎನ್‌ಸಿಸಿ ಘಟಕ


ಸರಗೂರಿನ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಸೈನಿಕ್ ಶಾಲೆಯಲ್ಲಿ ಎನ್‌ಸಿಸಿ ಘಟಕವನ್ನು ಲೆಫ್ಟಿನೆಂಟ್ ಕರ್ನಲ್ ಶಿವರಾಜ್ ಮೋರೆ ಉದ್ಘಾಟಿಸಿದರು. ಸೈನಿಕ್ ಶಾಲೆಯ ಸ್ಕ್ವಾಡ್ರನ್ ಲೀಡರ್ ಸುಕನ್ಯ, ಎನ್‌ಸಿಸಿ ಅಧಿಕಾರಿ ಅನಿಲ್ ಕುಮಾರ್ ಹಾಗೂ 16 ಕರ್ನಾಟಕ ಬೆಟಾಲಿಯನ್, ಮೈಸೂರಿನ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಗ್ರಾಪಂ ಸದಸ್ಯ ನವೀನ್ ನಿಧನ



ಹೆಚ್.ಡಿ.ಕೋಟೆ: ತಾಲೂಕಿನ ಪಡುಕೋಟೆ ಗ್ರಾಮದ ನಿವಾಸಿ ಆನಂದ್ ಅವರ ಪುತ್ರ ಗ್ರಾಪಂ ಸದಸ್ಯ ಪಡುಕೋಟೆ ನವೀನ್ (43) ಗುರುವಾರ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶುಕ್ರವಾರ ಸ್ವಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಬೆಳ್ಳಿ ಗಟ್ಟಿಗಾಗಿ ಅನ್ನ ಕೊಟ್ಟ ಯಜಮಾನನ ಕೊಂದ ಕೆಲಸಗಾರನಿಗೆ ಜೀವಾವಧಿ ಶಿಕ್ಷೆ


ಗೋವಿಂದ


ಅರ್ಜುನ್

ಮೈಸೂರು, ಡಿ.18– ಜ್ಞಾನ ಮಂದಿರಕ್ಕೆ ಸಿಂಹಾಸನ ತಯಾರಿಸುತ್ತಿದ್ದ ರಾಜಸ್ಥಾನ ಮೂಲದ ವ್ಯಕ್ತಿಯನ್ನು ಹತ್ಯೆ ಮಾಡಿ, ಲಕ್ಷಾಂತರ ಮೌಲ್ಯದ ಬೆಳ್ಳಿಗಟ್ಟಿಯನ್ನು ಕದ್ದೊಯ್ದಿದ್ದ ಆತನ ಸಹಾಯಕನಿಗೆ ಮೈಸೂರಿನ ಮೂರನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ರಾಜಸ್ಥಾನದ ಪಾಲಿ ಜಿಲ್ಲೆ, ಸುಮೇರ್ ಪುರ ತಾಲೂಕು, ಬಾಂಕ್ಲಿ ಗ್ರಾಮದ ಗೋವಿಂದ ಅವರು ಸಹಾಯಕ್ಕೆಂದು ನೆರೆಯ ಪುಮಾವ ಗ್ರಾಮದಿಂದ ಕರೆತಂದಿದ್ದ ಅರ್ಜುನ್‌ಕುಮಾರ್‌ನಿಂದಲೇ ಹತ್ಯೆಯಾಗಿದ್ದರು. ಬೆಳ್ಳಿಗಟ್ಟಿಯ ಆಸೆಗೆ ಹತ್ಯೆ ಮಾಡಿದ್ದ ಈತನಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಮೈಸೂರಿನ ಸಂಗಮ್ ಚಿತ್ರಮಂದಿರದ ಬಳಿಯಿರುವ ಸುಮತಿನಾಥ ಜೈನ ಮಂದಿರ ಟ್ರಸ್ಟ್‌ಗೆ ಸೇರಿದ ಜ್ಞಾನ ಮಂದಿರಕ್ಕೆ ಸಿಂಹಾಸನ ಸಿದ್ಧಪಡಿಸಲು ರಾಜಸ್ಥಾನದ ಗೋವಿಂದನಿಗೆ ವಹಿಸಲಾಗಿತ್ತು. ಮರದ ಸಿಂಹಾಸನದ ಮೇಲೆ ಬೆಳ್ಳಿ ಕವಚ ತೊಡಿಸಲೆಂದು ಭಕ್ತರು ದಾನ ನೀಡಿದ್ದ ಬೆಳ್ಳಿಯನ್ನು ಗಟ್ಟಿಯನ್ನಾಗಿ ಮಾಡಿಸಿ ಒಟ್ಟು 14 ಕೆಜಿ ಗಟ್ಟಿಯನ್ನು 2022ರ ಏಪ್ರಿಲ್ 22ರಂದು ಗೋವಿಂದನಿಗೆ ನೀಡಿದ್ದರು.

ಗೋವಿಂದ ಕೆಲಸದ ವೇಳೆ ಜ್ಞಾನ ಮಂದಿರದ 2ನೇ ಮಹಡಿಯಲ್ಲಿರುವ ಕೊಠಡಿಯಲ್ಲೇ ಉಳಿದುಕೊಂಡಿದ್ದರು. ತನ್ನ ಕೆಲಸಕ್ಕೆ ಸಹಾಯ ಮಾಡಲೆಂದು ತಮ್ಮ ಊರಿನ ಪಕ್ಕದ ಗ್ರಾಮದಿಂದ ಕರೆತಂದಿದ್ದ ಅರ್ಜುನ್‌ಕುಮಾರ್‌ನನ್ನು ತಮ್ಮ ಜೊತೆಯಲ್ಲೇ ಉಳಿಸಿಕೊಂಡಿದ್ದರು. ಆದರೆ ಟ್ರಸ್ಟ್‌ನವರು ಕೆಲಸದ ಬಗ್ಗೆ ವಿಚಾರಿಸಲೆಂದು ಏಪ್ರಿಲ್ 28ರಂದು ಗೋವಿಂದ ಉಳಿದುಕೊಂಡಿದ್ದ ಕೊಠಡಿಗೆ ಹೋದಾಗ ಅವರು ಸಾವನ್ನಪ್ಪಿದ್ದರು. ತಲೆ ಹಾಗೂ ಮುಖದ ಮೇಲೆ ಗಾಯಗಳಾಗಿದ್ದವು. ತಲೆಯ ಮೇಲೆ ಸೀಲಿಂಗ್ ಫ್ಯಾನ್ ಬಿದ್ದಿತ್ತು. ಮೇಲ್ನೋಟಕ್ಕೆ ಫ್ಯಾನ್ ಬಿದ್ದು ಅನಾಹುತ ಸಂಭವಿಸಿರಬಹುದು ಎನ್ನುವಂತಿತ್ತು.

ಈ ಸಂಬಂಧ ಟ್ರಸ್ಟ್‌ನವರು ಲಷ್ಕರ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರ ಪ್ರಾಥಮಿಕ ತನಿಖೆ ವೇಳೆ ಗೋವಿಂದನ ಜೊತೆಗಿದ್ದ ಸಹಾಯಕ ಅರ್ಜುನ್‌ಕುಮಾರ್ ನಾಪತ್ತೆಯಾಗಿರುವುದು ತಿಳಿಯಿತು. ಅಲ್ಲದೆ ಸಿಂಹಾಸನದ ಕವಚ ಸಿದ್ಧಪಡಿಸಲು ನೀಡಿದ್ದ ಬೆಳ್ಳಿಯ ಗಟ್ಟಿಯೂ ಇರಲಿಲ್ಲ. ಅಲ್ಲದೆ ಗೋವಿಂದನ ತಲೆ ಮೇಲಿದ್ದ ಫ್ಯಾನ್ ಅನ್ನು ಅಳವಡಿಸಿಯೇ ಇರಲಿಲ್ಲ. ಅದು ಕೆಟ್ಟಿದ್ದರಿಂದ ಬಿಚ್ಚಿಸಿ, ಕೆಳಗಿಡಲಾಗಿತ್ತು ಎಂಬ ಮಾಹಿತಿ ಲಭ್ಯವಾಯಿತು.


ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದ್ದ ಬೆಳ್ಳಿಯ ಗಟ್ಟಿಗಳು

ಈ ಹಿನ್ನೆಲೆಯಲ್ಲಿ ಪೊಲೀಸರು ತನಿಖೆ ಮುಂದುವರೆಸಿದಾಗ ಅರ್ಜುನ್ ಕುಮಾರ್, ಬೆಳ್ಳಿ ಗಟ್ಟಿಯನ್ನು ಎಗರಿಸಲು ಪ್ಲಾನ್ ಮಾಡಿಕೊಂಡು, ಏ.26ರಂದು ಗೋವಿಂದ ಮಲಗಿದ್ದಾಗ ಬೆಳ್ಳಿ ಕವಚ ಹಾಕಿದ್ದ ಮರದ ಪಟ್ಟಿಯಿಂದ ಆತನ ತಲೆಗೆ ಏಳೆಂಟು ಬಾರಿ ಬಲವಾಗಿ ಹೊಡೆದು ಕೊಲೆ ಮಾಡಿದ್ದ. ನಂತರ ತಲೆ ಮೇಲೆ ಫ್ಯಾನ್ ಬಿದ್ದು ಸತ್ತು ಹೋಗಿದ್ದಾನೆಂದು ತಿಳಿದುಕೊಳ್ಳಲೆಂದು ರಿಪೇರಿಗಾಗಿ ಬಿಚ್ಚಿಟ್ಟಿದ್ದ ಫ್ಯಾನ್ ಅನ್ನು ಗೋವಿಂದನ ತಲೆ ಮೇಲಿಟ್ಟು, ಬೆಳ್ಳಿಯ ಗಟ್ಟಿಯೊಂದಿಗೆ ತನ್ನ ಸ್ವಂತ ಗ್ರಾಮಕ್ಕೆ ಪರಾರಿಯಾಗಿದ್ದ ಎಂಬುದು ತಿಳಿಯಿತು.

ಈ ಸಂಬಂಧ ಲಷ್ಕರ್ ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ ಮೂರನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್ ಅವರು, ಅರ್ಜುನ್‌ಕುಮಾರ್ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ ಜೀವಾವಧಿ ಶಿಕ್ಷೆ ಹಾಗೂ 8 ಸಾವಿರ ದಂಡ ವಿಧಿಸಿ, ತೀರ್ಪು ಪ್ರಕಟಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಡೆಯಪ್ಪ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅವತಾರ್ 3ಡಿ (ಕ–1 + ಇಂ–2)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಸಿನಿಮಾ ಮನರಂಜನೆಗಷ್ಟೇ ಸೀಮಿತವಾಗದೆ

ಸಾಮಾಜಿಕ ಜವಾಬ್ದಾರಿಯುಳ್ಳ ಶಿಕ್ಷಣ ಮಾಧ್ಯಮವಾಗಬೇಕು

ಹಿರಿಯ ಚಿತ್ರ ನಿರ್ದೇಶಕ ಬಿ.ಸುರೇಶ್ ಆಶಯ



'ಪತ್ರಿಕೋದ್ಯಮದ ಉದಯೋನ್ಮುಖ ಪ್ರವೃತ್ತಿಗಳು' ಕುರಿತ ಕಾರ್ಯಾಗಾರಕ್ಕೆ ಚಾಲನೆ ನೀಡಲಾಯಿತು

ಮೈಸೂರು, ಡಿ.18– ಸಿನಿಮಾಗಳು ಮನರಂಜನೆಗಷ್ಟೇ ಸೀಮಿತವಾಗದೆ ಸಾಮಾಜಿಕ ಜವಾಬ್ದಾರಿಯುಳ್ಳ ಶಿಕ್ಷಣದ ಮಾಧ್ಯಮವಾಗಬೇಕು ಎಂದು ಖ್ಯಾತ ನಿರ್ದೇಶಕ ಬಿ.ಸುರೇಶ್ ಆಶಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮೈಸೂರು ವಿವಿ ಮತ್ತು ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಸಂಸ್ಥೆ ಸಹಭಾಗಿತ್ವದಲ್ಲಿ ನಡೆದ 'ಪತ್ರಿಕೋದ್ಯಮದ ಉದಯೋನ್ಮುಖ ಪ್ರವೃತ್ತಿಗಳು' ಕುರಿತ ಆರು ದಿನಗಳ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಿನಿಮಾ ಕೇವಲ ಮನರಂಜನೆಯಲ್ಲ. ಹಿಂದೆ ಸೀಮಿತ ತಂತ್ರಜ್ಞಾನವಿದ್ದರೂ ಸಮಾಜದ ವಾಸ್ತವಗಳನ್ನು ಪ್ರತಿಬಿಂಬಿಸುವ ಅರ್ಥಪೂರ್ಣ ಸಿನಿಮಾಗಳು ಹೆಚ್ಚಾಗಿ ಬರುತ್ತಿದ್ದವು. ಆದರೆ ಇತ್ತೀಚೆಗೆ ಅಂತಹ ಸಿನಿಮಾಗಳ ಸಂಖ್ಯೆ ವಿರಳವಾಗಿದೆ. ಸಿನಿಮಾ ಮನರಂಜನೆ ಜೊತೆಗೆ ಸಮಾಜಕ್ಕೆ ಶಿಕ್ಷಣ ನೀಡುವ ಪರಿಣಾಮ ಕಾರಿ ಮಾಧ್ಯಮವಾಗಬೇಕು. ಇಂದಿನ ಮಾಧ್ಯಮಗಳು ವಿಶ್ವಾಸಾರ್ಹತೆ ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಾಮಾಜಿಕ ಉತ್ತಮ ಸಂದೇಶಗಳನ್ನು ನೀಡಬೇಕು ಎಂದರು.

ನಂತರ ಗೋಷ್ಠಿಯಲ್ಲಿ ಟಿವಿ 9 ವರದಿಗಾರ ರಾಮ್ ಮಾತನಾಡಿ, ಸುದ್ದಿ ನೀಡುವ ಆತುರದಲ್ಲಿ ನಿಖರತೆಯನ್ನು ಮರೆಯಬಾರದು. ಟಿಆರ್‌ಪಿ ಹಪಾಹಪಿ ಹಾಗೂ ಸಾಮಾಜಿಕ ಮಾಧ್ಯಮಗಳ ಸುಳ್ಳುಸುದ್ದಿಗಳ ಅಬ್ಬರದ ನಡುವೆ ಸತ್ಯನಿಷ್ಠ ವರದಿಗಾರಿಕೆಯೇ ಮಾಧ್ಯಮದ ಅಸ್ತಿತ್ವವನ್ನು ಉಳಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿಭಾಗದ ಮುಖ್ಯಸ್ಥರಾದ ಪ್ರೊ.ಎನ್. ಮಮತ, ಪ್ರೊ.ನಿರಂಜನ ವಾನಳ್ಳಿ, ಅತಿಥಿ ಉಪನ್ಯಾಸಕರಾದ ಡಾ.ಕುಮಾರಸ್ವಾಮಿ ಹಾಗೂ ಡಾ.ಬಿ.ಸಿ.ಸಂಜಯ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಸಂವಾದದ ಮೂಲಕ ಹಲವು ವಿಷಯಗಳನ್ನು ಚರ್ಚಿಸಿದರು.

ನಾಳೆ ಅಲೈನ್ಸ್ ಕ್ಲಬ್‌ನ ಪ್ರಾಂತೀಯ ಸಮ್ಮೇಳನ

ಮೈಸೂರು, ಡಿ.18(ಎಂಕೆ)– ಅಸೋಸಿಯೇಷನ್ ಆಫ್ ಅಲೈನ್ಸ್ ಕ್ಲಬ್ ಅಂತರರಾಷ್ಟ್ರೀಯ ಸಂಸ್ಥೆ 255ನೇ ಜಿಲ್ಲೆ ವತಿಯಿಂದ ಡಿ.20 ರಂದು ಬೆಳಗ್ಗೆ 8.30ಕ್ಕೆ ಹೂಟಗಳ್ಳಿಯ ಶ್ರೀ ಅನಂತೇಶ್ವರ ಸಭಾ ಭವನದಲ್ಲಿ ಪ್ರಾಂತೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಪ್ರಾಂತೀಯ ಅಧ್ಯಕ್ಷ ಅಲೈ ಶೋಭಾ ಸಿರಿ ಬಾಲು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಸಮ್ಮೇಳನದ ವೇದಿಕೆ ಕಾರ್ಯಕ್ರಮ ಉದ್ಘಾಟನೆಯಾಗಲಿದ್ದು, 'ಆಧುನಿಕತೆಯ ಕೊಡುಗೆ ಮಹಾಮಾರಿ ಕ್ಯಾನ್ಸರ್' ಕುರಿತು ವಿಷಯ ಮಂಡನೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ, ಕ್ಯಾನ್ಸರ್ ಕುರಿತು ಚಿತ್ರಕಲಾ ಪ್ರದರ್ಶನ, ಕ್ಯಾನ್ಸರ್ ಪೀಡಿತ ವ್ಯಕ್ತಿಯೊಬ್ಬರಿಗೆ ಆರ್ಥಿಕ ಸಹಾಯದ ಜೊತೆಗೆ ಮೈಸೂರು ವಿವಿ ಪ್ರಾಧ್ಯಾಪಕಿ ಸುತ್ತೂರು ಎಸ್.ಮಾಲಿನಿ ವಿಷಯ ಮಂಡಿಸಲಿದ್ದಾರೆ. ಎಸ್‌ವಿಇಐ ಸಮೂಹ ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಕೆ. ಪೋತರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸುಗಮ ಸಂಗೀತ ಪರಿ ಷತ್ತಿನ ನಾಗರಾಜ್ ವಿ.ಬೈರಿ, ಡಾ.ಎಸ್. ವೆಂಕಟೇಶ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಶೋಭಾ ಸಿರಿಬಾಲು, ಡಾ.ರಾಜು, ಮನೋಜ್, ಶ್ರೀನಿವಾಸ್ ಉಪಸ್ಥಿತರಿದ್ದರು.

ನಾಳೆ, ನಾಳಿದ್ದು ರಾಯಚೂರಲ್ಲಿ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ

ಮೈಸೂರಿಂದ ಅಧಿಕ ಸಾಹಿತ್ಯಾಸಕ್ತರು ಪಾಲ್ಗೊಳ್ಳಲು ಮಾಜಿ ಮೇಯರ್ ಪುರುಷೋತ್ತಮ್ ಮನವಿ



ರಾಯಚೂರಿನಲ್ಲಿ ನಡೆಯುವ 11ನೇ 'ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ'ದ ಪೋಸ್ಟರ್ ಅನ್ನು ಮಾಜಿ ಮೇಯರ್ ಪುರುಷೋತ್ತಮ್ ಬಿಡುಗಡೆ ಮಾಡಿದರು.

ಮೈಸೂರು, ಡಿ.18(ಎಂಕೆ)– ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕದ ವತಿಯಿಂದ ಡಿ.20 ಮತ್ತು 21 ರಂದು ರಾಯಚೂರಿನಲ್ಲಿ 11ನೇ 'ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ' ಆಯೋಜಿಸಲಾಗಿದ್ದು, ಮೈಸೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯಾಸಕ್ತರು ಭಾಗವಹಿಸಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಾಹಿತಿ ಡಾ. ಜಯದೇವಿ ಗಾಯಕವಾಡ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಮೈಸೂರಿನಲ್ಲಾದಂತೆ ರಾಯಚೂರಿನಲ್ಲಿಯೂ ಸಮ್ಮೇಳನ ಯಶಸ್ವಿಯಾಗಬೇಕು. ಈ ನಿಟ್ಟಿನಲ್ಲಿ ಮೈಸೂರಿನಿಂದ 3 ಸಾವಿರಕ್ಕೂ ಹೆಚ್ಚು ಸಾಹಿತ್ಯಾಸಕ್ತರು ಸಮ್ಮೇಳನದಲ್ಲಿ ಭಾಗವಹಿಸಬೇಕು ಎಂದರು.

ಕಳೆದ 31 ವರ್ಷದಿಂದ ದಲಿತ ಸಾಹಿತ್ಯ ಪರಿಷತ್ತು ಸಾಹಿತ್ಯ, ಸಂಘಟನೆ ಮೂಲಕ ಪ್ರೇರಣಾದಾಯಕವಾಗಿ ಕೆಲಸ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಯುವ ಸಾಹಿತಿಗಳನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿದೆ. ಅದರಂತೆ ಸಾಹಿತ್ಯ ಸಮ್ಮೇಳನದಲ್ಲಿಯೂ ಹಲವು ಗೋಷ್ಠಿಗಳಿದ್ದು, ಕವಿಗಳಿಗೆ ಸೂಕ್ತ ವೇದಿಕೆ ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು. ಇದೇ ವೇಳೆ 11ನೇ ದಲಿತ ಸಾಹಿತ್ಯ ಸಮ್ಮೇಳನದ ಪೋಸ್ಟರ್ ಬಿಡುಗಡೆ ಮಾಡಿದರು.

ಕಾವ್ಯ ರೂಪದ ರಾಮಾಯಣವನ್ನು ಕವಿಗಳು ಅನುಸರಿಸಿಕೊಂಡು ಬಂದಿದ್ದಾರೆ



ಮೈಸೂರಿನ ಮಾನಸಗಂಗೋತ್ರಿಯ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ಕೇಂದ್ರದಲ್ಲಿ ಆಯೋಜಿಸಿರುವ ಎರಡು ದಿನಗಳ ಕನ್ನಡ ಜೈನ ರಾಮಾಯಣ ಮತ್ತು ಆಧುನಿಕ ರಾಮಾಯಣ ಮಹಾಕಾವ್ಯಗಳ ತಾತ್ವಿಕ ಜಿಜ್ಞಾಸೆ ಕುರಿತ ವಿಚಾರ ಸಂಕಿರಣವನ್ನು ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಪದ್ಮಶೇಖರ್ ಉದ್ಘಾಟಿಸಿದರು.

ಮೈಸೂರು, ಡಿ.18(ಜಿಎ)–ನಾಮವಾಳಿ ರೂಪದಲ್ಲಿ ಇದ್ದ ರಾಮಕಥೆಯನ್ನು ಕ್ರಮೇಣ ವಾಲ್ಮೀಕಿ ಕಾವ್ಯ ರೂಪದಲ್ಲಿ ಕಟ್ಟಿಕೊಟ್ಟ ರಾಮಾಯಣವನ್ನು ಎಲ್ಲಾ ಕವಿಗಳು ಅನುಸರಿಸಿ, ಉಳಿಸಿಕೊಂಡು ಬಂದಿದ್ದಾರೆ ಎಂದು ಸಂಸ್ಕೃತ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಪದ್ಮಶೇಖರ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ಕೇಂದ್ರದಲ್ಲಿ ಆಯೋಜಿಸಿರುವ ಎರಡು ದಿನಗಳ ಕನ್ನಡ ಜೈನ ರಾಮಾಯಣ ಮತ್ತು ಆಧುನಿಕ ರಾಮಾಯಣ ಮಹಾಕಾವ್ಯಗಳ ತಾತ್ವಿಕ ಜಿಜ್ಞಾಸೆ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಜನರ ತಿಳುವಳಿಕೆಯಲ್ಲಿರುವಂತೆ ಆದರ್ಶ ಪಾತ್ರಗಳು, ಆಶಯ ಗುಣ, ಮೌಲ್ಯಗಳನ್ನು ಒಳಗೊಂಡಿರುವುದರಿಂದ ರಾಮಾಯಣ ಇಷ್ಟು ಜನಪ್ರಿಯತೆ ಪಡೆದುಕೊಂಡಿದೆ ಎಂದರು.

ಕೇಂದ್ರ ಸಾಹಿತ್ಯ ಪರಿಷತ್‌ನ ದಾಖಲೆಯಂತೆ ರಾಮಾಯಣವು ಭಾರತದ 22 ಭಾಷೆಗಳಲ್ಲಿ ಮೂಡಿ ಬಂದಿದ್ದು, 6 ಸಾವಿರ ದಾಖಲೆಗಳಿವೆ. ಹಾಗೇ ಇಂಗ್ಲಿಷ್, ಜಪಾನ್, ನೇಪಾಳಿ, ರಷ್ಯಾ, ಫ್ರೆಂಚ್ ಸೇರಿ ದಂತೆ 34 ವಿದೇಶಿ ಭಾಷೆಯಲ್ಲಿ ಮೂಡಿ ಬಂದಿದ್ದು, ಸಾವಿರ ದಾಖಲೆಗಳಿವೆ. ಹಿರಿಯ ಸಾಹಿತಿ ಟಿ.ವಿ.ವೆಂಕಟಚಲ ಶಾಸ್ತ್ರೀಯ ಅವರು ಕಾವ್ಯ, ನಾಟಕ, ಹಾಡು, ಯಕ್ಷಗಾನ ಸೇರಿದಂತೆ ಅನೇಕ ರೂಪದಲ್ಲಿ ಸಾವಿರ ದಾಖಲೆಗಳನ್ನು ನೀಡಿದ್ದಾರೆ ಎಂದರು.

ರಾಮಾಯಾಣ ಕಥೆ ಓದುವಾಗ ಏಕಕಾಲದಲ್ಲಿ ಚರಿತ್ರೆ, ಪುರಾಣವಾಗಿ ಕಾಣಿಸುವುದರಿಂದ ಅದು ಸಾಂಸ್ಕೃತಿಕ ಪಠ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮತ್ತೆ ಮತ್ತೆ ಓದುತ್ತೇವೆ. ರಾಮನ ಪಯಣದ ಕುರಿತು ಸಾಕಷ್ಟು ದಾಖಲೆಗಳಿವೆ. ಶ್ರೀಲಂಕದಲ್ಲಿ ಸೀತೆ ಉಳಿದುಕೊಂಡಿದ್ದ ಸ್ಥಳವಿದ್ದು, ಅದನ್ನು ನೋಡಿದಾಗ ಇದು ಪುರಾಣವೇ, ಐತಿಹಾಸಿಕವೇ ಎಂದು ಕಾಡಲಿದ್ದು, ಹೀಗೆ ರಾಮಾಯಣ ವನ್ನು ಮೂರು ಮಜಿಲುಗಳಲ್ಲಿ ಗುರುತಿಸಬಹುದು ಎಂದು ತಿಳಿಸಿದರು.

ಪ್ರೊ.ರಾಗೌ ಅವರ ಪ್ರಕಾರ ರಾಮಾಯಣದ ಕಥೆ ನಿಶ್ಚಿತ ಪ್ರದೇಶದಲ್ಲಿ ರೂಪಿತವಾಗಿ ನಂತರ ರಾಷ್ಟ್ರೀಯ ಘಟನೆಯಾಗಿ ಸಂಸ್ಕೃತಿ ಪ್ರತಿನಿಧಿಯಾಗಿ ರೂಪಿತವಾಗಿದೆ. ಇದನ್ನು ನಾನು ಒಪ್ಪುತ್ತೇನೆ. ರಾಮಾಯಣ ಬರೆದವರು ಯಾರು? ಎಂದು ಇಂದಿಗೂ ಗೊತ್ತಿಲ್ಲ. ಮೂಲ ರಚನೆಕಾರರು ಯಾರು ಎಂಬುದು ನಮಗೆ ಗೊತ್ತಿಲ್ಲ ಎಂದು ವಿವರಿಸಿದರು.

ವಿಚಾರ ಸಂಕಿರಣದಲ್ಲಿ ಸಂಸ್ಕೃತಿ ಚಿಂತಕ ತಿಮ್ಮರಾಜು, ಮದ್ರಾಸ್ ವಿವಿ ಪ್ರಾಧ್ಯಾಪಕಿ ಪ್ರೊ.ತಮಿಳ್‌ಸೆಲ್ವಿ, ಕವಿ ಡಾ.ಹೇಮಚಂದ್ರ ಅವರುಗಳು ಮೊದಲ ದಿನ ಅನೇಕ ವಿಚಾರಗಳ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ಕೇಂದ್ರ ಅಧ್ಯಕ್ಷೆ ಪ್ರೊ.ಡಿ.ಶಶಿಕಲಾ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾದ ಮಾಧುರ್ಯ ಕಾರ್ಯಕ್ರಮ

ಮೈಸೂರು, ಡಿ.18 – ಮೈಸೂರಿನ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ವತಿಯಿಂದ ಡಿ. 20 ರಂದು ಸಂಜೆ 6 ಗಂಟೆಗೆ ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ಶ್ರೀಮತಿ ಶ್ರೀದೇವಿ ಮಂಜುನಾಥ್ ಅವರಿಂದ ನಾದ ಮಾಧುರ್ಯ ಕಾರ್ಯಕ್ರಮವನ್ನು ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನದಲ್ಲಿ ಏರ್ಪಡಿಸಲಾಗಿದೆ. ಸಮಾರಂಭದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಂಶಿ ಪ್ರಸನ್ನ ಕುಮಾರ್ ಹಾಗೂ ನೂಪುರ ಸಂಸ್ಥೆಯ ಸಂಸ್ಥಾಪಕ ಕೆ. ರಾಮಮೂರ್ತಿರಾವ್ ಅವರನ್ನು ಸನ್ಮಾನಿಸಲಾಗುವುದು.

ಡಿ.21ಕ್ಕೆ ಪತಂಜಲಿ ಯೋಗ ಶಿಕ್ಷಣ ಸಮಿತಿ ರಜತ ಮಹೋತ್ಸವ

ಮೈಸೂರು, ಡಿ.18(ಎಂಕೆ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಡಿ.21 ರಂದು ಪತಂಜಲಿ ಯೋಗ ಶಿಕ್ಷಣ ಸಮಿತಿ ಮೈಸೂರು ಘಟಕದ ರಜತ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಘಟಕದ ಪದಾಧಿಕಾರಿ ಸತ್ಯನಾರಾಯಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಮಹೋತ್ಸವ ಉದ್ಘಾಟನೆ ನೆರವೇರಲಿದ್ದು, ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕೆ.ಎಸ್. ಗೋಪಾಲಕೃಷ್ಣ, ಡಾ.ಎಸ್. ಅಹಲ್ಯ, ಡಾ.ಕೆ.ಎಲ್. ಶಂಕರನಾರಾಯಣ ಜೋಯಿಸ್, ಎಂ. ರೆಡ್ಡಯ್ಯ, ಎನ್.ಎಸ್. ಮಹೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಮಧ್ಯಾಹ್ನ 1 ರಿಂದ ರಾತ್ರಿ 9 ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕೆ.ಎಸ್.ಗೋಪಾಲಕೃಷ್ಣ, ನಾಗೇಂದ್ರ, ಕಿರಣ್ ಮತ್ತಿತರರಿದ್ದರು.

ರಾಜಕೀಯದಲ್ಲಿ ದುಷ್ಟರೇ ಹೆಚ್ಚಾಗುತ್ತಿದ್ದಾರೆ!

● ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅಭಿಮತ ● ಇದಕ್ಕೆ ನಮ್ಮ ದೇಶವೂ ಹೊರತಾಗೇನು ಇಲ್ಲ

ಮೈಸೂರು, ಡಿ.18(ಎಸ್‌ಪಿಎನ್)– ಜಗತ್ತಿನ ವಿವಿಧ ರಾಷ್ಟ್ರಗಳ ರಾಜಕೀಯದಲ್ಲಿ ದುಷ್ಟರೇ ಹೆಚ್ಚಾಗುತ್ತಿದ್ದಾರೆ. ಇದು ನಮ್ಮ ದೇಶದ ರಾಜಕೀಯ ಕ್ಷೇತ್ರವೂ ಹೊರತಾಗಿಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಮೈಸೂರು ನಿರಂತರ ಫೌಂಡೇಷನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಐದು ದಿನಗಳ ನಿರಂತರ ರಂಗ ಉತ್ಸವ–2025ದಲ್ಲಿ ಪಾಲ್ಗೊಂಡು ಅವರು, ಮಾತನಾಡಿದರು.


ಮೈಸೂರು ನಿರಂತರ ಫೌಂಡೇಷನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಐದು ದಿನಗಳ ನಿರಂತರ ರಂಗ ಉತ್ಸವ–2025 ವನ್ನು ಹಿರಿಯ ಕಲಾವಿದೆ ರಾಮೇಶ್ವರಿ ವರ್ಮ ಉದ್ಘಾಟಿಸಿದರು.

ಭಾರತ ಮಾತ್ರವಲ್ಲ. ಇಡೀ ಜಾಗತಿಕ ವ್ಯವಸ್ಥೆಯಲ್ಲಿ ಹಿಂಸೆ, ಕ್ರೌರ್ಯ, ಕೋಮುವಾದ ತುಂಬಿಕೊಂಡಿದೆ. ಹಾಗಾಗಿ ರಾಜಕೀಯ ಕ್ಷೇತ್ರದಲ್ಲಿ ದುಷ್ಟರೇ ಹೆಚ್ಚಾಗಿದ್ದಾರೆ. ಇದರಿಂದ ಜಗತ್ತಿನ ಸಾಮಾಜಿಕ ವ್ಯವಸ್ಥೆ ಏರುಪೇರಾಗುತ್ತಿದೆ. ಇಂತಹ ದುರ್ಬಲ ಪರಿಸ್ಥಿತಿಯಲ್ಲಿ ಎಲ್ಲರಲ್ಲೂ ಸಾಂಸ್ಕೃತಿಕ ಮನಸ್ಥಿತಿಯನ್ನು ಬೆಳೆಸಬೇಕು ಎಂದು ಕಿವಿಮಾತು ಹೇಳಿದರು.

ಕಲೆಯ ಬಗ್ಗೆ ಚಿಂತನೆ, ಅಲೋಚನೆ ಮತ್ತು ಬದುಕು ಇವೆಲ್ಲವನ್ನೂ ಯಾರು ಒಳಗೊಂಡಿರುತ್ತಾರೋ ಅವರೆಲ್ಲರೂ ಸಮಾಜವನ್ನು ಉಳಿಸುವುದರಲ್ಲಿ ಯಾವ ಅನುಮಾನವೂ ಇಲ್ಲ. ದ್ವೇಷವನ್ನು ಬಿತ್ತಲು ರಂಗಭೂಮಿಯ ಮೂಲಕ ನಾಟಕಗಳನ್ನು ರಚನೆ ಮಾಡುತ್ತಿದ್ದಾರೆ. ಇಂತಹ ಲೇಖಕರಿಗೆ ನಾಚಿಕೆ ಆಗಬೇಕು. ಬಲಪಂಥೀಯ ಮನಸ್ಸುಗಳು ರಂಗಭೂಮಿ ಮೂಲಕ ಕೋಮುವಾದ ಬಿತ್ತಲು ಪ್ರಯತ್ನಿಸುತ್ತಿದೆ. ಇಂತಹ ಕಲೆಯನ್ನು ನಾವು ಒಪ್ಪಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಯಾವತ್ತು ಕೂಡ ಮನುಷ್ಯ. ಮನುಷ್ಯರ ನಡುವೆ ಭಿನ್ನ, ಭೇದಭಾವಗಳನ್ನು ಎಣಿಸಬಾರದು. ಜಾತಿ ವಿನಾಶಕ್ಕೆ ಕಾರಣವಾಗಬೇಕೆ ಹೊರತು, ಜಾತಿ ವೈಷಮ್ಯವನ್ನು ಬೆಳೆಸುವುದಕ್ಕೆ ಕಾರಣವಾಗಬಾರದು. ಪ್ರಸ್ತುತ ದಿನಗಳಲ್ಲಿ ಕಲೆ, ಚಿಂತನೆ ಮತ್ತು ಬದುಕು ಈ ಮೂರನ್ನು ಏಕತ್ವಗೊಳಿಸುವ ಬದ್ಧತೆ ಅತ್ಯಗತ್ಯವಾಗಿದೆ. ಇಂದಿನ ಜಾಗತಿಕ ಪರಿಸ್ಥಿತಿ ಹಿಂಸೆ, ಕ್ರೌರ್ಯ ಮತ್ತು ಯುದ್ಧಗಳಿಂದ ತುಂಬಿರುವ ಸಂದರ್ಭದಲ್ಲಿ, ಸಂವೇದನಾ ಶೀಲತೆ ಮತ್ತು ಸಾಂಸ್ಕೃತಿಕ ಮನೋಭಾವವನ್ನು ಬೆಳೆಸುವುದು ಸಾಹಿತಿಗಳು, ಕಲಾವಿದರು ಮತ್ತು ಕ್ರೀಡಾಪಟುಗಳ ಸಾಮಾಜಿಕ ಹೊಣೆಗಾರಿಕೆಯಾಗಬೇಕು ಎಂದು ಕಿವಿಮಾತು ಹೇಳಿದರು.

ಕಲೆ ಎಂದಿಗೂ ಮನುಷ್ಯರ ನಡುವೆ ಭಿನ್ನತೆಗಳನ್ನು ಎಣಿಸಬಾರದು; ಜಾತಿ ವೈಷಮ್ಯವನ್ನು ಬೆಳೆಸದೆ, ಜಾತಿ ವಿನಾಶಕ್ಕೆ ಕಾರಣವಾಗಬೇಕು. ಇಂದಿನ ರಂಗಭೂಮಿ ಅದನ್ನೇ ಸಾಧಿಸುತ್ತಿದೆ. ನಿರಂತರ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಸಾಮಾಜಿಕ ಬದ್ಧತೆಯನ್ನು ಉಳಿಸಿಕೊಂಡು ಬರುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಸ್ತಾವಿಕವಾಗಿ ಪ್ರಸಾದ್ ಕುಂದೂರು ಮಾತನಾಡಿ, ಇಂದಿನ ಸಮಾಜದ ಸವಾಲುಗಳು ಹಾಗೂ ನಿರಂತರ ರಂಗೋತ್ಸವದ ಆಶಯ ಮತ್ತು ಉದ್ದೇಶಗಳನ್ನು ವಿವರಿಸಿದರು. ಈ ರಂಗೋತ್ಸವದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಕಾಳೇಗೌಡ ನಾಗವಾರ, ಪ್ರೊ. ಕಾಳಚನ್ನೇಗೌಡ, ಪ್ರೊ.ಚಿದಾನಂದ ಗೌಡ,, ನಿರಂತರದ ಶ್ರೀನಿವಾಸ್ ಪಾಲಹಳ್ಳಿ, ಹರಿಪ್ರಸಾದ್, ಪದ್ಮಶ್ರೀ ರಾವ್ ಸೇರಿದಂತೆ ನೂರಾರು ಕಲಾಸಕ್ತರು ಭಾಗವಹಿಸಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ಬೆಂಗಳೂರಿನ ಕಲಾ ಮಾಧ್ಯಮ ತಂಡದ ಅಭಿನಯದ, ನಿರ್ದೇಶಕ ಗಿರಿರಾಜ್ ನಿರ್ದೇಶಿಸಿರುವ 'ನನ್ನ ತೇಜಸ್ವಿ' ನಾಟಕವು ಹೌಸ್‌ಫುಲ್ ಪ್ರದರ್ಶನಗೊಂಡು, ನಿರಂತರ ರಂಗೋತ್ಸವಕ್ಕೆ ಮೆರಗು ತಂದಿತು.

ಸಮಾಜದ ಕನ್ನಡಿ

ರಂಗಭೂಮಿ ಕೇವಲ ಮನರಂಜನೆಯಲ್ಲ; ಅದು ಸಮಾಜದ ಕನ್ನಡಿ ಹಾಗೂ ನಮ್ಮ ಆತ್ಮಸಾಕ್ಷಿ. ಈ ರಂಗೋತ್ಸವ ಒಂದು ಸಾಕ್ಷಿ ಪ್ರಜ್ಞೆಯಾಗಿದೆ. ನಿರಂತರ ತಂಡವು ನಮ್ಮ ಸಂವಿಧಾನದ ಮೂಲಗಳಾದ ಸಮಾನತೆ, ಸ್ವಾತಂತ್ರ್ಯ, ಸೋದರತ್ವ ಮತ್ತು ಸಾಮಾಜಿಕ ನ್ಯಾಯಕ್ಕೆ ಅನೇಕ ವರ್ಷಗಳಿಂದ ಬದ್ಧವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸಂವಿಧಾನ ಕೇವಲ ಕಾನೂನು ದಾಖಲೆ ಅಲ್ಲ. ಅದೊಂದು ಜೀವನದ ತತ್ವ. ಸಮಾಜದಲ್ಲಿ ವ್ಯಕ್ತಿಯ ಗೌರವ ಮತ್ತು ಸಾಮಾಜಿಕ ನ್ಯಾಯದ ಕಾಳಜಿಯನ್ನು ನಿರಂತರವಾಗಿ ಅಭಿವ್ಯಕ್ತಿಸುತ್ತಿರುವ ನಿರಂತರ ತಂಡದ ಕಾರ್ಯ ಶ್ಲಾಘನೀಯ.

- ರಾಮೇಶ್ವರಿ ವರ್ಮ, ಹಿರಿಯ ಕಲಾವಿದೆ

ದಸರಾ ವಸ್ತುಪ್ರದರ್ಶನದಲ್ಲಿ ನಾಳೆಯಿಂದ 'ಕಲಾ ಸಂಭ್ರಮ' ವಿವಿಧ ಕಾರ್ಯಕ್ರಮ


ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ 'ಕಲಾ ಸಂಭ್ರಮ' ವಸ್ತುಪ್ರದರ್ಶನ ಪೋಸ್ಟರ್ ಬಿಡುಗಡೆಗೊಳಿಸಿದರು.

ಮೈಸೂರು, ಡಿ.18(ವಿವಿಹೆಚ್)– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಲಲಿತ ಕಲೆ ಮತ್ತು ಕರಕುಶಲ ಉಪಸಮಿತಿ ವತಿಯಿಂದ ಡಿ.20 ರಿಂದ 3 ದಿನಗಳ ಕಾಲ ಕಲಾ ಸಂಭ್ರಮ ವಸ್ತುಪ್ರದರ್ಶನ ಬಿವಿ. ಕಾರಂತ ರಂಗ ಮಂದಿರದಲ್ಲಿ ನಡೆಯಲಿದೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ 'ಕಲಾ ಸಂಭ್ರಮ' ವಸ್ತುಪ್ರದರ್ಶನ ಪೋಸ್ಟರ್ ಅನ್ನು ಇಂದು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿ, ಲಲಿತ ಕಲೆ ಮತ್ತು ಕರಕುಶಲ ಸಮಿತಿ ವತಿಯಿಂದ ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಲಾಸಂಭ್ರಮದಲ್ಲಿ ಚಿತ್ರಸಂತೆ, ಚಿತ್ರಕಲಾ ಸ್ಪರ್ಧೆ, ಕಲಾಕೃತಿಗಳ ಪ್ರದರ್ಶನ, ಕಾವ್ಯಕುಂಚ ಗಾಯನ, ಜನಪದ ಗಾಯನ, ಯೋಗನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ನಗರಪಾಲಿಕೆ ಮಾಜಿ ಸದಸ್ಯ ರಘು ರಾಜೇ ಅರಸ್, ಲಲಿತ ಕಲೆ ಕರಕುಶಲ ಉಪ ಸಮಿತಿಯ ಅಧ್ಯಕ್ಷ ಉಮೇಶ್, ಕಾರ್ಯಾಧ್ಯಕ್ಷೆ ಲತಾ ರಂಗನಾಥ್, ಉಪಾಧ್ಯಕ್ಷರಾದ ಚರಣ್ ರಾಜ್, ನಾಗರಾಜ್, ಗವಿಸಿದ್ದು, ಆರ್.ಹೆಚ್.ಕುಮಾರ್, ಇಂದಿರಾ ಎಸ್ಮಸಿ, ವೇದ.ಎಸ್, ಎಸ್.ಬಿ. ಸಿದ್ದರಾಜೇ ಅರಸ್, ರಶ್ಮಿ, ಮೊಹಮ್ಮದ್ ನಾಜೀಬುಲ್ಲ, ಪ್ರವೀಣ್ ಕುಮಾರ್, ಸೈಯದ್ ವಸೀಮ್ ಉಪಸ್ಥಿತರಿದ್ದರು.

ಕಾರ್ಯಕ್ರಮಗಳ ವಿವರ: ಮೊದಲ ದಿನ ಡಿ.21ರಂದು ಸಂಜೆ 7ಕ್ಕೆ ಕಲಾವಿದ ನಿತಿನ್ ಮತ್ತು ತಂಡ, ಕಲಾನಿಕೇತನ ಕಾಲೇಜು ವರ್ಚುಯಲ್ ಕಲಾ ವಿದ್ಯಾರ್ಥಿಗಳಿಂದ ಕಾವ್ಯ ಕಂಚ ಗಾಯನ ಕಾರ್ಯಕ್ರಮ, ಡಿ.22ರಂದು ಸಂಜೆ 7ಕ್ಕೆ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರಿಂದ ನೃತ್ಯಪ್ರದರ್ಶನ, ಯೋಗ ನೃತ್ಯ– ಟ್ರೂ ಫೌಂಡೇಶನ್ ನಂಜನಗೂಡು, ಪ್ರೌಢ ಶಾಲಾ ಮಕ್ಕಳಿಂದ ನೃತ್ಯ ಹಾಡುಗಾರಿಕೆ, ಡಿ.23ರಂದು ಸಂಜೆ 7ಕ್ಕೆ ಸೂತ್ರ ಫೌಂಡೇಶನ್ ವತಿಯಿಂದ ದೃಶ್ಯರಾಗ ರಂಗ ಸಂಗಮ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 7899481039 ಸಂಪರ್ಕಿಸಬಹುದಾಗಿದೆ.

ಕಾಡಾನೆ ದಾಳಿ: ಕೃಷಿ ಕೂಲಿ ಕಾರ್ಮಿಕ ಸಾವು

ಹನೂರು, ಡಿ.18– ಕಾಡಾನೆ ದಾಳಿಗೆ ಕೃಷಿ ಕೂಲಿ ಕಾರ್ಮಿಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಜಲ್ಲಿಪಾಳ್ಯ ಬಳಿ ನಡೆದಿದೆ. ತಮಿಳುನಾಡಿನ ಈರೋಡ್ ಜಿಲ್ಲೆಯ ಸತ್ತಿ ತಾಲೂಕಿನ ಮಾಕನಪಾಳ್ಯ ಗ್ರಾಮದ ನಿವಾಸಿ ಶಿವಮೂರ್ತಿ (50) ಸಾವನ್ನಪ್ಪಿದವರು. ಬಾಳೆ ಫಸಲು ಕಟಾವು ಕೆಲಸಕ್ಕೆ ನಾಲ್ವರು ಕೂಲಿ ಕಾರ್ಮಿಕರು 2 ಬೈಕ್‌ಗಳಲ್ಲಿ ಮಾಕನಪಾಳ್ಯದಿಂದ ಹನೂರು ತಾಲೂಕಿನ ಹೂಗ್ಯಂ ಗ್ರಾಮದ ಜಮೀನಿಗೆ ಆಗಮಿಸಿದ್ದರು. ಕೆಲಸ ಮುಗಿದ ಬಳಿಕ ಬೈಕ್‌ನಲ್ಲಿ ನಾಲ್ವರೂ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಕಾಡಂಚಿನ ರಸ್ತೆ ಬದಿಯಲ್ಲಿ ನಿಂತಿದ್ದ ಕಾಡಾನೆ ಬೈಕ್‌ನ ಹಿಂಬದಿ ಕುಳಿತಿದ್ದ ಶಿವಮೂರ್ತಿ ಮೇಲೆ ದಾಳಿ ನಡೆಸಿದೆ. ಇದರಿಂದ ಗಾಬರಿಗೊಂಡ ಸವಾರ ಸ್ಥಳದಲ್ಲೇ ಬೈಕ್ ಬಿಟ್ಟು ಪರಾರಿಯಾಗಿದ್ದು, ಆದರೆ ಶಿವಮೂರ್ತಿ ಕಾಡಾನೆ ದಾಳಿಗೆ ಸಿಲುಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮಲೆ ಮಹದೇಶ್ವರ ಬೆಟ್ಟ ವನ್ಯಜೀವಿ ಧಾಮದ ಡಿಸಿಎಫ್ ಭಾಸ್ಕರ್, ಹೂಗ್ಯಂ ವಲಯ ಅರಣ್ಯ ಅಧಿಕಾರಿ ಜಿತೇಂದ್ರ ಹಾಘೂ ಸಿಬ್ಬಂದಿ ಪರಿಶೀಲನೆ ನಡೆಸಿ ಶವವನ್ನು ಹನೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಪಿಎಲ್ ಕಾರ್ಡ್‌ದಾರರ ಆದಾಯ ಮಿತಿ ಪರಿಷ್ಕರಣೆ ಚಿಂತನೆ

- ಆಹಾರ ಸಚಿವ ಕೆ.ಎಚ್.ಮುನಿಯಪ್ಪ ವಿಧಾನಸಭೆಗೆ ಮಾಹಿತಿ
- ಕೂಲಿಕಾರರ ಆದಾಯ ಮಿತಿ ಪರಿಗಣಿಸಿ ನಿರ್ಧಾರ

ಬೆಳಗಾವಿ, ಸುವರ್ಣವಿಧಾನಸೌಧ, ಡಿ.18(ಕೆಂಎಂಬಿ)–ಬಿಪಿಎಲ್ ಪಡಿತರ ಚೀಟಿದಾರರ ಆದಾಯ ಮಿತಿ ಪರಿಷ್ಕರಣೆಗೆ ಸರ್ಕಾರ ಚಿಂತನೆ ನಡೆಸಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿ ರಾಜೇಶ್ ನಾಯಕ್ ಹಾಗೂ ಬಾಲಕೃಷ್ಣ ಸಿ.ಎನ್. ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕೇಂದ್ರ ಸರ್ಕಾರ ಬಿಪಿಎಲ್ ಕಾರ್ಡ್‌ದಾರರ ಆದಾಯ ಮಿತಿಯನ್ನು 1.20 ಲಕ್ಷ ರೂ.ಗೆ ಮಿತಿಗೊಳಿಸಿದೆ. ದಿನಕ್ಕೆ 500 ರೂ. ಪಡೆಯುವ ಕೂಲಿಕಾರರ ಆದಾಯವೂ ವರ್ಷಕ್ಕೆ 1.80 ಲಕ್ಷ ರೂ.ಗಳಿಗೂ ಅಧಿಕವಾಗಲಿದ್ದು, ಈ ಹಿನ್ನೆಲೆಯಲ್ಲಿ ಬಿಪಿಎಲ್ ಕಾರ್ಡ್‌ದಾರರ ಆದಾಯ ಮಿತಿ ಪರಿಷ್ಕರಣೆ ಚಿಂತನೆ ನಡೆದಿದೆ ಎಂದರು.

ರಾಜ್ಯದಲ್ಲಿ 7,75,206 ಶಂಕಾಸ್ಪದ ಪಡಿತರ ಫಲಾನುಭವಿಗಳು ಇರುವರೆಂಬುದಾಗಿ ಕೇಂದ್ರ ಸರ್ಕಾರ ಗುರುತಿಸಿದೆ. 4.53 ಲಕ್ಷ ಬಿಪಿಎಲ್ ಹಾಗೂ 1.25 ಲಕ್ಷ ಎಪಿಎಲ್ ಕಾರ್ಡ್ ಕುಟುಂಬಗಳಿವೆ.


ರಾಜ್ಯದ ಜನಸಂಖ್ಯೆಗೆ ಹೋಲಿಸಿದರೆ ಶೇ.73ರಷ್ಟು ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಹೊಂದಿವೆ. ರಾಜ್ಯ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಪಾವತಿಯಲ್ಲಿ ದೇಶದಲ್ಲಿ ಮುಂಚೂಣಿಯಲ್ಲಿದೆ. ಈ ಅಂಶಗಳನ್ನು ಪರಿಗಣಿಸಿದರೆ ಬಿಪಿಎಲ್ ಕುಟುಂಬಗಳ ಪ್ರಮಾಣ ಶೇ.50 ಇರಬೇಕಿತ್ತು ಆದರೆ, ಇದಕ್ಕೂ ಹೆಚ್ಚಿನ ಕುಟುಂಬ ಬಿಪಿಎಲ್ ಕಾರ್ಡ್‌ಗಳಿವೆ.

ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿ ಪಡೆಯುವ ಹಾಗೂ ಹೊರಗಿಡುವ ಮಾನದಂಡಗಳನ್ನು 2017ರಲ್ಲಿ ರೂಪಿಸಲಾಗಿದೆ.

ಇದರನ್ವಯ ಸರ್ಕಾರಿ, ಅನುದಾನಿತ ಸಂಸ್ಥೆಗಳು, ಮಂಡಳಿ, ನಿಗಮ, ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರು, ಆದಾಯ, ಸೇವಾ ಹಾಗೂ ಜಿಎಸ್‌ಟಿ ಪಾವತಿ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಲ್ಲ.

ಆದಾಯ ಮಿತಿ ಪರಿಷ್ಕರಣೆಗೆ ಚಿಂತನೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಬಿಪಿಎಲ್ ಪಡಿತರ ಕಾರ್ಡ್‌ಗಳನ್ನು ರದ್ದು ಮಾಡದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸದ್ಯಕ್ಕೆ ವೈದ್ಯಕೀಯ ಆಧಾರದಲ್ಲಿ ಮಾತ್ರ ಬಿಪಿಎಲ್ ಪಡಿತರಚೀಟಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಕುಟುಂಬದ ಯಾರಾದರೂ ಸದಸ್ಯರು ಸರ್ಕಾರಿ ನೌಕರಿಗೆ ಸೇರಿದ ಕಾರಣಕ್ಕೆ ಬಿಪಿಎಲ್ ಕಾರ್ಡ್ ರದ್ದಾಗಿದ್ದರೆ, ಬಾಧಿತ ಕುಟುಂಬದವರು ನೌಕರಿಗೆ ಸೇರಿದವರು ತಮ್ಮೊಂದಿಗೆ ವಾಸವಾಗಿಲ್ಲ ಎಂಬ ಪುರಾವೆ ಒದಗಿಸಿ, ಸಂಬಂಧಪಟ್ಟ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದರೆ 15 ದಿನದೊಳಗೆ ಬಿಪಿಎಲ್ ಕಾರ್ಡ್ ನೀಡಲಾಗುತ್ತದೆ ಎಂದರು.





MUDA APPROVED
SITES FOR SALE
(30X40, 30X50, ODD Dimension)
Near Airport, Nanjanagud Road,
1.5 Kms from Mysore Airport,
10 kms from Mysore Palace
For more details contact
MOB:- 8197830004

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

HOUSE FOR SALE IN GATED- COMMUNITY
As Per Your Requirement
Architect Designed Near
St, Joseph School, Mysore
20x40 39.6 Lakhs
30x50 75.5 Lakhs
8123387555
7259348777

COMMERCIAL BUILDING FOR SALE
@ Nanjumalige
30x35. Contact:
Mob: 9480988340

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY*
9901291267
9731591267

WE ARE HIRING
FOR PHARMA AID
SALES MAN
SALES GIRLS
Sri Murugan Medicals Stores
Saraswathipuram, Mysore
Call: 99455 78496
Send you resume Email
muruganhariprasad6@gmail.com

G9 projects
Designing your Dreams
Vee2 Developers
Poorva shelters Phase - I, II & III
Year End Offer till 31-12-2025
Book a Plot
Take a Hero HF 100 Bike
Price Starts with ₹ 2,099/-sq.ft
8055-00-44-00

PROPERTIES FOR SALE
Ready for Registration
Prime Locations
43x93
East Facing Ashokapuram
Railway Station 100 Mtr
Near Bedarakanappa Temple.
40x60
Commercial Site
East Facing
Ramakrishna Nagar
'H' Block
42.5x100
Commercial Property,
80 Feet Road
Near NIE College Road ,
(Brokers Excuse)
9008111454

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ: 12000 (24 CT)
Mob: 9108146123

ನೇರವಾಗಿ ಫ್ಯಾಕ್ಟರಿಯಿಂದ
ಬ್ರಾ ಮಾರಾಟ
ಮಹಿಳೆಯರ ಬ್ರಾಗಳು, ಒಳ ಉಡುಪುಗಳು, ಜಾಕೆಟ್, ಫುಟ್‌ವೇರ್, ಶೇಪ್‌ವೇರ್ ಮತ್ತು ನೈಟ್‌ವೇರ್
UP TO 70% OFF
ಮಾರಾಟ 5 ದಿನಗಳು
₹3499 WORTH 3 BRANDED WOMEN'S BRA ₹1199 Only
₹1999 WORTH 3 BRANDED WOMEN'S PANTIES ₹499 Only
enamor
ನಂಜರಾಜ ಬಹದ್ದೂರು ಛತ್ರ
ಮೆಟ್ರೋಪೋಲ್ ಸರ್ಕಲ್ ಹತ್ತಿರ, ವಿನೋಬಾ ರಸ್ತೆ, ಶಿವರಾಂಪೇಟೆ, ಮೈಸೂರು 570001
Car Parking Available | Time : 10 am to 10 pm

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570 005.

ಸಂಖ್ಯೆ:ಮೈಅಪ್ರಾ:ನಯೋಶಾ:ಭೂಉಬ:ನಯೋ–1: :2025–26 ದಿನಾಂಕ :18/12/2025

ಸಾರ್ವಜನಿಕ ಪ್ರಕಟಣೆ

ಡಾ॥ ಶ್ರೀ ನಾಗಣ್ಣ, ಅಧ್ಯಕ್ಷರು, ಭಾರತೀಯ ವಿದ್ಯಾಭವನ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮದ ಸ.ನಂ.241/1ಎ, 241/1ಬಿ ಮತ್ತು 241/1ಸಿ ರ ಒಟ್ಟು 02 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನಿಗೆ ಇಲವಾಲ ಗ್ರಾಮ ಪಂಚಾಯಿತಿಯಲ್ಲಿನ ಸ್ವತ್ತಿನ ನಿರ್ಧರಣಾ ಸಂಖ್ಯೆ:2229, 2229/1, 2229/2 ರ ವಿಸ್ತೀರ್ಣ 11321.18 ಚ.ಮೀ ಜಾಗದಲ್ಲಿ ಶೈಕ್ಷಣಿಕ ಉದ್ದೇಶದ ಕಟ್ಟಡ ನಿರ್ಮಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇಲವಾಲ ಗ್ರಾಮ ಪಂಚಾಯಿತಿ ರವರು ಕಟ್ಟಡ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಟ್ಟಡದ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ಸರ್ಕಾರದ ಸುತ್ತೋಲೆಯಂತೆ ಕ್ರಮವಹಿಸಬೇಕಾಗಿದ್ದು, ಅದರಂತೆ, ಕಟ್ಟಡದ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ. ನಿಗಧಿತ ಅವಧಿ ಮೀರಿದ ನಂತರ, ಸ್ವೀಕೃತವಾಗುವ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ನಗರ ಯೋಜಕ ಸದಸ್ಯರು,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

COMMERCIAL SPACE FOR RENT
. 1500 Sq.ft Area
. Basement & Second Floor
. 36/37 DD Urs Road
Contact:- 77601 24151

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈಅಪ್ರಾ/ವ.ಕ–1/2025–26 ದಿನಾಂಕ :18/12/2025

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ರೈಲ್ವೆ ವರ್ಕ್‌ಷಾಪ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಗಂಗಾಧರಂ.ಕೆ ರವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೈಸೂರು ನಗರದ ಮಾನಂದವಾಡಿ ರಸ್ತೆ ಬ್ಲಾಕ್–2 ಬಡಾವಣೆಯ ನಿ.ಸಂಖ್ಯೆ: 100 ಅಳತೆ: **72x40** ಅಡಿ ನಿವೇಶನವು ದಿ:30.07.1930 ರಂದು ಮಂಜೂರಾಗಿರುತ್ತದೆ.

ಮೂಲ ಮಂಜೂರಾತಿದಾರರಾದ ಶ್ರೀ ಗಂಗಾಧರಂ.ಕೆ ರವರು ಮರಣ ಹೊಂದಿರುತ್ತಾರೆ. ಲೇ॥ ಗಂಗಾಧರಂ.ಕೆ ರವರ ಕುಟುಂಬ ಸದಸ್ಯರುಗಳು ಸೇರಿ ಶ್ರೀ ಬಸಪ್ಪ ಬಿನ್ ಶ್ರೀ ನಂಜಪ್ಪ ರವರಿಗೆ 1ನೇ ಪುಸ್ತಕದ 2644ನೇ ಸಂಪುಟದಲ್ಲಿ 38–42 ನೇ ಪುಟದಲ್ಲಿ 2005ನೇ ನಂಬರಾಗಿ ದಿ:10.10.1965 ರಂದು ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾತಾ ವರ್ಗಾವಣೆ ಪತ್ರ ಪಡೆದಿರುತ್ತಾರೆ.

ನಂತರ ಕ್ರಯದಾರರಾದ ಶ್ರೀ ಬಸಪ್ಪ ರವರು 3ನೇ ಪುಸ್ತಕದ 74ನೇ ಸಂಪುಟದಲ್ಲಿ 49–52 ಬೇ ಪುಟದಲ್ಲಿ 47ನೇ ನಂಬರಾಗಿ ದಿ: 30.09.1976 ರಂದು ಅವರ ಮಕ್ಕಳಾದ ಶ್ರೀ ಬಿ.ಗುರುಮಲ್ಲಪ್ಪ ಮತ್ತು ಶ್ರೀ ಬಿ.ಶಿವಪ್ರಕಾಶ್ ಇವರ ಮೈನರ್ ಗಾರ್ಡಿಯನ್ ತಾಯಿ ಶ್ರೀಮತಿ ಗೌರಮ್ಮ ರವರಿಗೆ ವಿಲ್ ಯಾ ಮರಣ ಶಾಸನ ಪತ್ರ ನೀಡಿರುತ್ತಾರೆ.

ತದನಂತರ ಶ್ರೀ ಬಸಪ್ಪ ರವರು ದಿ: 29.10.2003 ರಂದು ಮರಣ ಹೊಂದಿರುವುದಾಗಿ ತಿಳಿಸಿ ಮರಣ ಸಮರ್ಥನ ಪತ್ರ ಸಲ್ಲಿಸಿರುತ್ತಾರೆ.

ಶ್ರೀ ಬಿ.ಗುರುಮಲ್ಲಪ್ಪ ಮತ್ತು ಶ್ರೀ ಬಿ.ಶಿವಪ್ರಕಾಶ್ ರವರು ಮೈಸೂರು ಮಹಾನಗರ ಪಾಲಿಕೆಯಲ್ಲಿ ವರ್ಗಾವಣೆ ಪತ್ರ ಪಡೆದಿರುತ್ತಾರೆ. ಈಗ ಶ್ರೀ ಬಿ.ಗುರುಮಲ್ಲಪ್ಪ ಮತ್ತು ಶ್ರೀ ಬಿ.ಶಿವಪ್ರಕಾಶ್ ರವರು ವರ್ಗಾವಣೆ/ಕ್ರಯಪತ್ರ ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮೈಸೂರು ನಗರದ ಮಾನಂದವಾಡಿ ರಸ್ತೆ ಬ್ಲಾಕ್–2 ಬಡಾವಣೆಯ ನಿ.ಸಂಖ್ಯೆ:100 ಅಳತೆ:**72x40** ಅಡಿ ನಿವೇಶನವನ್ನು, ನಂ:100, ಮುನಿಸಿಪಾಲ್ ನಂ:1153/1, ಬ್ಲಾಕ್ ನಂ:02 ವಿದ್ಯಾರಣ್ಯಪುರಂ, ಮೈಸೂರು. ರಲ್ಲಿ ವಾಸಿಸುವ ಶ್ರೀ ಬಿ.ಗುರುಮಲ್ಲಪ್ಪ ಮತ್ತು ಶ್ರೀ ಬಿ.ಶಿವಪ್ರಕಾಶ್ ರವರ ಹೆಸರಿಗೆ ಪೌತಿ ವರ್ಗಾವಣೆ ಮಾಡಿ ಕ್ರಯಪತ್ರ ನೀಡಲು ಯಾರಿಂದಾದರೂ ತಂಟೆ ತಕರಾರು/ಆಕ್ಷೇಪಣೆ ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 7 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ದೂರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್,
ವಲಯ ಕಛೇರಿ–1
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ
ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ,
ಹೂಟಗಳ್ಳಿ, ಮೈಸೂರು ಜಿಲ್ಲೆ –570018
Office Ph.No: 0821-2001737
http://www.hootagallicity.mrc.gov.in
ka.hootagalli.cmc@gmail.com

ನಂ:ನಸಹೂ/ತಾ.ಶಾ./ಸ.ಅ./ಸಿ.ಆರ್.11/2025–26 ದಿನಾಂಕ: 15.12.2025

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆಯ ಸಾಮಾನ್ಯ ನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–02ರ ನಿಯಮದಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರು kppp.karnataka.gov.in ಪೋರ್ಟಲ್ ಮೂಲಕ ಸದರಿ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಇಂಡೆಂಟ್ ನಂ. 1) DMA/2025-26/WS/ WORK_INDENT52763 ಅಂದಾಜು ಮೊತ್ತ ರೂ.50.00 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ.81,500/– ಮತ್ತು ಬೆಳವಾಡಿ ಕೆರೆಗೆ Electro Mechanical Equipements for ಎಸ್.ಟಿ.ಪಿ. ಸರಬರಾಜು ಮಾಡಿ ಅಳವಡಿಸಲು ಕೊಟೇಷನ್ ಕರೆಯಲಾಗಿದೆ. 2) DMA/2025-26/WT/WORK_IN-DENT 52711 ಇ.ಎಂ.ಡಿ. ಮೊತ್ತ ರೂ.1,000/– ಕ್ರ.ಸಂ.01ರ ಗುತ್ತಿಗೆದಾರರು ಟೆಂಡರ್ ಸಲ್ಲಿಸುವ ಕೊನೆಯ ದಿ: 29.12.2025 ಸಂಜೆ 5.00 ಗಂಟೆಗೆ, ಟೆಂಡರನ್ನು ತೆರೆಯುವ ದಿ: 30.10.2025, ಸಂಜೆ 5.01 ಗಂಟೆಗೆ. ಮತ್ತು ಕ್ರಸಂ. 02ರ ಗುತ್ತಿಗೆದಾರರು ಕೊಟೇಷನ್‌ಗಳಿಗೆ ಟೆಂಡರ್ ಸಲ್ಲಿಸುವ ದಿ: 30.12.2025, ಸಂಜೆ 5.00 ಗಂಟೆಗೆ ಟೆಂಡರನ್ನು ತೆರೆಯುವ ದಿ: 31.10.2025, ಸಂಜೆ 5.01 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಹೂಟಗಳ್ಳಿ

DIPR/DDMYS/1375/KSMCA/786/2025-26

Bharatiya Vidya Bhavan, Mysuru

Send your CV with recent photograph to
Email :
secretary@bvbmysuru.com

RECRUITMENT OF TEACHERS

CA-14, Hunsur Road, Vijayanagar
1st Stage, Mysuru.
Ph. 0821-2416106 / 2412141
Email: bvbmysore@gmail.com
Website : https//bvbmysuru.com

Teachers with relevant experience and proven professional competency required for the below mentioned posts.

- **Kindergarten Teachers:**
  - Any degree with Montessori / Nursery Training.
  - Experience of 2 years and above.
- **Primary School Teachers - English, Mathematics & Science**
  - Graduate degree in relevant subject.
  - D.Ed/B.Ed recognised by NCTE with one year teaching experience.
- **High School Teachers - English, Science & Social Science**
  - Graduate / Post Graduate Degee in relevant subject
  - B.Ed recognised by NCTE with three years teaching experience

Those with strong communication skills and proficient in their subject area may send their resume with recent photograph to secretary@bvbmysuru.com on or before 25th of December. Shortlisted candidates will be called for Demonstration class (Lesson plan and TLMs are compulsory) and personal interview.
Salary and perquisites offered that match to the best schools in Mysuru.

P.S. Ganapathy
Honorary Secretary